ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ
ಬೆಂಗಳೂರು

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರ ದತ್ತಾಂಶಗಳ ಅಧ್ಯಯನ ವರದಿ - 2024

ಕೆ. ಜಯಪ್ರಕಾಶ ಹೆಗ್ಡೆ
ಅಧ್ಯಕ್ಷರು

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ
ಬೆಂಗಳೂರು

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರ ದತ್ತಾಂಶಗಳ ಅಧ್ಯಯನ ವರದಿ - 2024

ನಂ.16/ಡಿ, 2ನೇ ಮಹಡಿ, ಡಿ.ದೇವರಾಜ ಅರಸು ಭವನ,
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-52
ಫೋನ್-29506667, ಇಮೇಲ್-kscbcb@gmail.com

ಸನ್ಮಾನ್ಯ ಡಿ.ದೇವರಾಜ ಅರಸು
ಮಾಜಿ ಮುಖ್ಯಮಂತ್ರಿಗಳು

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ–2024

ಕೆ.ಜಯಪ್ರಕಾಶ ಹೆಗ್ಡೆ BA, LLB
ಅಧ್ಯಕ್ಷರು

ಹೆಚ್.ಎಸ್.ಕಲ್ಯಾಣ ಕುಮಾರ್ BA, LLB
ಸದಸ್ಯರು

ಬಿ.ಎಸ್.ರಾಜ್‌ಶೇಖರ್ B.Com, LLB
ಸದಸ್ಯರು



ಕೆ.ಟಿ.ಸುವರ್ಣ, BA
ಸದಸ್ಯರು

ಅರುಣ ಕುಮಾರ್ BAL,LLB,MA.
ಸದಸ್ಯರು

ಶ್ರೀಮತಿ ಶಾರದಾ ನಾಯ್ಕ BSc, MA (MCJ)
ಸದಸ್ಯರು

ಕೆ.ಎ. ದಯಾನಂದ ಭಾ.ಆ.ಸೇ
ಸದಸ್ಯ ಕಾರ್ಯದರ್ಶಿ

ಮುನ್ನುಡಿ

"ಸಮಾನತೆಯೇ ಸ್ವಾತಂತ್ರ್ಯದ ಆತ್ಮ, ವಾಸ್ತವವಾಗಿ ಸಮಾನತೆಯಿಲ್ಲದೆ ಸ್ವಾತಂತ್ರ್ಯವೇ ಗೌಣವೆನಿಸುತ್ತದೆ"

"ವಾಸ್ತವದಲ್ಲಿ ಸಮಸಮಾಜದ ಕಲ್ಪನೆಯ ಬೇರುಗಳು ಬಲಗೊಳ್ಳುವುದೇ ಅಸಮ ಸಮಾಜದ ಬುನಾದಿಯ ಮೇಲೆ" ಎಂಬ ಪರಿಕಲ್ಪನೆಯನ್ನು ಬಲಗೊಳಿಸಲು 12 ನೇ ಶತಮಾನದಲ್ಲಿ ಸಮಾಜದ ಅಸಮಾನತೆ ಕುರಿತು ಬಸವಣ್ಣನವರು...

ಇವನಾರವ, ಇವನಾರವ, ಇವನಾರವೆಂದೆನಿಸದಿರಯ್ಯಾ ।
ಇವನಮ್ಮವ, ಇವನಮ್ಮವ ಇವನಮ್ಮವನೆಂದೆನಿಸಯ್ಯಾ ।
ಕೂಡಲಸಂಗಮದೇವ । ನಿಮ್ಮ ಮನೆಯ ಮಗನೆಂದೆನಿಸಯ್ಯಾ ।

ಎನ್ನುತ್ತಾ, ಕಲ್ಯಾಣದಲ್ಲಿ ಸಾರಿದ ಕ್ರಾಂತಿಯು ಸಹ ಸಮಸಮಾಜ ನಿರ್ಮಾಣದ ಚಿಂತನೆಯೇ ಆಗಿದೆ. ಈ ನೆಲದ ದಾರ್ಶನಿಕರು, ಸುಧಾರಕರು, ಚಿಂತಕರು, ಅರಸರು ಸಕಲ ಜನಾಂಗ, ಸಮುದಾಯಗಳ ಅಭ್ಯುದಯಕ್ಕಾಗಿ ಶ್ರಮಿಸುತ್ತಾ ಸಮಾನತೆಯ ದಾರಿ ತೋರಿಸುವ ಕಾಯಕ ಮಾಡಿದ್ದಾರೆ.

ಹಿಂದುಳಿದ ವರ್ಗಗಳ ಸಬಲೀಕರಣಕ್ಕೆ ಸರ್ಕಾರಗಳು ಕಾಲಕಾಲಕ್ಕೆ ಹಲವಾರು ಯೋಜನೆಗಳನ್ನು ರೂಪಿಸಿ ಮೀಸಲಾತಿ ಸೌಲಭ್ಯಗಳನ್ನು ನೀಡುವ ಮೂಲಕ ಸಮಾನತೆಯ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಈಗಲೂ ಪ್ರಯತ್ನಿಸುತ್ತಿವೆ. ಸ್ವಾತಂತ್ರ್ಯದ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಹಿಂದುಳಿದ ವರ್ಗಗಳ ಏಳಿಗೆಗಾಗಿ ಶ್ರಮಿಸಿದವರನ್ನು ಸ್ಮರಿಸುವುದು ನನ್ನ ಕರ್ತವ್ಯವೆಂದು ಬಾವಿಸುತ್ತೇನೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮೀಸಲಾತಿ ಪರಿಕಲ್ಪನೆಯನ್ನು ದೇಶದಲ್ಲಿ ಪ್ರಪ್ರಥಮ ಬಾರಿಗೆ ಸಾಕಾರ ಗೊಳಿಸಿದ ಕೀರ್ತಿ ಕೊಲ್ಹಾಪುರ ಮಹಾರಾಜ್ ಸಾಹುರವರಿಗೆ ಸಲ್ಲುತ್ತದೆ. 1902ರಲ್ಲಿ ಬ್ರಾಹ್ಮಣೇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿ ಸಮಸಮಾಜ ಕಟ್ಟುವ ಪ್ರಯತ್ನ ಮಾಡಿದರು.

ರಾಜ್ಯದಲ್ಲಿ ಮೈಸೂರಿನ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1918 ರಲ್ಲಿ ನ್ಯಾಯಮೂರ್ತಿ ಮಿಲ್ಲರ್ ರವರ ನೇತೃತ್ವದ ಸಮಿತಿ ರಚಿಸಿ ರಾಜ್ಯದ ಹಿಂದುಳಿದ ವರ್ಗಗಳನ್ನು ಗುರುತಿಸಲು ಶ್ರೀಕಾರ ಹಾಡಿದರು. ಮುಂದೆ ಶ್ರೀಯುತರು 1919 ರಲ್ಲಿ ನೀಡಿದ ಶಿಫಾರಸ್ಸನ್ನು ಆಧರಿಸಿ, ಸತತ ಒಂದು ದಶಕದ ಸುದೀರ್ಘ ಸಾಮಾಜಿಕ ಚಳುವಳಿಯ ನಂತರ ಹಲವರ ವಿರೋಧದ ನಡುವೆಯೂ 1921 ರಲ್ಲಿ ಮೊದಲ ಬಾರಿಗೆ ದಮನಿತ ಶೋಷಿತ ಹಿಂದುಳಿದವರಿಗೆ ರಾಜ್ಯದಲ್ಲಿ ಮೀಸಲಾತಿ ನೀಡುವ ಆಶಯಕ್ಕೆ ಧ್ವನಿಯಾದವರು ಮೈಸೂರಿನ ಮಹಾರಾಜರೆಂಬುದು ಇಲ್ಲಿ ಸ್ಮರಣೀಯ.

ಸ್ವಾತಂತ್ರ್ಯದ ನಂತರ ಸಾಮಾಜಿಕ, ಶೈಕ್ಷಣಿಕ ಕಾರಣಗಳಿಗಾಗಿ ಸಮಾಜದ ಕೆಲ ಹಿಂದುಳಿದ ಸಮುದಾಯಗಳು ಮುಂದುವರಿದ ಸಮುದಾಯಗಳ ಜೊತೆ ಸಮಾನ ನೆಲೆಯಲ್ಲಿ ಸ್ಪರ್ಧಿಸಲಾಗದೆ ಮತ್ತಷ್ಟು ಹಿಂದುಳಿಯುವ ಅಪಾಯವನ್ನು ಗ್ರಹಿಸಿದ ಅಖಂಡ ಸ್ವಾತಂತ್ರ್ಯ ಭಾರತದ ಸಮಸಮಾಜದ ಪರಿಕಲ್ಪನೆಯ ಕನಸನ್ನು ಕಂಡ ಚಿಂತಕರು, ಸುಧಾರಕರು, ಸಂವಿಧಾನ ಕರ್ತರು ಹಿಂದುಳಿದ ವರ್ಗಗಳ ಮೀಸಲಾತಿ ಕುರಿತು ಸಂವಿಧಾನದಲ್ಲಿಯೇ ಹಿಂದುಳಿದವರ ಸಬಲೀಕರಣದ ಆಶಯಗಳನ್ನು ಸೇರ್ಪಡೆಗೊಳಿಸಿದ್ದಾರೆ.

ದೇಶದ ಸಂವಿಧಾನ ರಚನಾ ಸಭೆಯಲ್ಲಿ ಮಾತನಾಡುತ್ತಾ ಡಾ॥ ಬಾಬಾ ಸಾಹೇಬ ಅಂಬೇಡ್ಕರ್ ರವರು ಸಮಾಜದ ಶೋಷಣೆಗೊಳಗಾದ ಹಿಂದುಳಿದ ಸಮುದಾಯಗಳು ಎದುರಿಸುತ್ತಿರುವ ಕರಾಳ ಸ್ಥಿತಿಯನ್ನು ತಮ್ಮ ಮಾತುಗಳಲ್ಲಿ ಅತ್ಯಂತ ನೋವಿನಿಂದ ವಿವರಿಸಿದ್ದಾರೆ.

"In India there are castes. The castes are anti-national. In the first place because they are about separation in social life. They generate jealousy and antipathy between castes. But we must overcome all these difficulties if we wish to become a nation in reality."

~ Dr BR Ambedkar in his final speech to the Constituent Assembly in 1949.

ಏಕೀಕೃತ ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಹಿಂದುಳಿದ ವರ್ಗಗಳ ಸಬಲೀಕರಣಕ್ಕೆ ಮುನ್ನುಡಿ ಬರೆದವರೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಡಿ. ದೇವರಾಜು ಅರಸುರವರು. ರಾಜ್ಯದ ದಮನಿತರು ಶೋಷಣೆಗೆ ಒಳಗಾದವರನ್ನು ಗುರುತಿಸಲು 1972ರಲ್ಲಿ ಕಾನೂನು ತಜ್ಞರಾದ ಶ್ರೀ ಎಲ್.ಜಿ. ಹಾವನೂರು ರವರ ನೇತೃತ್ವದ ಆಯೋಗ ರಚಿಸಿ ಹಿಂದುಳಿದ ಸಮುದಾಯಗಳ ಸಮಗ್ರ ಮಾಹಿತಿ ಸಂಗ್ರಹಣೆಗೆ ಅವರು ಮುನ್ನುಡಿ ಬರೆದರು.

ಸದರಿ ಆಯೋಗವು 1972 ರಿಂದ 1975 ವರೆಗೆ ರಾಜ್ಯದ ಉದ್ದಗಲಕ್ಕೂ ಸಂಚರಿಸಿ ಹಿಂದುಳಿದ ಸಮುದಾಯಗಳನ್ನು ಸಂಪರ್ಕಿಸಿ ನಿಖರ ಅಂಕಿಅಂಶಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿ, ವಿಶ್ಲೇಷಿಸಿ ಹಿಂದುಳಿದ ವರ್ಗಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದರು. **1. ಅತಿ ಹಿಂದುಳಿದ ಸಮುದಾಯಗಳಿಗೆ ಶೇ.20. 2. ಹಿಂದುಳಿದ ಜಾತಿಗಳಿಗೆ ಶೇ.10, 3. ಹಿಂದುಳಿದ ಬುಡಕಟ್ಟುಗಳಿಗೆ ಶೇ.05, 4. ವಿಶೇಷ ಗುಂಪುಗಳಿಗೆ ಶೇ.05 ಮೀಸಲಾತಿ ನೀಡುವಂತೆ** ಶಿಫಾರಸ್ಸು ಮಾಡಿದರು. ಇದನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ಹಿಂದುಳಿದ ವರ್ಗಗಳ ಸಮಗ್ರ ಅಧ್ಯಯನ ಎಂದು ಹೊಗಳಿದರೆ, ಅಂದಿನ ಮುಖ್ಯಮಂತ್ರಿಗಳು **ಹಿಂದುಳಿದ ವರ್ಗಗಳ ಬೈಬಲ್** ಎಂದೇ ಬಣ್ಣಿಸುತ್ತಾ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತಂದು ಹಿಂದುಳಿದ ವರ್ಗಗಳಿಗೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ನೀಡುವ ಮೂಲಕ ಶ್ರೀ ಎಲ್.ಜಿ.ಹಾವನೂರು ರವರಿಗೆ ಗೌರವ ಸಲ್ಲಿಸಿ ಹಿಂದುಳಿದ ಶೋಷಿತ ಸಮುದಾಯಗಳ ಧ್ವನಿಯಾದರು.

2014 ರಲ್ಲಿ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಶ್ರೀ ಹೆಚ್. ಕಾಂತರಾಜರವರನ್ನು ಕರ್ನಾಟಕ ರಾಜ್ಯ ಹಿಂದುಳಿದ ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಿದರು. ರಾಜ್ಯ ಸರ್ಕಾರವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವಂತೆ ಶ್ರೀ ಹೆಚ್. ಕಾಂತರಾಜ ರವರ ನೇತೃತ್ವದ ಆಯೋಗಕ್ಕೆ ನಿರ್ದೇಶನ ನೀಡಿದ ಮೇರೆಗೆ 2015 ರಲ್ಲಿ ರಾಜ್ಯಾದ್ಯಂತ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಸೇರಿದಂತೆ ರಾಜ್ಯದ ಬಹುತೇಕ ಎಲ್ಲಾ ಕುಟುಂಬಗಳು ಮತ್ತು ನಾಗರೀಕರನ್ನು ಒಳಗೊಂಡ ಒಟ್ಟಾರೆ 1,35,35,772 ಮನೆಗಳನ್ನು ಸಂಪರ್ಕಿಸಿ 5,98,14,942 ವ್ಯಕ್ತಿಗಳಿಂದ ದತ್ತಾಂಶವನ್ನು ಸಂಗ್ರಹಿಸಿದೆ.

2015 ನೇ ಸಾಲಿಗೆ ರಾಜ್ಯದ ಒಟ್ಟಾರೆ ಅಂದಾಜು 6.50 ಕೋಟಿ ಯೋಜಿತ ಜನಸಂಖ್ಯೆಯ (Projected population) ಶೇ.90 ಕ್ಕೂ ಹೆಚ್ಚಿನ ಜನಸಂಖ್ಯೆಗೆ ಸಂಬಂಧಿಸಿದ ದತ್ತಾಂಶಗಳನ್ನು ಸಂಗ್ರಹಿಸಿದ್ದು, ಇದನ್ನು ಆಧರಿಸಿ ಪ್ರಸ್ತುತ ಆಯೋಗದಿಂದ ರಾಜ್ಯದ ಹಿಂದುಳಿದ ವರ್ಗಗಳ ಸಾಮಾಜಿಕ ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ಮಾನದಂಡಗಳನ್ನು ರೂಪಿಸಲು ವಿಷಯ ತಜ್ಞರ ಸಭೆಯಲ್ಲಿ ಸವಿಸ್ತಾರವಾಗಿ ಚರ್ಚಿಸಿ ಮಾನದಂಡಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಮಾನದಂಡಗಳಿಗೆ ವೈಜ್ಞಾನಿಕವಾಗಿ ಮೌಲ್ಯಾಂಕಗಳನ್ನು ನಿಗದಿಪಡಿಸಿ ಇದರ ಆಧಾರದ ಮೇಲೆ ರಾಜ್ಯದ ಹಿಂದುಳಿದ ಜಾತಿಗಳನ್ನು ಪ್ರವರ್ಗವಾರು ಪುನರ್ ವಿಂಗಡಿಸಲಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ – 2015 ರಲ್ಲಿ ಸಂಗ್ರಹಿಸಿದ ದತ್ತಾಂಶದ ಆಧಾರದ ಮೇಲೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಬಿಸಿಡಬ್ಲ್ಯೂ 286 ಬಿಸಿಎ 2021 ದಿನಾಂಕ 17.07.2023 ರಲ್ಲಿ ಆಯೋಗಕ್ಕೆ ನಿರ್ದೇಶನ ನೀಡುವುದರ ಮೂಲಕ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಕೊಡಿಸುವಂತಹ ಒಂದು ಸಣ್ಣ ಪ್ರಯತ್ನವನ್ನು ಮಾಡಲು ನನಗೆ ಮತ್ತು ಆಯೋಗದ ಸದಸ್ಯರಿಗೆ ಸದಾವಕಾಶವನ್ನು ನೀಡಿದಂತಹ ರಾಜ್ಯ ಸರ್ಕಾರಕ್ಕೆ ನಾನು ಚಿರಋಣಿಯಾಗಿದ್ದೇನೆ.

ಪ್ರಸ್ತುತ ದತ್ತಾಂಶ ಆಧಾರಿತ ವರದಿ ತಯಾರಿಕೆಯ ಚರ್ಚೆಯಲ್ಲಿ ಸಕ್ರಿಯರಾಗಿ ಭಾಗವಹಿಸಿ ಪ್ರಮುಖ ಸಲಹೆಯೊಂದಿಗೆ ಕರ್ತವ್ಯ ನಿರ್ವಹಿಸಿದ ಆಯೋಗದ ಸದಸ್ಯರುಗಳಾದ ಶ್ರೀ ಹೆಚ್.ಎಸ್.ಕಲ್ಯಾಣಕುಮಾರ್, ಶ್ರೀ.ಬಿ.ಎಸ್. ರಾಜಶೇಖರ್, ಶ್ರೀ ಕೆ.ಟಿ ಸುವರ್ಣ, ಶ್ರೀ ಅರುಣ್ ಕುಮಾರ್ ಹಾಗೂ ಶ್ರೀಮತಿ ಶಾರದಾ ನಾಯ್ಕ ರವರುಗಳಿಗೆ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ.

ಸಮೀಕ್ಷೆಯಲ್ಲಿ ಸಂಗ್ರಹಿಸಿದ ದತ್ತಾಂಶಗಳ ಆಧಾರದ ಮೇಲೆ ಹಿಂದುಳಿದ ಜಾತಿ/ ಸಮುದಾಯಗಳ ಹಿಂದುಳಿದಿರುವಿಕೆಯನ್ನು ವೈಜ್ಞಾನಿಕವಾಗಿ ನಿಗದಿಪಡಿಸಲು ಅನುಸರಿಸಬೇಕಾದ ವಿಧಾನ, ವರದಿಯಲ್ಲಿ ಅಳವಡಿಸಬೇಕಾದ ಪ್ರಮುಖ ಅಂಶಗಳ ಬಗ್ಗೆ ತಮ್ಮ ಕರ್ತವ್ಯದ ಒತ್ತಡದ ನಡುವೆಯೂ ಸಭೆಗೆ ಹಾಜರಾಗಿ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ನೀಡುವುದರೊಂದಿಗೆ ಕರ್ತವ್ಯ ನಿರ್ವಹಿಸಿದ ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರು ಹಾಗೂ ಆಯೋಗದ ಸದಸ್ಯ ಕಾರ್ಯದರ್ಶಿಗಳೂ ಆದ ಶ್ರೀ ಕೆ.ಎ. ದಯಾನಂದ ಭಾ.ಆ.ಸೇ ರವರಿಗೆ ನನ್ನ ಅಭಿನಂದನೆಗಳು.

ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸಲು ತೆಗೆದುಕೊಳ್ಳಬೇಕಾದ ಮಾನದಂಡಗಳು ಹಾಗೂ ಮೌಲ್ಯಾಂಕ ನಿಗದಿಪಡಿಸುವಿಕೆಯಲ್ಲಿ ಅಮೂಲ್ಯ ಸಲಹೆ ಮತ್ತು ಮಾರ್ಗದರ್ಶನ ನೀಡಿದ ತಜ್ಞರ ಸಮಿತಿಯ ಸದಸ್ಯರುಗಳು ಹಾಗೂ ವರದಿಯನ್ನು ಅಂತಿಮಗೊಳಿಸಲು ಪ್ರತಿ ಹಂತದಲ್ಲಿಯೂ ಸಹಕರಿಸಿದ ಶ್ರೀಮತಿ ಛಾಯಾ ಕೆ.ದೇಗಾಂವಕರ್ ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಹಿಂದುಳಿದ ವರ್ಗಗಳ ಆಯೋಗದ ಅಧಿಕಾರಿಗಳಾದ ಶ್ರೀ ಜಿ. ಜಗದೀಶ್, ಕಾರ್ಯದರ್ಶಿ(ಆಡಳಿತ) ಹಾಗೂ ಶ್ರೀಮತಿ ಜ್ಯೋತಿ ಎಸ್. ಜೆನ್ನಿ, ಕಾರ್ಯದರ್ಶಿ(ಸಾಂಖ್ಯಿಕ) ಇವರು ವರದಿ ಸಿದ್ಧಪಡಿಸುವ ಪ್ರತಿ ಹಂತದಲ್ಲಿ ನೀಡಿದ ಬೆಂಬಲ ಮತ್ತು ಕರ್ತವ್ಯ ನಿಷ್ಠೆಗೆ ನನ್ನ ಅಭಿನಂದನೆಗಳು. ನನ್ನ ಅಧಿಕಾರಾವಧಿಯಲ್ಲಿ ಆಯೋಗಕ್ಕೆ ಸಂಬಂಧಿಸಿದಂತೆ ವರದಿ ತಯಾರಿಕೆಯಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕರ್ತವ್ಯ ನಿರ್ವಹಿಸಿದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನನ್ನ ಅಭಿನಂದನೆಗಳು.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ದತ್ತಾಂಶದ ಆಧಾರದ ಮೇಲೆ ತಯಾರಿಸಿದ ವರದಿಯನ್ನು ಹೊರತುಪಡಿಸಿ ಪ್ರಸ್ತುತ ಆಯೋಗವು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಶೋಷಿತ ಮತ್ತು ಅತಿ ಸಣ್ಣ ಸಮುದಾಯಗಳನ್ನು ಗುರುತಿಸಿ ರಾಜ್ಯದ ಮೀಸಲಾತಿ ಪಟ್ಟಿಯಲ್ಲಿ ಸೇರಿಸುವ ಹಾಗೂ ಜಾತಿಯೇ ಗೊತ್ತಿಲ್ಲದ ಅನಾಥ ಮಕ್ಕಳಿಗೆ ಮೀಸಲಾತಿ ಕೊಡಿಸುವ ಬಗ್ಗೆ ಈಗಾಗಲೇ ಶಿಫಾರಸ್ಸು ಮಾಡಿದೆ. ಶೋಷಿತರು, ಹಿಂದುಳಿದ ಸಮುದಾಯಗಳ ಬಗ್ಗೆ ಕಳಕಳಿಯಿರುವ ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮಎಲ್ಲಾ ವರದಿಗಳನ್ನು ಸ್ವೀಕರಿಸಿ, ಜಾರಿಗೊಳಿಸುವ ಮೂಲಕ ರಾಜ್ಯದ ಶೋಷಿತ ದಮನಿತರ ಸಮುದಾಯಗಳಿಗೆ ಧ್ವನಿಯಾಗಿ ಸಾಮಾಜಿಕ ನ್ಯಾಯ ಕೊಡಿಸುವಂತೆ ಕೋರುತ್ತೇನೆ. ಭಾರತ ಗಣರಾಜ್ಯದ ಅಮೃತ ಮಹೋತ್ಸವದ ವರ್ಷದಲ್ಲಿ ರಾಜ್ಯದ ಸಮಸ್ತ ಜನರಿಗೆ **'ಸಮಪಾಲು ಸಮಬಾಳು'** ಎನ್ನುವ ಉಕ್ತಿಯಂತೆ ಸಮಾಜದ ಕಟ್ಟಕಡೆಯ ಸಮುದಾಯದ ಅಭಿವೃದ್ಧಿಗೆ ಮೀಸಲಾತಿ ಸಿಗುವಂತಾಗಲಿ ಎನ್ನುವುದು ನನ್ನ ಆಶಯ.

"ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ" – ಕನಕದಾಸರು

ಬೆಂಗಳೂರು
ದಿನಾಂಕ: 22–02–2024

ಕೆ. ಜಯಪ್ರಕಾಶ ಹೆಗ್ಡೆ
ಅಧ್ಯಕ್ಷರು

ಪರಿವಿಡಿ

ಕ್ರ. ಸಂ	ವಿಷಯ ಸೂಚಿ	ಪುಟ ಸಂಖ್ಯೆ
	ಭಾಗ-1	
ಅಧ್ಯಾಯ - 1	ಪೀಠಿಕೆ	**1-2**
ಅಧ್ಯಾಯ - 2	ಹಿನ್ನೆಲೆ	**3-5**
ಅಧ್ಯಾಯ - 3	ಹಿಂದುಳಿದ ವರ್ಗಗಳ ಆಯೋಗದ ರಚನೆ	**6-7**
ಅಧ್ಯಾಯ - 4	ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಹಿಂದಿನ ಆಯೋಗಗಳ ಸಂಕ್ಷಿಪ್ತ ಅವಲೋಕನ	**8-13**
ಅಧ್ಯಾಯ- 5	ಪ್ರಸ್ತುತ ಆಯೋಗದ ರಚನೆ ಮತ್ತು ಕೈಗೊಂಡ ಕಾರ್ಯಗಳು	**14-16**
ಅಧ್ಯಾಯ - 6	ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿ	**17**
ಅಧ್ಯಾಯ - 7	ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ದತ್ತಾಂಶ ಸಂಗ್ರಹಣೆಯ ನಮೂನೆಗಳು ಮತ್ತು ಪ್ರಶ್ನಾವಳಿಗಳು	**18-19**
ಅಧ್ಯಾಯ - 8	ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರಲ್ಲಿ ಸಂಗ್ರಹಿಸಿದ ಜಾತಿವಾರು/ಸಮುದಾಯವಾರು ಜನಸಂಖ್ಯೆಯ ವಿವರಗಳು	**20-95**
	ಭಾಗ-2 (ಅಧ್ಯಯನ ವರದಿ)	
ಅಧ್ಯಾಯ - 1	ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಮಾನದಂಡಗಳು	**96-102**
ಅಧ್ಯಾಯ - 2	ಸೂಚಕಗಳು ಮತ್ತು ಮೌಲ್ಯಾಂಕಗಳು	**103-111**
ಅಧ್ಯಾಯ - 3	ಜಾತಿ/ಸಮುದಾಯಗಳ ಪ್ರವರ್ಗವಾರು ವರ್ಗೀಕರಣ	**112-163**
ಅಧ್ಯಾಯ - 4	ಹೆಚ್ಚುವರಿಯಾಗಿ ಜಾತಿ/ಸಮುದಾಯಗಳನ್ನು ಮೀಸಲಾತಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವ ಬಗ್ಗೆ ಸ್ಪಷ್ಟೀಕರಣ	**164-170**
ಅಧ್ಯಾಯ- 5	ಶೇಕಡವಾರು ಮೀಸಲಾತಿ ಪ್ರಮಾಣದ ಹಂಚಿಕೆ	**171-172**
ಅಧ್ಯಾಯ - 6	ಶಿಫಾರಸ್ಸುಗಳು	**173-176**
ಅನುಬಂಧ-1 - ಮಾಹಿತಿ ಕೈಪಿಡಿ		**177-271**
ಅನುಬಂಧ-2 - ಜಾತಿಗಳಿಗೆ ನೀಡಲಾಗಿರುವ ಸಂಕೇತ ಸಂಖ್ಯೆ ಕುರಿತು ಆಯೋಗದ ತೀರ್ಮಾನ		**272-295**

ಭಾಗ-1

ಅಧ್ಯಾಯ -1

ಪೀಠಿಕೆ

ಭಾರತ ದೇಶವು ಸ್ವಾತಂತ್ರ್ಯವನ್ನು ಪಡೆದು 75 ವರ್ಷಗಳನ್ನು ಪೂರೈಸಿರುವ ಶುಭ ಸಂದರ್ಭದಲ್ಲಿ ದೇಶವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿಯೂ ಅಭಿವೃದ್ಧಿಶೀಲ ರಾಷ್ಟವಾಗಿ ಹೊರಹೊಮ್ಮುತ್ತಿದೆ. ಜಾಗತಿಕ ಮಟ್ಟದಲ್ಲಿಯೂ ಸಹ ಭಾರತ ಮಹತ್ತರ ಸಾಧನೆಯನ್ನು ಸಾಧಿಸುವತ್ತ ಹೆಜ್ಜೆ ಹಾಕಿರುವುದು ಒಂದು ಹೆಮ್ಮೆಯ ವಿಷಯವೇ ಸರಿ. ಸ್ವಾತಂತ್ರ್ಯ ಪೂರ್ವದಿಂದಲೂ ಭಾರತ ದೇಶವು ವೈವಿಧ್ಯಮಯ ಸಾಮಾಜಿಕ ವ್ಯವಸ್ಥೆಯನ್ನು ಮೈಗೂಡಿಸಿಕೊಂಡು, ವಿಶಿಷ್ಟವಾದ ಜೀವನ ಶೈಲಿಯನ್ನು ರೂಪಿಸಿಕೊಂಡಿದೆ.

ದೇಶದಲ್ಲಿ ಪ್ರತಿಯೊಬ್ಬ ನಾಗರೀಕನಿಗೂ ಸಮಾನವಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ನ್ಯಾಯವನ್ನು ಕೊಟ್ಟಾಗ ಮಾತ್ರ ಸಮಸಮಾಜದ ನಿರ್ಮಾಣ ಮಾಡಲು ಸಾಧ್ಯ ಎಂಬುದು ಹಲವಾರು ಸಮಾಜ ಚಿಂತಕರ ಚಿಂತನೆಯಾಗಿತ್ತು. ಈ ನಿಟ್ಟಿನಲ್ಲಿ ಸ್ವಾತಂತ್ರ್ಯ ದೊರೆತ ನಂತರ ನಮ್ಮ ದೇಶದ ಸಂವಿಧಾನವು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ನೀಡುವಂತಹ ರಾಜ್ಯನೀತಿಯ ನಿರ್ದೇಶಕ ತತ್ವಗಳನ್ನು ಅಳವಡಿಸಿಕೊಂಡಿದೆ.

ಸಂವಿಧಾನದ ಆಶಯವು ರಾಷ್ಟ್ರದ ಪ್ರತಿಯೊಬ್ಬ ನಾಗರೀಕರಿಗೂ ಸಮಾನವಾದ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟಿದೆ. ಆದರೂ ಭಾರತ ದೇಶದ ಕೆಲವೆಡೆಗಳಲ್ಲಿ ಪ್ರಾದೇಶಿಕ, ಸಾಮಾಜಿಕ ಅಸಮಾನತೆಗಳನ್ನು ನಾವು ಈಗಲೂ ಸಹ ಕಾಣಬಹುದಾಗಿದೆ. ವಯಸ್ಸು, ಲಿಂಗ, ಮತ-ಪಂಥಗಳ ಆಧಾರದಲ್ಲಿ ಸಾಮಾಜಿಕ ವ್ಯವಸ್ಥೆಯು ಅಸಮವಾಗುವುದನ್ನು ತಡೆಯಲು ಕಾಲಕಾಲಕ್ಕೆ ಆಡಳಿತ ವ್ಯವಸ್ಥೆಯು ಸುಧಾರಣಾ ಕ್ರಮಗಳನ್ನು ರೂಪಿಸಿ ಜಾರಿಗೊಳಿಸುತ್ತಿದೆ.

ದೇಶದ ನಾಗರೀಕರಿಗೆ ಸಾಮಾಜಿಕ ನ್ಯಾಯವನ್ನು ನೀಡುವ ಮಹತ್ತರ ಆಕಾಂಕ್ಷೆಯನ್ನು ಮತ್ತು ಸಮಾನತೆಯ ಪರಿಕಲ್ಪನೆಯನ್ನು ಹಲವಾರು ಸಮಾಜ ಸುಧಾರಕರು ಹಾಗೂ ದಾರ್ಶನಿಕರು ಪ್ರತಿಪಾದಿಸಿದ್ದಾರೆ. ಆಯಾ ಕಾಲಘಟ್ಟಕ್ಕೆ ತಕ್ಕಂತೆ ಆಳುವ ಸರ್ಕಾರಗಳು ಎಲ್ಲಾ ನಾಗರೀಕರಿಗೆ ಸಮಾನ ಸ್ಥಾನಮಾನ ಹಾಗೂ ಅವಕಾಶಗಳನ್ನು ಕಲ್ಪಿಸಿಕೊಡಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾ ಬಂದಿರುತ್ತದೆ. ಈ ನಿಟ್ಟಿನಲ್ಲಿ ಭಾರತದ ಸಂವಿಧಾನದ 15ನೇ ಪರಿಚ್ಛೇದವು ಮತ, ಕುಲ, ಜಾತಿ, ಲಿಂಗ ಹಾಗೂ ಜನ್ಮಸ್ಥಳಗಳ ಆಧಾರಗಳ ಮೇಲೆ ಯಾವುದೇ ತಾರತಮ್ಯ ಮಾಡುವುದನ್ನು ನಿಷೇದಿಸಿದೆ. ಸಂವಿಧಾನದ ಪರಿಚ್ಛೇದ 16ರಲ್ಲಿ ನಾಗರೀಕರಿಗೆ ಉದ್ಯೋಗ ವಲಯದಲ್ಲಿಯೂ ಸಹ ಸಮಾನ ಅವಕಾಶಗಳನ್ನು ಒದಗಿಸಿಕೊಟ್ಟಿರುತ್ತದೆ.

ಸಂವಿಧಾನದ ಆಶಯದಂತೆ ನಾಗರೀಕರಿಗೆ ಸಮಾನ ಅವಕಾಶಗಳನ್ನು ಒದಗಿಸಿಕೊಟ್ಟಿದ್ದರೂ ಸಮಾಜದಲ್ಲಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಅಸಮತೋಲನ ಮುಂದುವರೆಯುತ್ತಲೇ ಬಂದಿರುತ್ತದೆ. ಒಂದು ವರ್ಗವನ್ನು ಸಾಮಾಜಿಕವಾಗಿ ಇನ್ನೊಂದು ವರ್ಗಗಳಿಗೆ ಹೋಲಿಸಿದಾಗ ನಾಗರೀಕರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವುದು ಕಂಡುಬಂದಲ್ಲಿ ಅಂತಹ ಒಂದು ವರ್ಗವನ್ನು ಹಿಂದುಳಿದ ವರ್ಗವೆಂದು ಪರಿಗಣಿಸಲಾಗುತ್ತದೆ. ಇದನ್ನು ನಮ್ಮ ಸಂವಿಧಾನದಲ್ಲಿ

ನಿಖರವಾಗಿ ವ್ಯಾಖ್ಯಾನಿಸಲಾಗಿಲ್ಲದಿದ್ದರೂ ಸಹ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯ ಪರಿಕಲ್ಪನೆಯ ಅಡಿಯಲ್ಲಿ ಅನುಚ್ಛೇದ 15 (4) ಮತ್ತು 16(4) ಹಾಗೂ ಪರಿಚ್ಛೇದ 338 (3) ಮತ್ತು 340 ರಲ್ಲಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಸಾಮಾಜಿಕ ಸಮಾನತೆಯನ್ನು ತರುವ ಪರಿಕಲ್ಪನೆಗಳನ್ನು ಸಂವಿಧಾನವು ಅಳವಡಿಸಿಕೊಂಡಿರುತ್ತದೆ.

ಸಮಾಜದಲ್ಲಿ ವಿವಿಧ ವರ್ಗದ ನಾಗರೀಕರ ಹಿಂದುಳಿದಿರುವಿಕೆಯನ್ನು ನಿಖರವಾಗಿ ಕಂಡು ಹಿಡಿದು ಸಾಮಾಜಿಕ ಅಸಮತೋಲನವನ್ನು ನಿವಾರಿಸಿ, ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವ ಸಂವಿಧಾನದ ಉದ್ದೇಶವನ್ನು ಈಡೇರಿಸುವ ದೃಷ್ಟಿಯಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇಂದ್ರ ಸಾಹ್ನಿ ಮತ್ತು ಇತರರು v/s ಭಾರತ ಒಕ್ಕೂಟ ಪ್ರಕರಣದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ನಿರ್ದೇಶನವನ್ನು ನೀಡಿ ಕೇಂದ್ರ ಹಾಗೂ ರಾಜ್ಯದಲ್ಲಿ ಒಂದು ಶಾಶ್ವತ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಬೇಕೆಂದು ಆದೇಶಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ 1995ರ ಅಧಿನಿಯಮವನ್ನು ಜಾರಿಗೆ ತಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ "ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ" ವನ್ನು ರಚಿಸಲಾಗಿರುತ್ತದೆ.

ಅಧ್ಯಾಯ –2

ಹಿನ್ನೆಲೆ

ಭಾರತದಲ್ಲಿನ ಜಾತಿ ವ್ಯವಸ್ಥೆಯು ಮತ, ಪಂಥ, ಭಾಷೆ, ಮತ್ತು ಜಾತಿಗಳ ಆಧಾರದ ಮೇಲೆ ವರ್ಗೀಕರಣವಾಗಿರುತ್ತದೆ. ಇವುಗಳ ಆಧಾರದ ಮೇಲೆ ಸಾಮಾಜಿಕ ವ್ಯವಸ್ಥೆಯು ರೂಪುಗೊಂಡಿರುವುದನ್ನು ಪ್ರಾಚೀನ ಕಾಲದಿಂದಲೂ ಸಹ ನೋಡಬಹುದಾಗಿದೆ. ವಿವಿಧ ರೀತಿಯ ಆಳ್ವಿಕೆಗಳ ಪ್ರತಿಯೊಂದು ಕಾಲಘಟ್ಟದಲ್ಲಿಯೂ ಸಾಮಾಜಿಕ ವ್ಯವಸ್ಥೆಯು ರೂಪಾಂತರಗೊಳ್ಳುತ್ತಾ ಬಂದಿರುತ್ತದೆ.

ಕೊಲ್ಲಾಪುರದ ಅರಸು (ಭಾರತ ದೇಶದ ಇಂದಿನ ಮಹಾರಾಷ್ಟ್ರ) ಸಾಹು ಮಹಾರಾಜ್ ರವರು 1902ರಲ್ಲಿ ಸಮಾನತೆಯನ್ನು ತರುವ ದೃಷ್ಟಿಯಿಂದ ಬ್ರಾಹ್ಮಣರನ್ನು ಹೊರತುಪಡಿಸಿ ಅತೀ ಹಿಂದುಳಿದ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಿ ವಿದ್ಯಾರ್ಥಿ ವೇತನ ಮತ್ತು ಉಚಿತ ವಸತಿ ವ್ಯವಸ್ಥೆಯನ್ನು ಕಲ್ಪಿಸಿದ್ದರು. ಆದುದರಿಂದ ಸಾಹು ಮಹಾರಾಜ್ ರವರನ್ನು ಮೀಸಲಾತಿಯ ಪಿತಾಮಹ (Father of Reservation) ಎಂದು ಕರೆಯಲಾಗುತ್ತದೆ.

ಮೀಸಲಾತಿಯ ಪರಿಕಲ್ಪನೆ ಹಾಗೂ ಮೀಸಲಾತಿ ಜಾರಿಗೊಳಿಸುವ ಚಿಂತನೆಯು ಸ್ವಾತಂತ್ರ್ಯ ಪೂರ್ವದಲ್ಲಿಯೇ ಭಾರತದಲ್ಲಿ ಪ್ರಾರಂಭವಾಗಿತ್ತು. 1882ರಲ್ಲಿ ಬರಹಗಾರರು ಹಾಗೂ ಸಮಾಜ ಸುಧಾರಕರಾದ ಜ್ಯೋತಿರಾವ್ ಬಾ ಪುಲೆ ರವರು ಜಾತಿ ಆಧಾರಿತ ಮೀಸಲಾತಿ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆನ್ನುವ ಮಹತ್ತರ ಚಿಂತನೆಯನ್ನು ಹೊಂದಿದ್ದರು. ಈ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಅಂದಿನ ಬ್ರಿಟಿಷ್ ಅಧಿಕಾರಿಯಾದ N. William Hunter ರವರಿಗೆ ಮನವರಿಕೆ ಮಾಡಿಕೊಟ್ಟ ಪರಿಣಾಮ ನಿಧಾನಗತಿಯಲ್ಲಿ ಭಾರತದಲ್ಲಿ ಮೀಸಲಾತಿಯನ್ನು ಜಾರಿಗೊಳಿಸುವ ಪ್ರಯತ್ನವು ಪ್ರಾರಂಭವಾಯಿತು. ಜ್ಯೋತಿರಾವ್ ಬಾ ಪುಲೆರವರ ಪ್ರಯತ್ನದ ಫಲವಾಗಿ 1933ರಲ್ಲಿ ಅಂದಿನ ಬ್ರಿಟಿಷ್ ಪ್ರಧಾನಮಂತ್ರಿಯಾದ Ramsay Macdonald ರವರು ಜಾತಿ ಆಧಾರಿತ ಮೀಸಲಾತಿಯ ಮಸೂದೆಯನ್ನು ಮಂಡಿಸುವ ಮೂಲಕ ಪ್ರಪ್ರಥಮ ಬಾರಿಗೆ ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ ಮೀಸಲಾತಿಯನ್ನು ಜಾರಿಗೆ ತರಲಾಯಿತು.

ದೇಶದ ವಿವಿಧ ರಾಜ್ಯಗಳಲ್ಲಿ ಇರುವಂತಹ ಪ್ರಾದೇಶಿಕ ಅಸಮಾನತೆಗಳು ಕರ್ನಾಟಕ ರಾಜ್ಯದಲ್ಲಿಯೂ ಇರುವುದನ್ನು ನಾವು ಗುರುತಿಸಬಹುದಾಗಿರುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ರಾಜ್ಯದ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸಿಕೊಡಬೇಕೆಂಬ ಮಹತ್ತರ ಚಿಂತನೆಯೊಂದಿಗೆ ಮೈಸೂರು ರಾಜ್ಯದ ಮುಖ್ಯ ನ್ಯಾಯಮೂರ್ತಿಯಾಗಿದ್ದಂತಹ ಶ್ರೀ ಲೆಸ್ಲಿ ಮಿಲ್ಲರ್ ರವರ ನೇತೃತ್ವದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಎಜಿ 308 ದಿನಾಂಕ: 23.08.1918 ರಲ್ಲಿ ಐದು ಸದಸ್ಯರುಗಳುಳ್ಳ ಒಂದು ಸಮಿತಿಯನ್ನು ರಚಿಸಿದರು.

ಸದರಿ ಸಮಿತಿಯು ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಶೇಕಡ 75 ರಷ್ಟು ಮೀಸಲಾತಿ ನೀಡಬೇಕೆಂದು ದಿನಾಂಕ: 19.07.1919 ರಲ್ಲಿ ವರದಿ ನೀಡಿದ್ದರಿಂದ ಮೈಸೂರು ಮಹಾರಾಜರು 1921ರಲ್ಲಿ ಮೈಸೂರು ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಮೀಸಲಾತಿಯನ್ನು ಜಾರಿಗೊಳಿಸಿದ್ದರು. ಈ ಸಮಿತಿಯನ್ನು ಮಿಲ್ಲರ್ ಸಮಿತಿಯೆಂದು ಈಗಲೂ ಸಹ ಗುರುತಿಸಲಾಗುತ್ತಿದೆ.

ಭಾರತದ ಸಂವಿಧಾನದಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸಮಾಜದ ಕೆಲವು ನಿರ್ದಿಷ್ಟ ಜನವರ್ಗಗಳ ಹಿಂದುಳಿದಿರುವಿಕೆಯನ್ನು ಗುರುತಿಸಿ ಇತರ ಹಿಂದುಳಿದ ವರ್ಗಗಳು ಎಂದು ಪರಿಗಣಿಸಲಾಗಿದೆ. ಭಾರತೀಯ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ನಿರ್ವಹಿಸುವ ಒಬಿಸಿಗಳ ಪಟ್ಟಿಯಲ್ಲಿ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಂಶಗಳನ್ನು ಅವಲಂಬಿಸಿ, ಕಾಲಕಾಲಕ್ಕೆ ಜಾತಿಗಳು ಮತ್ತು ಸಮುದಾಯಗಳನ್ನು ಸೇರಿಸಲಾಗುತ್ತಿದೆ ಅಥವಾ ತೆಗೆದು ಹಾಕಲಾಗುತ್ತಿದೆ.

ಭಾರತ ಸರ್ಕಾರವು, ಸಂವಿಧಾನದ 340ನೇ ಅನುಚ್ಛೇದದ ಅಡಿಯಲ್ಲಿ 1953ರ ಜನವರಿ 29 ರಂದು ಶ್ರೀ ಕಾಕಾ ಕಾಲೇಲ್ಕರ್ ಅವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ಸ್ಥಾಪಿಸಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಮೀಸಲಾತಿ ಒಳಪಡಿಸುವ ನಿಟ್ಟಿನಲ್ಲಿ ಸರ್ಕಾರಕ್ಕೆ ವರದಿ ತಯಾರಿಸಿ ಶಿಫಾರಸ್ಸು ಮಾಡುವಂತೆ ಆದೇಶಿಸಿತು.

ಸದರಿ ಆಯೋಗವು ಮಾರ್ಚ್ 30, 1955 ರಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಸದರಿ ವರದಿಯಲ್ಲಿ, ಸಮಾಜದಲ್ಲಿ 2,399 ಜಾತಿಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿವೆ. ಎಂದು ಆಯೋಗವು ಪಟ್ಟಿ ಮಾಡಿ, ಅದರಲ್ಲಿ 837 ಜಾತಿಗಳು ಅತ್ಯಂತ ಹಿಂದುಳಿದ ಜಾತಿಗಳಾಗಿವೆ ಹಾಗೂ ಸದರಿ ಜಾತಿಗಳ ಹಿಂದುಳಿದಿರುವಿಕೆಯ ಪ್ರಮುಖ ಕಾರಣವೆಂದರೆ ಜಾತಿ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಮತ್ತು ಸರ್ಕಾರಿ ಸೇವೆಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೇರಿದಂತೆ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಶಿಫಾರಸ್ಸು ಮಾಡಿರುತ್ತದೆ.

ಸದರಿ ಆಯೋಗದ ಒಟ್ಟು 11 ಸದಸ್ಯರ ಪೈಕಿ 05 ಸದಸ್ಯರು ಆಯೋಗದ ವರದಿಗೆ ಭಿನ್ನಾಭಿಪ್ರಾಯದ ಟಿಪ್ಪಣಿಯನ್ನು ನೀಡಿರುತ್ತಾರೆ. ತದನಂತರ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ವರ್ಗೀಕರಣಕ್ಕಾಗಿ ಆಯೋಗವು ಸರಿಯಾದ ಮಾನದಂಡಗಳನ್ನು ಅಳವಡಿಸಿಕೊಂಡಿರುವುದಿಲ್ಲವೆಂದು ಹಲವಾರು ಆಯಾಮಗಳಲ್ಲಿ ಪರಿಶೀಲಿಸಿದ ಸರ್ಕಾರವು ಅಂತಿಮವಾಗಿ ಸದರಿ ವರದಿಯನ್ನು 1961ರಲ್ಲಿ ತಿರಸ್ಕರಿಸಿತು.

ಭಾರತದಲ್ಲಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವುಗಳಿಗೆ ಮೀಸಲಾತಿ ಒದಗಿಸಿಕೊಡಬೇಕೆಂಬ ಸದುದ್ದೇಶದಿಂದ 1979 ರಲ್ಲಿ ಅಂದಿನ ಪ್ರಧಾನ ಮಂತ್ರಿಯವರಾದ ಮೊರಾರ್ಜಿ ದೇಸಾಯಿ ರವರು ಬಿ.ಪಿ. ಮಂಡಲ್ ರವರ ನೇತೃತ್ವದಲ್ಲಿ ಆಯೋಗವನ್ನು ರಚನೆ ಮಾಡಿ ಹಿಂದುಳಿದ ವರ್ಗಗಳನ್ನು ವ್ಯಾಖ್ಯಾನಿಸುವ ಮಾನದಂಡಗಳನ್ನು ನಿರ್ಧರಿಸುವುದು ಮತ್ತು ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರ ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಗತಿಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡುವಂತೆ ಕೋರಲಾಗಿತ್ತು.

ಆಯೋಗವು ಸರ್ಕಾರ ಸೂಚಿಸಿರುವ ಎಲ್ಲಾ ಆಯಾಮಗಳಲ್ಲೂ ಪರಿಶೀಲನೆ ನಡೆಸಿ ಹಿಂದುಳಿದ ವರ್ಗಗಳಿಗೆ ಕೇಂದ್ರ ಸರ್ಕಾರದ ಉದ್ಯೋಗ ಹಾಗೂ ಸಾರ್ವಜನಿಕ ಉದ್ದಿಮೆಗಳಲ್ಲಿ ಶೇಕಡ 27ರಷ್ಟು ಮೀಸಲಾತಿಯನ್ನು ನೀಡಬೇಕೆಂದು ಶಿಫಾರಸ್ಸು ಮಾಡಿತ್ತು. ಸದರಿ ಆಯೋಗದ ವರದಿಯನ್ನು 1990ನೇ ಇಸವಿಯಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ವಿ.ಪಿ. ಸಿಂಗ್ ರವರು ಜಾರಿಗೊಳಿಸಿರುತ್ತಾರೆ. ಇಂದಿಗೂ ಸಹ ಅದು ಮಂಡಲ್ ವರದಿ ಎಂದೇ ಪ್ರಸಿದ್ಧಿ ಪಡೆದಿರುತ್ತದೆ.

1956ರಲ್ಲಿ ರಾಜ್ಯಗಳ ಪುನರ್ ವಿಂಗಡನೆಯಾಗಿ ಮೈಸೂರು ರಾಜ್ಯವು ರೂಪುಗೊಂಡಾಗ ಮೈಸೂರು, ಕೂರ್ಗ್, ಬಾಂಬೆ, ಹೈದರಾಬಾದ್ ಮತ್ತು ಮದ್ರಾಸ್ ಎಂಬ 05 ರಾಜ್ಯಗಳ ಭಾಗಶಃ ಪ್ರದೇಶಗಳನ್ನು ಒಳಗೊಂಡ ನಂತರ ಈ ಹಿಂದೆ ಮೇಲ್ಕಾಣಿಸಿದ ರಾಜ್ಯಗಳು ತಯಾರಿಸಿದ ಹಿಂದುಳಿದ ವರ್ಗಗಳ ಪಟ್ಟಿಯ ಆಧಾರದ ಮೇಲೆ ಹೊಸದಾಗಿ ರೂಪುಗೊಂಡ ಮೈಸೂರು ರಾಜ್ಯವು ತನ್ನ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಹೊಸದೊಂದು ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸಿತು. ನಂತರದ ದಿನಗಳಲ್ಲಿ ಸದರಿ ಹಿಂದುಳಿದ ವರ್ಗಗಳ ಪಟ್ಟಿಯನ್ನು ಮೈಸೂರು ಉಚ್ಛ ನ್ಯಾಯಾಲಯವು 1959ರಲ್ಲಿ ರದ್ದುಗೊಳಿಸಿರುತ್ತದೆ.

ಕರ್ನಾಟಕ ಸರ್ಕಾರವು ಹಿಂದುಳಿದ ವರ್ಗಗಳನ್ನು ಗುರುತಿಸುವ ಸಲುವಾಗಿ 1960ರಲ್ಲಿ ಡಾ. ಆರ್ ನಾಗನಗೌಡರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿತು. ಈ ಆಯೋಗವು ಮೇ, 1961ರಲ್ಲಿ ವರದಿಯನ್ನು ಸಲ್ಲಿಸಿತು. ಸದರಿ ವರದಿಯಲ್ಲಿ, ಹಿಂದುಳಿದ ವರ್ಗಗಳ ವರ್ಗೀಕರಣ, ಸಂವಿಧಾನದ ಅನುಚ್ಛೇಧ 15(4), 16(4)ರ ಅಡಿಯಲ್ಲಿ ಶೈಕ್ಷಣಿಕ ಹಾಗೂ ಔದ್ಯೋಗಿಕ ಮೀಸಲಾತಿಗೆ ನೀಡಬೇಕಾದ ಶೇಕಡ ಮೀಸಲಾತಿ ಸೌಲಭ್ಯ, ಮೀಸಲಾತಿ ಸಂಖ್ಯಾರ್ಹತೆಗಾಗಿ ಆದಾಯ ಮಿತಿ, ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಕೈಗೊಳ್ಳುವ ಕಾರ್ಯಕ್ರಮಗಳು ಹಾಗೂ ಮತ್ತಿತರ ಸರ್ಕಾರಿ ನೀತಿಗಳು ಸೇರಿದಂತೆ ಹಲವಾರು ಶಿಫಾರಸ್ಸುಗಳನ್ನು ಮಾಡಿರುತ್ತದೆ. ಈ ಶಿಫಾರಸ್ಸುಗಳನ್ನು ಆಧರಿಸಿ ಸರ್ಕಾರವು ಹಿಂದುಳಿದ ವರ್ಗಗಳನ್ನು "ಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ಎಂದು ಗುಂಪುಗಳನ್ನಾಗಿ ವರ್ಗೀಕರಿಸಿ ಅನುಚ್ಛೇಧ 15(4) ರಡಿ ಶಿಕ್ಷಣಕ್ಕಾಗಿ ಹಿಂದುಳಿದವರು 28%, ಅತೀ ಹಿಂದುಳಿದವರು 22% ಹಾಗೂ ಅನುಚ್ಛೇಧ 16(4) ರಡಿ ಉದ್ಯೋಗ ಮೀಸಲಾತಿಯನ್ನು ಹಿಂದುಳಿದವರಿಗೆ 21%, ಅತೀ ಹಿಂದುಳಿದವರಿಗೆ 24% ಮೀಸಲಾತಿ ಸೌಲಭ್ಯವನ್ನು ಸರ್ಕಾರವು ಜಾರಿಗೆ ತಂದಿರುತ್ತದೆ.

ಸದರಿ ಮೀಸಲಾತಿ ಆದೇಶವನ್ನು Balaji v/s State of Mysore ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ Dividing Backward classes in to "Backward and More Backward" categories Exceeded the scope of Article 15(4) of the constitution of India ಎಂದು ಅಭಿಪ್ರಾಯಪಟ್ಟು ರದ್ದುಗೊಳಿಸಿರುತ್ತದೆ.

ಕರ್ನಾಟಕ ಸರ್ಕಾರದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸು ರವರು ದಿನಾಂಕ: 08.08.1972 ರಲ್ಲಿ ಶ್ರೀ ಎಲ್.ಜಿ. ಹಾವನೂರರ ಅಧ್ಯಕ್ಷತೆಯಲ್ಲಿ ರಾಜ್ಯದ ಮೊದಲ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿದರು. ಆಯೋಗವು ಕರ್ನಾಟಕ ರಾಜ್ಯದಲ್ಲಿನ ಹಿಂದುಳಿದ ಜಾತಿಗಳು ಹಾಗೂ ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಗುರುತಿಸುವ ಸಲುವಾಗಿ ಆರ್ಥಿಕ, ವಸತಿ, ಔದ್ಯೋಗಿಕ ಹಾಗೂ ಮತ್ತಿತರ ಅಂಶಗಳ ಆಧಾರದ ಮೇಲೆ ಅಧ್ಯಯನವನ್ನು ನಡೆಸಿ ಹಲವಾರು ಜಾತಿಗಳನ್ನು ಗುರುತಿಸಿ ಅವುಗಳ ಹಿಂದುಳಿದಿರುವಿಕೆಯ ಆಧಾರದ ಮೇಲೆ ಹಿಂದುಳಿದ ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಕಲ್ಪಿಸಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

ಅಧ್ಯಾಯ –3

ಹಿಂದುಳಿದ ವರ್ಗಗಳ ಆಯೋಗದ ರಚನೆ

3.1 ಆಯೋಗದ ರಚನೆ:

ಭಾರತದ ಸರ್ವೋಚ್ಚ ನ್ಯಾಯಾಲಯವು ಇಂದ್ರ ಸಾಹ್ನಿ V/s ಭಾರತ ಒಕ್ಕೂಟದ ತೀರ್ಪಿನಲ್ಲಿ ನೀಡಿದ ಆದೇಶದನುಸಾರ ಕರ್ನಾಟಕ ರಾಜ್ಯ ಸರ್ಕಾರವು "ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ" ಅಧಿನಿಯಮ, 1995ನ್ನು ಜಾರಿಗೊಳಿಸಿರುತ್ತದೆ. ಆಯೋಗದ ಅಧಿನಿಯಮ, 1995ರ ಪ್ರಕರಣ 3(1)ರ ಅಡಿಯಲ್ಲಿ ಆಯೋಗವನ್ನು ರಚಿಸಿ ಅಧಿಕಾರ ಮತ್ತು ಕಾರ್ಯಗಳನ್ನು ನಿರ್ವಹಿಸಲು ಅನುವು ಮಾಡಿಕೊಟ್ಟಿದೆ.

ಈ ಅಧಿನಿಯಮದ ಪ್ರಕರಣ 3(2)ರ ಅಡಿಯಲ್ಲಿ ಆಯೋಗವು ಅಧ್ಯಕ್ಷರು ಮತ್ತು ಸದಸ್ಯರನ್ನು ಒಳಗೊಂಡಿರುತ್ತದೆ:–

i. ಅಧ್ಯಕ್ಷರು, ಈ ಹುದ್ದೆಗೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರುವ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹರಾಗಿರುವವರು ಅಥವಾ ಸಮಾಜ ವಿಜ್ಞಾನಿ ಆಗಿರತಕ್ಕದ್ದು.
ii. ಸದಸ್ಯರು, ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ವಿಷಯದ ಬಗ್ಗೆ ವಿಶೇಷ ಜ್ಞಾನವುಳ್ಳ ಐವರು ವ್ಯಕ್ತಿಗಳು, ಇವರಲ್ಲಿ ಒಬ್ಬ ಸಮಾಜ ವಿಜ್ಞಾನಿ ಆಗಿರತಕ್ಕದ್ದು.
iii. ಹಿಂದುಳಿದ ವರ್ಗಗಳ ಇಲಾಖೆಯ ಆಯುಕ್ತರು ಆಯೋಗದ ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.

3.2 ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು

ಅಧಿನಿಯಮದ ಪ್ರಕರಣ 9ರ ಅಡಿಯಲ್ಲಿ, ಆಯೋಗದ ಕಾರ್ಯಗಳು ಈ ಕೆಳಗಿನಂತಿವೆ:

i. ನಾಗರಿಕರ ಯಾವುದೇ ವರ್ಗವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಬಂದ ಕೋರಿಕೆಗಳನ್ನು ಪರಿಶೀಲಿಸುವುದು ಮತ್ತು ಯಾವುದೇ ಹಿಂದುಳಿದ ವರ್ಗವನ್ನು ಅಂಥ ಪಟ್ಟಿಯಲ್ಲಿ ಹೆಚ್ಚಾಗಿ ಸೇರಿಸಲಾಗಿದೆ ಅಥವಾ ಸೇರಿಸಲಾಗಿಲ್ಲ ಎಂದು ಬಂದ ದೂರುಗಳ ವಿಚಾರಣೆ ಮಾಡುವುದು ಮತ್ತು ಅದು ಸಮುಚಿತವೆಂದು ಭಾವಿಸುವಂಥ ಸಲಹೆಯನ್ನು ಸರ್ಕಾರಕ್ಕೆ ನೀಡುವುದು;
ii. ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಮತ್ತು ಸಮಸ್ಯೆಗಳ ಬಗ್ಗೆ ಸಮೀಕ್ಷೆ ಅಥವಾ ಅಧ್ಯಯನ ಮಾಡುವುದು.
iii. ಹಿಂದುಳಿದ ವರ್ಗಗಳಿಗಾಗಿ ಮೀಸಲಾಗಿರುವ ಅನೇಕ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದು.

3.3 ಆಯೋಗದ ಅಧಿಕಾರಗಳು:– ಆಯೋಗವು 9ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಒಂದು ದಾವೆಯನ್ನು ವಿಚಾರಣೆ ಮಾಡುವಾಗ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ, ಸಿವಿಲ್ ನ್ಯಾಯಾಲಯವು ಹೊಂದಿರುವ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

1. ರಾಜ್ಯದ ಯಾವುದೇ ಭಾಗದಿಂದ ಯಾರೇ ವ್ಯಕ್ತಿಯನ್ನು ಸಮನ್ ಮಾಡುವುದು ಮತ್ತು ಅವರ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವರನ್ನು ಪರೀಕ್ಷಿಸುವುದು;
2. ಯಾವುದೇ ದಾಖಲೆಗಳನ್ನು ಶೋಧಿಸುವುದನ್ನು ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು;
3. ಅಫಿಡವಿಟ್‌ಗಳ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು;
4. ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆ ಅಥವಾ ಅದರ ಪ್ರತಿಯನ್ನು ನೀಡುವಂತೆ ಅಗತ್ಯ ಪಡಿಸುವುದು;
5. ಸಾಕ್ಷಿಗಳ ಮತ್ತು ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು; ಮತ್ತು
6. ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ.

ಅಧ್ಯಾಯ –4

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಹಿಂದಿನ ಆಯೋಗಗಳ ಸಂಕ್ಷಿಪ್ತ ಅವಲೋಕನ

4.1 ಹಾವನೂರು ಆಯೋಗ (1972–1975):

ಕರ್ನಾಟಕ ಸರ್ಕಾರವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಗುರುತಿಸಿ ಅವರಿಗೆ ಕಲ್ಪಿಸಬಹುದಾದ ಮೀಸಲಾತಿ ಸೌಲಭ್ಯ, ಆರ್ಥಿಕ ಅಭಿವೃದ್ಧಿ ಹಾಗೂ ಕಲ್ಯಾಣಕ್ಕಾಗಿ ಸರ್ಕಾರದಿಂದ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಲು ದಿನಾಂಕ: 08.08.1972ರಂದು ಶ್ರೀ ಎಲ್.ಜಿ. ಹಾವನೂರು ನೇತೃತ್ವದ ಪ್ರಥಮ ರಾಜ್ಯ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿರುತ್ತದೆ. ಈ ಆಯೋಗವು ದಿನಾಂಕ: 19.11.1975ರಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಈ ಕೆಳಕಂಡಂತೆ ಮೀಸಲಾತಿಗೆ ಶಿಫಾರಸ್ಸು ಮಾಡಿರುತ್ತದೆ.

ವರ್ಗೀಕರಣ	ಅನುಚ್ಛೇದ 15(4)	ಅನುಚ್ಛೇದ 16(4)
ಹಿಂದುಳಿದ ಸಮುದಾಯಗಳು	16%	16%
ಹಿಂದುಳಿದ ಜಾತಿಗಳು	10%	10%
ಹಿಂದುಳಿದ ಪಂಗಡಗಳು	6%	6%

ಈ ವರದಿಯನ್ನು ಆಧರಿಸಿ ಸರ್ಕಾರಿ ಆದೇಶ ಸಂಖ್ಯೆ: ಎಸ್.ಡಬ್ಲ್ಯೂ.ಎಲ್ 150.77 ದಿನಾಂಕ:22.02.1977ರ ಆದೇಶ ಹೊರಡಿಸಿದ್ದು, ಇದರಲ್ಲಿ ಹಿಂದುಳಿದವರನ್ನು ಈ ಕೆಳಗಿನಂತೆ ವರ್ಗೀಕರಿಸಿ, ಶೈಕ್ಷಣಿಕ ಉದ್ದೇಶ ಹಾಗೂ ಉದ್ಯೋಗಕ್ಕಾಗಿ ಮೀಸಲಾತಿ ಸೌಲಭ್ಯ ಕಲ್ಪಿಸಿರುತ್ತದೆ.

ವರ್ಗೀಕರಣ	ಶೇಕಡ	ವಾರ್ಷಿಕ ಆದಾಯ ಮಿತಿ
ಹಿಂದುಳಿದ ಸಮುದಾಯಗಳು	20%	ರೂ.8000/–
ಹಿಂದುಳಿದ ಜಾತಿಗಳು	10%	ರೂ.8000/–
ಹಿಂದುಳಿದ ಬುಡಕಟ್ಟುಗಳು	5%	ರೂ.8000/–
ವಿಶೇಷ ಗುಂಪು	5%	ರೂ.4,800/–
ಒಟ್ಟು	**40%**	

ತದನಂತರ ಮೇ 1979ರಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಂವಿಧಾನದ ಅನುಚ್ಛೇದ (4) ಹಾಗೂ ಅನುಚ್ಛೇದ 16(4) ರ ಉದ್ದೇಶಗಳಿಗೆ ಪ್ರತ್ಯೇಕಿಸಿ ಕೆಳಗಿನಂತೆ ಮೀಸಲಾತಿ ಸೌಲಭ್ಯ ಕಲ್ಪಿಸಿರುತ್ತದೆ.

ವರ್ಗೀಕರಣ	ಶೇಕಡಾ	ವಾರ್ಷಿಕ ಆದಾಯ ಮಿತಿ
ಹಿಂದುಳಿದ ಸಮುದಾಯಗಳು	20%	18%
ಹಿಂದುಳಿದ ಜಾತಿಗಳು	10%	10%
ಹಿಂದುಳಿದ ಬುಡಕಟ್ಟುಗಳು	5%	5%
ವಿಶೇಷ ಗುಂಪು	5%	5%
ಒಟ್ಟು	**40%**	**38%**

4.2 ವೆಂಕಟಸ್ವಾಮಿ ಆಯೋಗ (1983–1986)

ದಿನಾಂಕ: 18.04.1983ರಂದು ರಾಜ್ಯ ಸರ್ಕಾರವು ಶ್ರೀ ವೆಂಕಟಸ್ವಾಮಿ ನೇತೃತ್ವದ 2ನೇ ರಾಜ್ಯ ಹಿಂದುಳಿದ ವರ್ಗಗಳ ಆಯೋಗವನ್ನು ಹಿಂದುಳಿದಿರುವಿಕೆಯನ್ನು ಗುರುತಿಸುವ ಉದ್ದೇಶಕ್ಕೆ ರಚಿಸಿರುತ್ತದೆ. ಈ ಆಯೋಗವು 1984ರಲ್ಲಿ ರಾಜ್ಯಾದ್ಯಂತ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ನಡೆಸಿ, ಹಿಂದುಳಿದವರನ್ನು ಭಾರತ ಸಂವಿಧಾನ ಅನುಚ್ಛೇದ 15(4) ಮತ್ತು 16(4) ರ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಗ್ರೂಪ್–ಎ ಮತ್ತು ಗ್ರೂಪ್–ಬಿ ಎಂದು ಮರು ವರ್ಗೀಕರಿಸಿ ಶೇಕಡ 27ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸಲು ಸರ್ಕಾರಕ್ಕೆ ದಿನಾಂಕ: 31.03.1986ರಂದು ಶಿಫಾರಸ್ಸು ಮಾಡಿರುತ್ತದೆ. ಈ ಆಯೋಗದ ವರದಿಯನ್ನು ಸರ್ಕಾರವು ಅಂಗೀಕರಿಸಿರುವುದಿಲ್ಲ.

1986 ರಲ್ಲಿ ಶ್ರೀ ವೆಂಕಟಸ್ವಾಮಿ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಒಪ್ಪಲು ಸಾಧ್ಯವಾಗದಿದ್ದ ಕಾರಣ ಮಧ್ಯಂತರ ಮೀಸಲಾತಿ ವ್ಯವಸ್ಥೆಯಾಗಿ ಹಿಂದುಳಿದ ವರ್ಗಗಳನ್ನು ಈ ಕೆಳಗಿನಂತೆ ಶೈಕ್ಷಣಿಕ ಮತ್ತು ಉದ್ಯೋಗ ಮೀಸಲಾತಿ ಉದ್ದೇಶಗಳಿಗೆ ಪ್ರತ್ಯೇಕವಾಗಿ ವರ್ಗೀಕರಿಸಿ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿರುತ್ತದೆ.

ಗುಂಪು	**ಅನುಚ್ಛೇದ 15(4)**	**ಅನುಚ್ಛೇದ 16(4)**
ಗುಂಪು–ಎ	5%	5%
ಗುಂಪು–ಬಿ	15%	13%
ಗುಂಪು–ಸಿ	16%	16%
ಗುಂಪು–ಡಿ	9%	11%
ಗುಂಪು–ಇ	5%	5%
ಒಟ್ಟು	**50%**	**50%**

4.3 ನ್ಯಾ: ಓ ಚಿನ್ನಪ್ಪರೆಡ್ಡಿ ಆಯೋಗ (1988–1990):

ದಿನಾಂಕ: 09.03.1988 ರಂದು ರಾಜ್ಯ ಸರ್ಕಾರವು ನ್ಯಾಯಮೂರ್ತಿ ಓ. ಚಿನ್ನಪ್ಪ ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ 3ನೇ ಆಯೋಗವನ್ನು ರಚಿಸಿರುತ್ತದೆ. (ಆಯೋಗಕ್ಕೆ ಅಧ್ಯಕ್ಷರನ್ನು ಮಾತ್ರ ನೇಮಿಸಿದ್ದು, ಯಾವುದೇ ಸದಸ್ಯರ ನೇಮಕ ಆಗಿರುವುದಿಲ್ಲ.) ಈ ಆಯೋಗವು ಆಯ್ದ 525 ಗ್ರಾಮಗಳಲ್ಲಿ ಸಮೀಕ್ಷಾ ಸಂಸ್ಥೆಗಳು, ಇತ್ಯಾದಿ ಮೂಲಗಳಿಂದ ಸಾಮಾಜಿಕ ಹಾಗೂ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ, ಅಂಕಿ–ಅಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ಸರ್ಕಾರಕ್ಕೆ 1990ರಲ್ಲಿ ವರದಿ ಸಲ್ಲಿಸಿರುತ್ತದೆ. ಇದರಲ್ಲಿ ಹಿಂದುಳಿದ ವರ್ಗಗಳನ್ನು ಪ್ರವರ್ಗ–I, ಪ್ರವರ್ಗ– II ಹಾಗೂ ಪ್ರವರ್ಗ– III (ವೃತ್ತಿಯಾಧಾರಿತ ಗುಂಪು) ಎಂದು ವರ್ಗೀಕರಿಸಿ ಶೇ 38 ರಷ್ಟು ಮೀಸಲಾತಿ ಸೌಲಭ್ಯ ನೀಡುವುದಕ್ಕೆ ಶಿಫಾರಸ್ಸು ಮಾಡಿ ದಿನಾಂಕ: 07.04.1990 ರಂದು ವರದಿ ಸಲ್ಲಿಸಿರುತ್ತದೆ.

ಈ ವರದಿ ಸಲ್ಲಿಕೆಯಾದ ನಂತರ, ಸರ್ಕಾರವು ಮೊದಲಿಗೆ ಹಿಂದುಳಿದ ವರ್ಗಗಳನ್ನು ಪ್ರವರ್ಗ–I, II, III ಹಾಗೂ ಪ್ರವರ್ಗ–IV ಎಂದು ವರ್ಗೀಕರಿಸಿ ಒಟ್ಟಾರೆ ಶೇ.50 ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸಿ ಏಪ್ರಿಲ್, 1994 ರಲ್ಲಿ ಆದೇಶಿಸಿರುತ್ತದೆ. ನಂತರ ಹೆಚ್ಚಿನ ಪ್ರಮಾಣದ ಮೀಸಲಾತಿ ಸೌಲಭ್ಯಕ್ಕೆ ಬೇಡಿಕೆ ಹಾಗೂ

ಜಾತಿಗಳ ಮರುವರ್ಗೀಕರಣ ಕುರಿತು ಮನವಿಗಳು ಬಂದ ಕಾರಣ ಹಿಂದುಳಿದ ವರ್ಗಗಳನ್ನು ಆರು ಗುಂಪುಗಳನ್ನಾಗಿ ವರ್ಗೀಕರಿಸಿ ಶೇ.57 ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸಿ ಜುಲೈ, 1994 ರ ಆದೇಶವನ್ನು ಹೊರಡಿಸಲಾಗಿದೆ. ಆದರೆ, ಭಾರತದ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 438/94 ರಲ್ಲಿ ನೀಡಲಾಗಿದ್ದ ದಿನಾಂಕ: 09.09.1994 ರ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳನ್ನು ಈ ಕೆಳಗಿನಂತೆ ಪುನರ್ ವರ್ಗೀಕರಿಸಿ ಪ.ಜಾ/ಪ.ಪಂ. ಹಾಗೂ ಹಿಂದುಳಿದ ವರ್ಗಗಳಿಗೆ ಒಟ್ಟಾರೆಯಾಗಿ ಶೇ. 50 ಕ್ಕೆ ಮೀರದಂತೆ ಮೀಸಲಾತಿ ಸೌಲಭ್ಯ ಕಲ್ಪಿಸಿ, ದಿನಾಂಕ: 17.09.1994 ರ ಆದೇಶವನ್ನು ಹೊರಡಿಸಿರುತ್ತದೆ.

1	ಪ್ರವರ್ಗ–I	4%	**ಈ ಆದೇಶವನ್ನು ಮೊದಲಿಗೆ ಶೈಕ್ಷಣಿಕ ಮೀಸಲಾತಿಯ ಅನುಚ್ಛೇದ 15(4)ರ ಉದ್ದೇಶಕ್ಕೆ ಹೊರಡಿಸಿದ್ದು, ತದನಂತರ ಹೊರಡಿಸಲಾದ ದಿನಾಂಕ:31.01.1995ರ ಆದೇಶದಲ್ಲಿ ಸರ್ಕಾರಿ ನೇಮಕಾತಿಗಳಲ್ಲಿ ಮೀಸಲಾತಿ ಸೌಲಭ್ಯ ನೀಡಿದ ಅನುಚ್ಛೇದ 16(4)ರ ಉದ್ದೇಶಕ್ಕೆ ಸಹ ಅನ್ವಯಿಸಿ ಆದೇಶಿಸಲಾಗಿದೆ.**
2	ಪ್ರವರ್ಗ–IIA	15%	
3	ಪ್ರವರ್ಗ–IIB	4%	
4	ಪ್ರವರ್ಗ–IIIA	4%	
5	ಪ್ರವರ್ಗ–IIIB	5%	
6	ಪರಿಶಿಷ್ಟ ಜಾತಿ	15%	
7	ಪರಿಶಿಷ್ಟ ಪಂಗಡ	3%	
	ಒಟ್ಟು	**50%**	

4.4 ನ್ಯಾ: ಕುದೂರ್ ನಾರಾಯಣ ರೈ ಆಯೋಗ (1994–1995):

ಭಾರತ ಸರ್ಕಾರವು ಬಿ.ಪಿ. ಮಂಡಲ್ ನೇತೃತ್ವದ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನಾಧರಿಸಿ, ಕೇಂದ್ರ ನಾಗರೀಕ ಸೇವೆಗಳಿಗೆ/ಭಾರತ ಸರ್ಕಾರದ ವ್ಯಾಪ್ತಿಗೆ ಬರುವ ನಿಗಮ, ಮಂಡಳಿ ಹಾಗೂ ಸಂಸ್ಥೆಗಳಲ್ಲಿ ನಡೆಯುವ ನೇಮಕಾತಿಗಳಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಶೇ. 25 ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸಿ ದಿನಾಂಕ: 13.08.1990ರ ಆದೇಶ ಹೊರಡಿಸಿದಾಗ ಇದರ ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ (ಸಿವಿಲ್) ಸಂಖ್ಯೆ. 930/1990ರಲ್ಲಿ ಇಂದ್ರ ಸಾಹ್ನಿ ಹಾಗೂ ಇತರರು ವಿರುದ್ಧ ಭಾರತ ಸರ್ಕಾರ ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ದಿನಾಂಕ: 16.11.1992ರ ತೀರ್ಪಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನೀಡಲಾದ ನಿರ್ದೇಶನದ ಮೇರೆಗೆ ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವನ್ನು (ಖಾಯಂ ಆಗಿ ಅಸ್ಥಿತ್ವದಲ್ಲಿರುವಂತೆ) ಏಪ್ರಿಲ್, 1994ರಲ್ಲಿ ಸ್ಥಾಪಿಸಿರುತ್ತದೆ. ಮೊದಲಿಗೆ ನ್ಯಾಯಮೂರ್ತಿ ಕುದೂರ್ ನಾರಾಯಣ ರೈ ಅವರ ನೇತೃತ್ವದ ಆಯೋಗವನ್ನು ರಚಿಸಲಾಯಿತಾದರೂ ಈ ಆಯೋಗವು ಸರ್ಕಾರಕ್ಕೆ ಯಾವುದೇ ವರದಿಯನ್ನು ಸಲ್ಲಿಸಿರುವುದಿಲ್ಲ.

4.5 ಪ್ರೊ. ರವಿವರ್ಮ ಕುಮಾರ್ ಆಯೋಗ (1997–2000):

ಪ್ರೊ. ರವಿವರ್ಮ ಕುಮಾರ್ ಅಧ್ಯಕ್ಷತೆಯಲ್ಲಿ 1997ನೇ ಸಾಲಿನಲ್ಲಿ ರಚಿಸಲಾದ ಆಯೋಗವು ಸರ್ಕಾರಕ್ಕೆ 04.12.2000 ದಂದು ಸಲ್ಲಿಸಲಾದ ವಿಶೇಷ ವರದಿಯನ್ನಾಧರಿಸಿ, ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ

ಪಟ್ಟಿಗೆ ಕೆಲವು ಜಾತಿಗಳನ್ನು ಹೊಸದಾಗಿ ಸೇರ್ಪಡೆ ಮಾಡಿರುವುದಲ್ಲದೇ, ಕೆಲವೊಂದು ಜಾತಿಗಳ ಪ್ರವರ್ಗ ಬದಲಾವಣೆ ಹಾಗೂ ಕೆನೆಪದರ ನೀತಿ ಒಳಗೊಂಡಂತೆ ಹಾಲಿ ಚಾಲ್ತಿಯಲ್ಲಿರುವ ದಿನಾಂಕ: 30.03.2002ರ ಆದೇಶವನ್ನು ಹೊರಡಿಸಿರುತ್ತದೆ. ಆದರೆ, ಈ ಆದೇಶದಲ್ಲಿ, ದಿನಾಂಕ: 17.08.1994ರ ಆದೇಶದಲ್ಲಿ ಹಿಂದುಳಿದ ವರ್ಗಗಳಿಗೆ ನಿಗದಿಪಡಿಸಲಾದ ಗರಿಷ್ಠ ಮೀಸಲಾತಿ ಮಿತಿಯಲ್ಲಿ ಯಾವುದೇ ಬದಲಾವಣೆ ಮಾಡದೇ ಮುಂದುವರೆಸಲಾಗಿದೆ.

ಆಯೋಗ ನೀಡಿದ ವಿಶೇಷ ವರದಿಯ ವಿಷಯಗಳು:

1. ಹಿಂದುಳಿದ ವರ್ಗಗಳ ಪಟ್ಟಿಯ ಪರಿಷ್ಕರಣೆ:
2. ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡ ಹಾಗೂ ಹಿಂದೂ ಜನಾಂಗದ ಹಿಂದುಳಿದ ವರ್ಗಗಳಿಗೆ ಇರುವ ಶೇಕಡ 50ರಷ್ಟು ಮೀಸಲಾತಿಗೆ ಧಕ್ಕೆಯಾಗದಂತೆ, ಹಿಂದುಯೇತರ ಹಿಂದುಳಿದ ವರ್ಗಗಳನ್ನು ಪ್ರತ್ಯೇಕ ಪ್ರವರ್ಗಕ್ಕೆ ಸೇರ್ಪಡೆ ಮಾಡಿ, ಅನುಚ್ಛೇದ-14 ರಡಿಯಲ್ಲಿ ಮೀಸಲಾತಿ ಕಲ್ಪಿಸುವುದು.
3. ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರ್ಪಡೆಗೊಂಡಿರುವ ಶಾಸನವನ್ನು ಪಡೆಯುವುದು.
4. ರಾಜ್ಯ ನಾಗರೀಕ ಸೇವೆಗಳ ಬಡ್ತಿಗಳಲ್ಲಿ ಹಿಂದುಳಿದ ವರ್ಗಗಳಿಗೆ ಅನುಕೂಲವಾಗುವಂತಹ ಮೀಸಲಾತಿಯನ್ನು ನೀಡಬಾರದು:
5. ಕೆನೆ ಪದರ ನೀತಿಯನ್ನು ಮಾರ್ಪಡಿಸಿ, ಕೆಳಕಂಡವುಗಳನ್ನು ಕೈಬಿಡುವುದು:
    - ಅ) ಅನುಚ್ಛೇದ-16(4) ರಡಿ ರಾಜ್ಯ ಅಥವಾ ಕೇಂದ್ರ ಸರ್ಕಾರದ ಗ್ರೂಪ್-ಎ ಅಥವಾ ಗ್ರೂಪ್ ಬಿ ಹುದ್ದೆಗಳ ನೇಮಕಾತಿಯಲ್ಲಿ ಮೀಸಲಾತಿಯನ್ನು ಪಡೆದಿರುವ ಫಲಾನುಭವಿಗಳು.
    - ಆ) ಸಾಂವಿಧಾನಿಕ ಹುದ್ದೆಗಳನ್ನು ಹೊಂದಿರುವವರು.
    - ಇ) ರಾಜ್ಯ ನಾಗರೀಕ/ಕೇಂದ್ರ ನಾಗರಿಕ ಸೇವೆ ಹಾಗೂ ನ್ಯಾಯಾಂಗ ಸೇವೆಯಲ್ಲಿರುವವರು.
    - ಈ) ಐದು ವರ್ಷಗಳ ಅವಧಿಯಲ್ಲಿ ಎಲ್ಲಾ ಮೂಲಗಳಿಂದ ಒಟ್ಟು ವಾರ್ಷಿಕ ಆದಾಯ ರೂ.2.00 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿರುವ ಕೃಷಿಕರು, ಕುಶಲಕರ್ಮಿಗಳು ಹಾಗೂ ನೇಕಾರರು.
6. ಜನಗಣತಿಯಲ್ಲಿ ಜಾತಿಯ ಗಣನೆ:
7. ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವುದು:
8. ಕಾನೂನು ತರಬೇತಿ ಪಡೆಯುವವರಿಗೆ ಕೆಳಕಂಡಂತೆ ನಿರ್ದಿಷ್ಟ ಸೌಲಭ್ಯ ಹಾಗೂ ರಿಯಾಯಿತಿ ನೀಡುವುದು
    - ಅ) ಮಾಸಿಕ ಸ್ಟೈಫಂಡ್ ನ್ನು ರೂ.3,000/-ಕ್ಕೆ ಹೆಚ್ಚಿಸುವುದು.
    - ಆ) ಉಚಿತ ಸಾಲ ಸೌಲಭ್ಯವನ್ನು ರೂ.2,500/- ರವರೆಗೆ ಹೆಚ್ಚಿಸುವುದು.
    - ಇ) ತರಬೇತಿ ಪಡೆಯುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಸಂಖ್ಯೆಯನ್ನು ವಾರ್ಷಿಕ 520ಕ್ಕೆ ಹೆಚ್ಚಿಸುವುದು.
    - ಈ) ತರಬೇತಿ ಪಡೆದ ವಕೀಲರಿಗೆ ತಮ್ಮ ಸ್ವಂತ ಕಾನೂನು ಕಛೇರಿಗಳನ್ನು ತೆರೆಯಲು ಅವರ ಸ್ಟೈಫಂಡ್ ಅವಧಿಯ ಅಂತ್ಯದಲ್ಲಿ ರೂ.50,000/- ರವರೆಗೆ ಬಡ್ಡಿ ರಹಿತ ಸಾಲವನ್ನು ನೀಡುವುದು.

9. ಹಿಂದುಳಿದ ವರ್ಗಗಳ ಮತ್ತು ಬುಡಕಟ್ಟು ಜನಾಂಗಗಳ ಕುಲಕಸುಬುಗಳನ್ನು ಸಂರಕ್ಷಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.
10. ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿನ ಹೂಡಿಕೆಗಳಲ್ಲಿ ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡ ಹಾಗೂ ಇತರೇ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಸರ್ಕಾರ ಷೇರು ಬಂಡವಾಳವನ್ನು ಮೀಸಲಿರಿಸುವುದು.

4.6 ಮುನಿರಾಜು ಆಯೋಗ (2001–2003):

ಸರ್ಕಾರಿ ಆದೇಶ ಸಂಖ್ಯೆ: ಸಕಇ 2018 ಬಿಸಿಎ 2000, ದಿನಾಂಕ:19.06.2001ರಂದು ಶ್ರೀ ಮುನಿರಾಜು ಅವರ ನೇತೃತ್ವದ ಆಯೋಗವನ್ನು ರಚಿಸಲಾಯಿತಾದರೂ ಈ ಆಯೋಗವು ಸರ್ಕಾರಕ್ಕೆ ಯಾವುದೇ ವರದಿಯನ್ನು ಸಲ್ಲಿಸಿರುವುದಿಲ್ಲ.

4.7 ಸಿದ್ಧಗಂಗಯ್ಯ ಆಯೋಗ (2003–2006):

ಸರ್ಕಾರಿ ಆದೇಶ ಸಂಖ್ಯೆ: ಸಕಇ 174 ಬಿಸಿಎ 2003, ದಿನಾಂಕ:29.10.2003ರಲ್ಲಿ ಸಿದ್ಧಗಂಗಯ್ಯ ನೇತೃತ್ವದ ಆಯೋಗವನ್ನು ರಚಿಸಲಾಯಿತು. ಸದರಿ ಆಯೋಗವು ರಾಜ್ಯದ ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಪ್ರತ್ಯೇಕ ಆಯೋಗವನ್ನು ರಚಿಸುವ ಬಗ್ಗೆ ಹಾಗೂ ಹೊಸದಾಗಿ ಜಾತಿ/ಪರ್ಯಾಯ ಪದ ಸೇರ್ಪಡೆ, ಪ್ರವರ್ಗ ಬದಲಾವಣೆ ಕುರಿತಂತೆ ಮಾರ್ಚ್–2005 ರಲ್ಲಿ 'ಮಧ್ಯಂತರ ವರದಿ–2005' ಅನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ.

4.8 ಡಾ: ಸಿ ಎಸ್ ದ್ವಾರಕನಾಥ್ ಆಯೋಗ (2007–2010):

ಸರ್ಕಾರಿ ಆದೇಶ ಸಂಖ್ಯೆ: ಸಕಇ 81 ಬಿಸಿಎ 2007 ದಿನಾಂಕ:10.07.2007ರಲ್ಲಿ ಡಾ: ಸಿ ಎಸ್ ದ್ವಾರಕನಾಥ್ ಅವರ ನೇತೃತ್ವದ ಆಯೋಗವನ್ನು ರಚಿಸಲಾಯಿತು. ಸದರಿ ಆಯೋಗವು ಜುಲೈ–2010ರಲ್ಲಿ 'ವಿಶೇಷ ವರದಿ–2010'ನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಭಾಗ–1ರಲ್ಲಿ 33 ವಿಶೇಷ ವರದಿಗಳು ಮತ್ತು ಭಾಗ–2ರಲ್ಲಿ 26 ಸಲಹೆಗಳು ಒಳಗೊಂಡಿರುತ್ತವೆ.

4.9 ಶಂಕ್ರಪ್ಪ ಆಯೋಗ (2011–2013):

ಸರ್ಕಾರಿ ಆದೇಶ ಸಂಖ್ಯೆ: ಸಕಇ 174 ಬಿಸಿಎ 2011 ದಿನಾಂಕ:21.10.2011 ರಲ್ಲಿ ಶ್ರೀ ಎನ್. ಶಂಕ್ರಪ್ಪ ನೇತೃತ್ವದ ಆಯೋಗವನ್ನು ರಚಿಸಲಾಯಿತು. ಜಾತಿಪಟ್ಟಿಯಲ್ಲಿ ಹೊಸದಾಗಿ ಸೇರ್ಪಡೆ/ಪರ್ಯಾಯ ಪದಗಳ ಸೇರ್ಪಡೆ ಹಾಗೂ ಪ್ರವರ್ಗ ಬದಲಾವಣೆಗಳಿಗೆ ಸಂಬಂಧಿಸಿದಂತೆ ದಿನಾಂಕ: 31.12.2012 ರಲ್ಲಿ 'ಪ್ರಥಮ ವರದಿ–2012' ನ್ನು ಮತ್ತು ದಿನಾಂಕ:07.09.2013 ರಂದು 'ದ್ವಿತೀಯ ವರದಿ–2013'ನ್ನು ಸರ್ಕಾರಕ್ಕೆ ಸಲ್ಲಿಸಿದೆ.

4.10 ಶ್ರೀ. ಎಚ್.ಕಾಂತರಾಜ ಆಯೋಗ (2014–2017):

ಆಯೋಗವು 2015 ರಲ್ಲಿ ಸಾಮಾಜಿಕ–ಆರ್ಥಿಕ ಸಮೀಕ್ಷೆಯನ್ನು ನಡೆಸಿದೆ. ಸಮೀಕ್ಷೆಯ ನಮೂನೆಯು ಜನಸಂಖ್ಯೆ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಉದ್ಯೋಗ–ಆದಾಯ–ವ್ಯಾಪಾರ ಸಂಬಂಧಿತ ಮಾಹಿತಿ, ಆಸ್ತಿ/ಆಸ್ತಿ ಮಾಲೀಕತ್ವದ ಸ್ಥಿತಿ ಮತ್ತು ರಾಜಕೀಯ, ಅರೆ–ರಾಜಕೀಯ ಮತ್ತು ಸಹಕಾರಿ ಸಂಸ್ಥೆಗಳು

ಮತ್ತು ಸಂಸ್ಥೆಗಳಲ್ಲಿ ಜನರ ಪ್ರಾತಿನಿಧ್ಯ ಸೇರಿದಂತೆ ಹಲವಾರು ಸಂಬಂಧಿತ ವಿಷಯಗಳನ್ನು ಒಳಗೊಂಡ ದತ್ತಾಂಶ ಸಂಗ್ರಹಣೆಗೆ ಸಂಬಂಧಿಸಿದಂತೆ 51 ಮಾನದಂಡಗಳ ಮೇಲೆ 54 ಪ್ರಶ್ನಾವಳಿಯನ್ನು ಒಳಗೊಂಡಿದೆ. ಈ ಸಮೀಕ್ಷೆಯಲ್ಲಿ ಕರ್ನಾಟಕದ 1,35,35,772 ಕುಟುಂಬಗಳು ಮತ್ತು 5,98,14,942 ನಾಗರೀಕರಿಗೆ ಸಂಬಂಧಿಸಿದ ದತ್ತಾಂಶಗಳನ್ನು ಸಂಗ್ರಹಿಸಿದೆ. ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಎಂಬ ಮೂರು ಶೀರ್ಷಿಕೆಗಳಡಿಯಲ್ಲಿ ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಮಾನದಂಡಗಳನ್ನು ರೂಪಿಸಿದ್ದು, ಇದರಲ್ಲಿ ಸಾಮಾಜಿಕ ಅಡಿಯಲ್ಲಿ 12 ಉಪಸೂಚಕಗಳು, ಶೈಕ್ಷಣಿಕ ಮತ್ತು ಆರ್ಥಿಕ ಶೀರ್ಷಿಕೆಗಳಡಿಯಲ್ಲಿ ಕ್ರಮವಾಗಿ 5 ಉಪ ಸೂಚಕಗಳಂತೆ ಒಟ್ಟು 22 ಸೂಚಕಗಳನ್ನು 3:2:1 ರ ಅನುಪಾತದಲ್ಲಿ ಮೌಲ್ಯಾಂಕಗಳನ್ನು ನಿಗದಿಪಡಿಸಿದೆ.

ಮುಂದುವರೆದು, ವಿವಿಧ ಜಾತಿ/ಜನಾಂಗಗಳಿಂದ ಬಂದಂತಹ ಮನವಿಗಳನ್ನು ಶ್ರೀ ಹೆಚ್. ಕಾಂತರಾಜರವರ ನೇತೃತ್ವದ ಆಯೋಗವು ಬಹಿರಂಗ ವಿಚಾರಣೆಗೆ ಒಳಪಡಿಸಿ ಸುಮಾರು 120 ಜಾತಿಗಳನ್ನು ವಿವಿಧ ಪ್ರವರ್ಗಗಳಡಿ ಸೇರ್ಪಡೆಗೊಳಿಸಬೇಕೆಂದು ಸರ್ಕಾರಕ್ಕೆ ಸಲಹೆ ನೀಡಿರುತ್ತದೆ.

ಅಧ್ಯಾಯ- 5

ಪ್ರಸ್ತುತ ಆಯೋಗದ ರಚನೆ ಮತ್ತು ಕೈಗೊಂಡ ಕಾರ್ಯಗಳು

5.1 ಪ್ರಸ್ತುತ ಆಯೋಗ

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995 ರ ಪ್ರಕರಣ 3 (1) ಮತ್ತು 4 (1) ರ ಅಡಿಯಲ್ಲಿ ನೀಡಲಾದ ಅಧಿಕಾರದನ್ವಯ ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 199 ಬಿಸಿಎ 2020 ದಿನಾಂಕ 23.11.2020 ರಲ್ಲಿ ಮಾನ್ಯ ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ ರವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ನೇಮಕ ಮಾಡಿ ಆದೇಶಿಸಲಾಗಿರುತ್ತದೆ.

ಅಧ್ಯಕ್ಷರು	:	ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ
ಸದಸ್ಯರು	:	ಶ್ರೀ ಕಲ್ಯಾಣಕುಮಾರ್ ಹೆಚ್.ಎಸ್
		ಶ್ರೀ ಬಿ.ಎಸ್. ರಾಜಶೇಖರ್
		ಶ್ರೀ ಕೆ.ಟಿ. ಸುವರ್ಣ
		ಶ್ರೀ ಅರುಣಕುಮಾರ್
		ಶ್ರೀಮತಿ ಶಾರದಾನಾಯ್ಕ
ಸದಸ್ಯ ಕಾರ್ಯದರ್ಶಿ	:	ಶ್ರೀ ಕೆ.ಎ. ದಯಾನಂದ, ಭಾ.ಆ.ಸೇ

5.2 ಪ್ರಸ್ತುತ ಆಯೋಗವು ಕೈಗೊಂಡ ಕಾರ್ಯಗಳು:

ಪ್ರಸ್ತುತ ಆಯೋಗವು ಪೂರ್ಣ ಪ್ರಮಾಣದಲ್ಲಿ ರಚನೆಗೊಂಡ ನಂತರ ಕರ್ನಾಟಕ ರಾಜ್ಯದಲ್ಲಿ ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾಗಿ ಇರುವ ಹಾಗೂ ಜಾತಿ ಗೊತ್ತಿಲ್ಲದೇ ಇರುವಂತಹ ನಿರ್ಗತಿಕ ಮಕ್ಕಳಿಗೆ ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಮೀಸಲಾತಿ ನೀಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ವಿಶೇಷ ವರದಿಯನ್ನು ಸರ್ಕಾರಕ್ಕೆ ದಿನಾಂಕ 08.03.2023 ರಂದು ಸಲ್ಲಿಸಲಾಗಿರುತ್ತದೆ.

ರಾಜ್ಯಾದ್ಯಂತ ವಿವಿಧ ಜಾತಿ ಜನಾಂಗಗಳ ಜನರು ಹಾಗೂ ಸಂಘ-ಸಂಸ್ಥೆಗಳು ಮೀಸಲಾತಿಯನ್ನು ಕೋರಿದ್ದು, ಜೊತೆಗೆ ಇನ್ನೂ ಕೆಲವು ಸಮುದಾಯಗಳು ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಹಾಗೂ ಒಂದು ಪ್ರವರ್ಗದಿಂದ ಮತ್ತೊಂದು ಪ್ರವರ್ಗಕ್ಕೆ ವರ್ಗಾಯಿಸುವಂತೆ ಮತ್ತು ಕೆಲವು ಉಪಜಾತಿಗಳ ಹೆಸರನ್ನು ಮುಖ್ಯ ಜಾತಿಯೊಂದಿಗೆ ಸೇರ್ಪಡೆಗೊಳಿಸುವಂತೆ ಜಾತಿಯ ಹೆಸರು ಮತ್ತು ಕಾಗುಣಿತಗಳನ್ನು ತಿದ್ದುಪಡಿ ಮಾಡಿಸಿ ಕೊಡುವಂತೆ ಆಯೋಗಕ್ಕೆ ಮನವಿಗಳನ್ನು ಸಲ್ಲಿಸಿರುತ್ತವೆ. ಆಯೋಗವು, ಬಹಿರಂಗ ವಿಚಾರಣೆ ನಡೆಸಿ, ಮನವಿದಾರರ ಪ್ರಮಾಣೀಕೃತ ಹೇಳಿಕೆಯನ್ನು ದಾಖಲಿಸಿಕೊಂಡು, ಹೆಚ್ಚಿನ ಮಾಹಿತಿ ಅವಶ್ಯಕತೆ ಕಂಡು ಬಂದ ಸಂದರ್ಭದಲ್ಲಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಸದರಿ ಸಮುದಾಯಗಳು ವಾಸವಿರುವ ಸ್ಥಳಗಳಿಗೆ ಭೇಟಿ ನೀಡಿ, ಅವರ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಸತ್ಯಾಸತ್ಯತೆಗಳನ್ನು ಮನಗಂಡು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಧಿನಿಯಮ 1995ರ ಪರಿಚ್ಛೇದ 9(1)ರ ಅಡಿ ಪ್ರದತ್ತವಾದ ಅಧಿಕಾರದನ್ವಯ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನೊಳಗೊಂಡ ಪ್ರಥಮ ವರದಿ, ದ್ವಿತಿಯ ವರದಿ ಹಾಗೂ ತೃತೀಯ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ.

5.3 ಪ್ರಸ್ತುತ ಆಯೋಗವು ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ ಸಲ್ಲಿಸುವ ಉದ್ದೇಶ

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ, 1995 ರ ಪರಿಚ್ಛೇದ 9 (1) ರ ಪ್ರಕಾರ, ಆಯೋಗವು ಯಾವುದೇ ವರ್ಗದ ನಾಗರೀಕರನ್ನು ಹಿಂದುಳಿದ ವರ್ಗವೆಂದು ಪಟ್ಟಿಗೆ ಸೇರಿಸುವ ಮನವಿಗಳನ್ನು ಪರಿಶೀಲಿಸಬೇಕು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಪರಿಸ್ಥಿತಿಗಳು ಮತ್ತು ಸಮಸ್ಯೆಗಳ ಸಮೀಕ್ಷೆ ಮಾಡಬೇಕು. ಕೆಎಸ್‌ಸಿಬಿಸಿ ಅಧಿನಿಯಮ, 1995 ರ ಪ್ರಕರಣ 11 ರ ಪ್ರಕಾರ, ರಾಜ್ಯ ಸರ್ಕಾರವು ಈ ಅಧಿನಿಯಮ ಜಾರಿಗೆ ಬಂದ ಹತ್ತು ವರ್ಷಗಳ ಮುಕ್ತಾಯದ ನಂತರ ಮತ್ತು ನಂತರದ ಪ್ರತಿ ಹತ್ತು ವರ್ಷಗಳ ಅವಧಿಯಲ್ಲಿ, ಹಿಂದುಳಿದ ವರ್ಗಗಳಾಗಿಲ್ಲದ ಜಾತಿ/ಸಮುದಾಯಗಳನ್ನು ಅಂತಹ ಪಟ್ಟಿಗಳಿಂದ ಕೈಬಿಡುವ ಅಥವಾ ಹೊಸ ಹಿಂದುಳಿದ ವರ್ಗಗಳನ್ನು ಪಟ್ಟಿಯಲ್ಲಿ ಸೇರಿಸುವ ಉದ್ದೇಶದಿಂದ ಹಿಂದುಳಿದ ವರ್ಗಗಳ ಆಯೋಗದೊಂದಿಗೆ ಸಮಾಲೋಚಿಸಿ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯನ್ನು ಪರಿಷ್ಕರಿಸಬಹುದಾಗಿದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 271 ಬಿಸಿಎ 2013 (ಭಾಗ –1) ದಿನಾಂಕ 23.01.2014 ರಲ್ಲಿ ಅಂದಿನ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಶ್ರೀ ಎಚ್.ಕಾಂತರಾಜ ನೇತೃತ್ವದ ಆಯೋಗಕ್ಕೆ ರಾಜ್ಯಾದ್ಯಂತ ಪ್ರತಿ ಕುಟುಂಬದ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳಲು ಆದೇಶ ಹೊರಡಿಸಿತು. ಹಿಂದಿನ ಆಯೋಗದ ಅಧ್ಯಕ್ಷರಾದ ಶ್ರೀ ಹೆಚ್ ಕಾಂತರಾಜ ರವರ ಸಾಮಾಜಿಕ ಕಳಕಳಿ ಹಾಗೂ ಅವರ ಅವಿರತ ಪ್ರಯತ್ನದಿಂದಾಗಿ ಸಮೀಕ್ಷಾ ಕಾರ್ಯವನ್ನು ಕೈಗೊಂಡು, ರಾಜ್ಯದ ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಹಾಗೂ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಮನೆಮನೆಗೆ ತೆರಳಿ ರಾಜ್ಯಾದ್ಯಂತ ನಾಗರಿಕರ ಪ್ರತಿ ಕುಟುಂಬದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಮಾಹಿತಿಯನ್ನು ಸಂಗ್ರಹಿಸಲಾಗಿರುತ್ತದೆ.

ಆಯೋಗವು ವಿವಿಧ ನಮೂನೆಗಳಲ್ಲಿ ಸಂಗ್ರಹಿಸಿದ ಮಾಹಿತಿ ಹಾಗೂ ದತ್ತಾಂಶಗಳನ್ನು ಬಿ.ಇ.ಎಲ್ ಸಂಸ್ಥೆ ಮೂಲಕ ಕ್ರೋಢೀಕರಿಸಿ ಗಣಕೀಕರಣಗೊಳಿಸಲಾಗಿರುತ್ತದೆ. ಸದರಿ ವಿವರಗಳನ್ನು ಒಳಗೊಂಡ ದತ್ತಾಂಶಗಳನ್ನು ಕರ್ನಾಟಕ ಸರ್ಕಾರದ State Data Center ನಲ್ಲಿ ಸುರಕ್ಷಿತವಾಗಿ ಇಡಲಾಗಿರುತ್ತದೆ. ಆಯೋಗದ ಸಮೀಕ್ಷಾ ವಿವರ, ಅಂಕಿ–ಅಂಶ ಹಾಗೂ ದತ್ತಾಂಶಗಳನ್ನು Indian Institute of Management ರವರು Validate ಮಾಡಿರುತ್ತಾರೆ. ಶ್ರೀ ಎಚ್. ಕಾಂತರಾಜ ನೇತೃತ್ವದ ಆಯೋಗವು 2015ರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ ನೇತೃತ್ವದ ಪ್ರಸ್ತುತ ಆಯೋಗವು ನೇಮಕಗೊಂಡ ನಂತರ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 286 ಬಿಸಿಎ 2021 ದಿನಾಂಕ: 17.07.2023 ರಲ್ಲಿ ಆಯೋಗಕ್ಕೆ ನಿರ್ದೇಶನ ನೀಡಿ 2015ನೇ ಇಸವಿಯಲ್ಲಿ ಆಯೋಗವು ಸಂಗ್ರಹಿಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ದತ್ತಾಂಶಗಳನ್ನು ಉಪಯೋಗಿಸಿಕೊಂಡು ಆ ದತ್ತಾಂಶದ ಆಧಾರದ ಮೇಲೆ ಪೂರ್ಣ ಪ್ರಮಾಣದ ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸರ್ಕಾರವು ಸೂಚಿಸಿದ್ದರ ಮೇರೆಗೆ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ಆಯೋಗದಲ್ಲಿ ಸಂಗ್ರಹವಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ದತ್ತಾಂಶಗಳನ್ನು ಉಪಯೋಗಿಸಿಕೊಂಡು ವರದಿ ತಯಾರಿಸುವ ನಿಟ್ಟಿನಲ್ಲಿ ಹಿಂದುಳಿದಿರುವಿಕೆಯನ್ನು ಗುರುತಿಸುವುದು ಪ್ರಮುಖ ಅಂಶವಾಗಿರುತ್ತದೆ. ಪ್ರಯುಕ್ತ ಸಾಮಾಜಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ

ಸ್ಥಿತಿಗತಿಗಳನ್ನು ನಿರ್ಣಯಿಸಲು ವಿವಿಧ ಮಾನದಂಡಗಳನ್ನು ಅಳವಡಿಸುವುದು ಅವಶ್ಯವಿರುತ್ತದೆ. ಹಾಗಾಗಿ ಈ ಅಂಶಗಳಿಗೆ ಸಂಬಂಧಪಟ್ಟಂತೆ ನುರಿತ ವಿಷಯ ತಜ್ಞರ ಸಲಹೆ, ಅಭಿಪ್ರಾಯ ಅವಶ್ಯವಿದೆಯೆಂದು ಆಯೋಗವು ಪರಿಭಾವಿಸಿದೆ. ಅದರಂತೆ ಈ ಕೆಳಕಂಡ ವಿಷಯ ತಜ್ಞರಿಂದ ಅಭಿಪ್ರಾಯ/ಸಲಹೆಯನ್ನು ಪಡೆಯಲಾಗಿದೆ.

5.4 ವಿಷಯ ತಜ್ಞರ ವಿವರ

1. ಶ್ರೀ ಅಬ್ದುಲ್ ಅಜೀಜ್, ನಿವೃತ್ತ ಪ್ರಾಧ್ಯಾಪಕರು, ಅರ್ಥಶಾಸ್ತ್ರ, ಜನಸಂಖ್ಯಾ ಸಂಶೋಧನಾ ಕೇಂದ್ರ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ (ISEC), ನಾಗರಬಾವಿ, ಬೆಂಗಳೂರು.
2. ಶ್ರೀಮತಿ ಛಾಯಾ ಕೆ ದೇಗಾಂವ್ಕರ್, ನಿರ್ದೇಶಕರು, ಪಬ್ಲಿಕ್ ಅಫೇರ್ಸ್, ಸೆಂಟರ್, ಬೆಂಗಳೂರು.
3. ಶ್ರೀ ಪ್ರೊ. ಜೋಗನ್ ಶಂಕರ್, ಮಾಜಿ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
4. ಶ್ರೀ ಸಿ.ಎಂ. ಲಕ್ಷ್ಮಣ್, ಪ್ರಾಧ್ಯಾಪಕರು, ಜನಸಂಖ್ಯಾ ಸಂಶೋಧನಾ ಕೇಂದ್ರ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ (ISEC), ನಾಗರಬಾವಿ, ಬೆಂಗಳೂರು.
5. ಶ್ರೀ ಸಿ. ಕೆಂಪಯ್ಯ, ನಿವೃತ್ತ ಅಪರ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

ಅಧ್ಯಾಯ –6

ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿ

6.1 ಸಮೀಕ್ಷೆಯ ಉದ್ದೇಶಗಳು:

ಈ ಕೆಳಗಿನ ಅಂಶಗಳ ಬಗ್ಗೆ ತಿಳಿದುಕೊಳ್ಳಲು ಪ್ರತಿ ಕುಟುಂಬದ ಮಟ್ಟದಲ್ಲಿ ವೈಜ್ಞಾನಿಕ ದತ್ತಾಂಶವನ್ನು ಸಂಗ್ರಹಿಸುವುದು ಇದರ ಮೂಲ ಉದ್ದೇಶವಾಗಿದೆ:

- ನಾಗರಿಕರ ಜೀವನ ಮಟ್ಟ ಮತ್ತು ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ.
- ಹಿಂದುಳಿದ ವರ್ಗಗಳ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಗುರುತಿಸಿ ಸಮಸ್ಯೆಗಳನ್ನು ತಿಳಿದುಕೊಳ್ಳುವುದು.
- ಸಾಕ್ಷ್ಯಾಧಾರಿತ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ರೂಪಿಸಲು ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸುವುದು.
- ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯ ಆಧಾರದ ಮೇಲೆ ಹೊಸ ಜಾತಿಗಳನ್ನು ಪ್ರವರ್ಗವಾರು ಸೇರ್ಪಡೆಗೊಳಿಸುವುದು ಹಾಗೂ ಮುಂದುವರೆದಿರುವ ಜಾತಿಗಳನ್ನು ಗುರುತಿಸಿ ಕೈಬಿಡುವುದು ಇತ್ಯಾದಿ.
- ರಾಜ್ಯದ ನಾಗರೀಕರ ಪ್ರಸ್ತುತ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿ ಹಾಗೂ ಹಿಂದುಳಿದಿರುವಿಕೆಯ ಆಧಾರದ ಮೇಲೆ ಮೀಸಲಾತಿ, ಸೌಲಭ್ಯ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸರ್ಕಾರಕ್ಕೆ ನಿಖರ ಅಂಕಿಅಂಶಗಳನ್ನು ಒದಗಿಸುವುದು.

6.2 ಸಮೀಕ್ಷೆಯ ವ್ಯಾಪ್ತಿ

ಸಮೀಕ್ಷೆಯ ಸಮಯದಲ್ಲಿ, 51 ಮಾನದಂಡಗಳ ಮೇಲೆ, ಕಾಲಂವಾರು 54 ಪ್ರಶ್ನಾವಳಿಗಳನ್ನು ಒಳಗೊಂಡಿರುವ ಸಮೀಕ್ಷೆಯ ನಮೂನೆಯನ್ನು ಬಳಸಿಕೊಂಡು, ಪ್ರಾಯೋಗಿಕ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಈ ನಮೂನೆಯು ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡಕ್ಕೂ ಪ್ರತ್ಯೇಕವಾಗಿ, ಜಾತಿಗಳು ಮತ್ತು ಸಮುದಾಯದ ಹೆಸರುಗಳು, ಮತ-ಪಂಥ ಮತ್ತು ಅವರ ಜನಸಂಖ್ಯಾ ಮತ್ತು ಸಾಮಾಜಿಕ ಪ್ರವೃತ್ತಿಗಳು, ಶೈಕ್ಷಣಿಕ ಮಟ್ಟ, ಆರ್ಥಿಕ ಪರಿಸ್ಥಿತಿಗಳು, ಉದ್ಯೋಗ, ಕುಟುಂಬದ ಸಾಂಪ್ರದಾಯಿಕ ಉದ್ಯೋಗದ ವಿವರಗಳು, ರಾಜಕೀಯ ಪ್ರಾತಿನಿಧ್ಯಗಳು, ಮಾತೃಭಾಷೆ, ಮೀಸಲಾತಿ ನೀತಿಯಿಂದ ಪಡೆದ ಪ್ರಯೋಜನಗಳು, ಆಧಾರ್ ಕಾರ್ಡ್ ವಿವರಗಳು, ಬ್ಯಾಂಕ್ ಖಾತೆ ವಿವರಗಳು ಮತ್ತು ಭೂ ಹಿಡುವಳಿಗಳ ವಿವರಗಳು, ನೀರಾವರಿ ಮೂಲ, ಸಂಬಂಧಿತ ಕೃಷಿ ಚಟುವಟಿಕೆಗಳು, ವಾಸಿಸುವ ಪ್ರದೇಶದ ಸ್ವರೂಪ, ಕುಡಿಯುವ ನೀರು, ಅಡುಗೆಗೆ ಬಳಸುವ ಇಂಧನ, ಶೌಚಾಲಯ ಸೌಲಭ್ಯಗಳು, ಬೆಳಕಿನ ಮೂಲ ಇತ್ಯಾದಿ ಕುಟುಂಬದ ವಿವರಗಳನ್ನು ಒಳಗೊಂಡಿದೆ.

ಸಮೀಕ್ಷೆಯಲ್ಲಿ, ಕರ್ನಾಟಕದ 1,35,35,772 ಮನೆಗಳಿಂದ, 180 ಪರಿಶಿಷ್ಟ ಜಾತಿಗಳು ಮತ್ತು 105 ಪರಿಶಿಷ್ಟ ಪಂಗಡಗಳು ಸೇರಿದಂತೆ 1,351 ಜಾತಿಗಳು ಮತ್ತು ಸಮುದಾಯಗಳ ಮತ್ತು 398 ಗುರುತಿಸಿಲ್ಲದ ಜಾತಿಗಳು, ತಮ್ಮ ಜಾತಿ ತಿಳಿದಿಲ್ಲ ಎಂದು ಪ್ರತಿಕ್ರಿಯಿಸಿರುವ 1,94,003 ವ್ಯಕ್ತಿಗಳು, ತಾವು ಯಾವುದೇ ಜಾತಿಗೆ ಸೇರಿದವರಲ್ಲ ಎಂದು ಹೇಳಿದ 1,34,319 ವ್ಯಕ್ತಿಗಳು, ತಮ್ಮ ಜಾತಿಯನ್ನು ಬಹಿರಂಗಪಡಿಸಲು ನಿರಾಕರಿಸಿದ 253954 ಜನರು ಸೇರಿದಂತೆ ಒಟ್ಟು 5,98,14,942 ವ್ಯಕ್ತಿಗಳ ದತ್ತಾಂಶವನ್ನು ಸಂಗ್ರಹಿಸಲಾಗಿದೆ.

ಅಧ್ಯಾಯ –7

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ದತ್ತಾಂಶ ಸಂಗ್ರಹಣೆಯ ನಮೂನೆಗಳು ಮತ್ತು ಪ್ರಶ್ನಾವಳಿಗಳು

ಕರ್ನಾಟಕ ರಾಜ್ಯದಲ್ಲಿ ವಾಸವಿರುವ ಪ್ರತಿಯೊಬ್ಬ ನಾಗರೀಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಮಾಹಿತಿಯನ್ನು ಸಂಗ್ರಹಿಸಲು ಆಯೋಗವು ವಿವಿಧ 54 ಮಾನದಂಡಗಳು/ಪ್ರಶ್ನಾವಳಿಗಳನ್ನು ಒಳಗೊಂಡಂತೆ ಜನಸಂಖ್ಯೆ, ಶೈಕ್ಷಣಿಕ, ಆರ್ಥಿಕ, ಉದ್ಯೋಗ, ಸಾಂಪ್ರದಾಯಿಕ ಉದ್ಯೋಗ, ಆದಾಯ, ಸಾಮಾಜಿಕ ಸ್ಥಾನಮಾನ ಮತ್ತು ಸ್ವತ್ತು/ಆಸ್ತಿ ಮಾಲೀಕತ್ವ ಮತ್ತಿತರ ಮಾಹಿತಿಗಳನ್ನು ಈ ಕೆಳಕಂಡ ರೀತಿಯಲ್ಲಿ ಸಂಗ್ರಹಿಸಲಾಗಿದೆ.

(I) ಜನಸಂಖ್ಯಾ ಮಾಹಿತಿ:

(1) ಕ್ರಮ ಸಂಖ್ಯೆ (2) ಕುಟುಂಬದ ಮುಖ್ಯಸ್ಥರು ಮತ್ತು ಸದಸ್ಯರುಗಳ ಹೆಸರು, (3) ಕುಟುಂಬದ ಮುಖ್ಯಸ್ಥರೊಂದಿಗಿನ ಸಂಬಂಧ, (4) ಲಿಂಗ (ಪುರುಷ, ಮಹಿಳೆ, ತೃತೀಯ ಲಿಂಗ), (5) ಧರ್ಮ, (6) ಜಾತಿ (7) ಉಪಜಾತಿ, 8) ಜಾತಿಗೆ ಇರುವ ಇನ್ನಿತರೆ ಪರ್ಯಾಯ ಹೆಸರುಗಳು (ಗರಿಷ್ಠ 3), (9) ಪೂರ್ಣಗೊಂಡ ವಯಸ್ಸು (ವರ್ಷಗಳಲ್ಲಿ), (10) ಮಾತೃಭಾಷೆ, (11) ಆಧಾರ್ ಕಾರ್ಡ್ ಸಂಖ್ಯೆ. (ವಿತರಣೆ ಮಾಡಿದ್ದರೆ), (12) ಚುನಾವಣಾ ಆಯೋಗದ ಗುರುತಿನ ಚೀಟಿ ಸಂಖ್ಯೆ. (ಪಡೆದಿದ್ದರೆ), (13) ಅಂಗವಿಕಲರಾಗಿದ್ದರೆ (14) ವೈವಾಹಿಕ ಸ್ಥಾನಮಾನ, (15) ವಿವಾಹದ ಸಮಯದಲ್ಲಿನ ವಯಸ್ಸು,

(II) ಶೈಕ್ಷಣಿಕ ವಿವರಗಳು:

(16) ಶಾಲೆಗೆ ಸೇರಿದ ಸಮಯದಲ್ಲಿ ವಯಸ್ಸು, (17) ಶಾಲೆಯ ವಿಧ, (18) ಶೈಕ್ಷಣಿಕ ವಿವರಗಳು (ಗರಿಷ್ಠ ವಿದ್ಯಾರ್ಹತೆ), (19) ಶಾಲೆ ಬಿಟ್ಟಾಗಿನ ತರಗತಿ, (20) ಶಾಲೆ ಬಿಟ್ಟಾಗಿನ ವಯಸ್ಸು (21) ಶಾಲೆ ಬಿಡಲು ಕಾರಣಗಳು, (22) 17 ರಿಂದ 40 ವರ್ಷ ವಯಸ್ಸಿನವರು ಶಿಕ್ಷಣವನ್ನು ಮುಂದುವರೆಸದಿರಲು ಕಾರಣಗಳು (23) ಅನಕ್ಷರಸ್ಥರಾಗಿದ್ದರೆ, ಕಾರಣಗಳು,

(III) ಆರ್ಥಿಕ/ ಉದ್ಯೋಗ/ ಸಾಂಪ್ರದಾಯಿಕ ವೃತ್ತಿ:

(24) ನೀವು ಹಾಲಿ ಕೆಲಸ ಮಾಡುತ್ತಿದ್ದೀರಾ? (25) ಸರ್ಕಾರಿ / ಖಾಸಗಿ ವಲಯಗಳಲ್ಲಿ ಸೇವೆ / ಉದ್ಯೋಗ (ಮಾಸಿಕ ವೇತನ ಆಧಾರದ ಮೇಲೆ), (26) ನಿಮ್ಮ ಹಾಲಿ ಉದ್ಯೋಗ / ವ್ಯಾಪಾರ ಏನು? (ಸ್ವಯಂ ಉದ್ಯೋಗ), (27) ನಿಮ್ಮ ಕುಟುಂಬದ ಸಾಂಪ್ರದಾಯಿಕ ಕುಲಕಸುಬು ಯಾವುದು? (28) ಸದರಿ ಕಸುಬು ಮುಂದುವರೆದಿದೆಯೇ?, (29) ಸದರಿ ಕಸುಬಿನಿಂದ ಬಂದ ಖಾಯಿಲೆಗಳು, (30) ಅಸಂಘಟಿತ ಕ್ಷೇತ್ರದಲ್ಲಿನ ದಿನಗೂಲಿ ಕೆಲಸಗಾರರು,

(IV) ಆದಾಯ:

(31) ವಾರ್ಷಿಕ ಆದಾಯ, (32) ನೀವು ಆದಾಯ ತೆರಿಗೆ ಪಾವತಿದಾರರೇ?, (33) ನೀವು ಬ್ಯಾಂಕ್ ಖಾತೆಯನ್ನು ಹೊಂದಿದ್ದೀರಾ?

(V) ಸಾಮಾಜಿಕ:

(34) ಮೀಸಲಾತಿ ನೀತಿಯಿಂದ ಪಡೆದಿರುವ ಶೈಕ್ಷಣಿಕ ಸೌಲಭ್ಯಗಳು, (35) ಮೀಸಲಾತಿ ನೀತಿಯಿಂದ ಪಡೆದಿರುವ ಉದ್ಯೋಗ ಸೌಲಭ್ಯಗಳು, (36) ನೀವು ಜಾತಿ ಪ್ರಮಾಣ ಪತ್ರ ಪಡೆದಿರುತ್ತೀರಾ?, (37) ನೀವು ಅಲೆಮಾರಿ/ಅರೆ ಅಲೆಮಾರಿ ಬುಡಕಟ್ಟಿನ ಜನಾಂಗಕ್ಕೆ ಸೇರಿದ್ದೀರಾ?, (38) ಜನಪ್ರತಿನಿಧಿ/ ಪದಾಧಿಕಾರಿಗಳಾಗಿದ್ದಲ್ಲಿ ವಿವರಗಳು, (39) ನಿಗಮ-ಮಂಡಳಿ/ಸಹಕಾರಿ ಸಂಘ/ಸರ್ಕಾರೇತರ ಸಂಸ್ಥೆ/ಸಂಘಗಳಲ್ಲಿ ಸದಸ್ಯ ಅಥವಾ ಪದಾಧಿಕಾರಿಗಳಾಗಿದ್ದಲ್ಲಿ ವಿವರಗಳು,

(VI) ಆಸ್ತಿ / ಸ್ವತ್ತಿನ ಮಾಲೀಕತ್ವ ಮತ್ತು ಇತರ ಸಂಬಂಧಿತ ವಿಷಯಗಳು:

(40) ಕುಟುಂಬವು ಹೊಂದಿರುವ ಒಟ್ಟು ಜಮೀನು(ಕುಟುಂಬದ ಎಲ್ಲಾ ಸದಸ್ಯರಿಗೆ ಸಂಬಂಧಿಸಿದವು) (41) ಕುಟುಂಬದ ಸಾಲ, (42) ಕೃಷಿ-ಸಂಬಂಧಿತ ಚಟುವಟಿಕೆಗಳು, (43) ಕುಟುಂಬವು ಹೊಂದಿರುವ ಜಾನುವಾರುಗಳು, (44) ಕುಟುಂಬವು ಹೊಂದಿರುವ ಸ್ಥಿರಾಸ್ತಿ (ಕುಟುಂಬದ ಎಲ್ಲಾ ಸದಸ್ಯರಿಗೆ ಅನ್ವಯವಾಗುವಂತೆ), (45) ಮನೆಯ ಒಡೆತನದ ಚರಾಸ್ತಿಗಳು (ಕುಟುಂಬದ ಎಲ್ಲಾ ಸದಸ್ಯರಿಗೆ ಅನ್ವಯವಾಗುವಂತೆ), (46) ಕುಟುಂಬವು ಸರ್ಕಾರದಿಂದ ಪಡೆದ ಸವಲತ್ತುಗಳು (ಕುಟುಂಬದ ಎಲ್ಲಾ ಸದಸ್ಯರಿಗೆ ಅನ್ವಯವಾಗುವಂತೆ), (47) ಪಡಿತರ ಚೀಟಿ ಸಂಖ್ಯೆ., (48) ವಾಸಸ್ಥಳದ ಸ್ವರೂಪ (49) ಹಾಲಿ ವಾಸವಿರುವ ಮನೆಯ ಮಾಲೀಕತ್ವದ ಸ್ವರೂಪ, (50) ವಾಸವಿರುವ ಮನೆಯ ವಿಧ ಹಾಗೂ ಉಪಯೋಗ, (51) ನೀವು ನಿವೇಶನವನ್ನು ಹೊಂದಿದ್ದೀರಾ? (52) ಕುಡಿಯುವ ನೀರಿನ ಮೂಲ, (53) ಶೌಚಾಲಯದ ವ್ಯವಸ್ಥೆ, (54) ಅಡುಗೆಗೆ ಬಳಸಲಾಗುವ ಪ್ರಮುಖ ಇಂಧನ, (55) ದೀಪದ ಮೂಲ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳುವ ಮೊದಲು ಆಯೋಗವು ಸವಿಸ್ತಾರವಾಗಿ ಚರ್ಚಿಸಿ ಹಲವಾರು ನುರಿತ ವಿಷಯ ತಜ್ಞರು ಹಾಗೂ ಅನುಭವಿ ಪರಿಣತರಿಂದ ಅಭಿಪ್ರಾಯವನ್ನು ಪಡೆದಿರುತ್ತದೆ. ಸಮೀಕ್ಷೆಗೆ ಅಳವಡಿಸಿಕೊಳ್ಳಬೇಕಾದ ಮಾನದಂಡಗಳು ಅಂಶಗಳು, ವಿವಿಧ ನಮೂನೆಗಳು, ಗಣತಿದಾರರ ತರಬೇತಿಯ ಬಗ್ಗೆ ಮಾಹಿತಿಯನ್ನೊಳಗೊಂಡ ವಿಸ್ತೃತವಾದ ವಿವರಗಳನ್ನು 'ಮಾಹಿತಿ ಕೈಪಿಡಿ'ಯಲ್ಲಿ ನೀಡಲಾಗಿದೆ. **(ಅನುಬಂಧ-1)**

2015ರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಂಗ್ರಹಿಸಿದ ಜಾತಿವಾರು/ಸಮುದಾಯವಾರು ಜನಸಂಖ್ಯೆಯ ವಿವರಗಳು ಈ ಕೆಳಕಂಡಂತಿವೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2015ರಲ್ಲಿ ಸಂಗ್ರಹಿಸಿದ ಜಾತಿವಾರು/ಸಮುದಾಯವಾರು ಜನಸಂಖ್ಯೆಯ ವಿವರಗಳು

Castes and Communitywise Population of Karnataka State - Social and Educational Survey - 2015

Sl.No		Caste Name	Total Households			Total Population			Percentage to State Population	Gender								
										Male			Female			Third Gender		
			Rural	Urban	Total	Rural	Urban	Total		Rural	Urban	Total	Rural	Urban	Total	Rural	Urban	Total
1	2	3	4	5	6	7	8	9	10	11	12	13	14	15	16	17	18	19
1		AGAMUDI	1,537	7,983	9,520	6,591	31,666	38,257	0.064	3,360	16,037	19,397	3,231	15,624	18,855	0	5	5
		Total	**1,537**	**7,983**	**9,520**	**6,591**	**31,666**	**38,257**	**0.064**	**3,360**	**16,037**	**19,397**	**3,231**	**15,624**	**18,855**	**0**	**5**	**5**
2		AGARI	0	2	2	0	7	7	0.000	0	4	4	0	3	3	0	0	0
		Total	**0**	**2**	**2**	**0**	**7**	**7**	**0.000**	**0**	**4**	**4**	**0**	**3**	**3**	**0**	**0**	**0**
3	(a)	AGASA	19,009	6,597	25,606	87,124	27,077	1,14,201	0.191	43,960	13,654	57,614	43,156	13,410	56,566	8	13	21
	(b)	CHAKALA	110	359	469	435	1,277	1,712	0.003	221	652	873	214	625	839	0	0	0
	(c)	CHAKKALA VANDLU	60	80	140	258	271	529	0.001	121	127	248	137	144	281	0	0	0
	(d)	DHOBI	4,813	5,224	10,037	19,806	20,750	40,556	0.068	10,120	10,485	20,605	9,682	10,256	19,938	4	9	13
	(e)	MADIVALA / MADIVALAR	76,388	33,032	1,09,420	3,28,451	1,33,784	4,62,235	0.773	1,65,397	67,003	2,32,400	1,62,979	66,726	2,29,705	75	55	130
	(f)	MANNAN	32	127	159	112	425	537	0.001	59	205	264	53	220	273	0	0	0
	(g)	PAREETA (MADIVALA)	756	342	1,098	3,625	1,426	5,051	0.008	1,809	707	2,516	1,816	719	2,535	0	0	0
	(h)	PARIT	591	472	1,063	2,671	1,975	4,646	0.008	1,368	979	2,347	1,299	996	2,295	4	0	4
	(i)	RAJAKA	103	353	456	395	1,347	1,742	0.003	217	703	920	178	642	820	0	2	2
	(j)	SAKALAVADU / SAKAJAVADU	24	38	62	98	146	244	0.000	49	74	123	49	72	121	0	0	0
	(k)	SAKALA / TSAKALA	42	207	249	184	753	937	0.002	106	383	489	78	370	448	0	0	0
	(l)	VANNAN	36	150	186	124	524	648	0.001	73	267	340	51	256	307	0	1	1
	(m)	VELLUTHEDAN	139	72	211	588	268	856	0.001	301	147	448	287	121	408	0	0	0
		Total	**1,02,103**	**47,053**	**1,49,156**	**4,43,871**	**1,90,023**	**6,33,894**	**1.060**	**2,23,801**	**95,386**	**3,19,187**	**2,19,979**	**94,557**	**3,14,536**	**91**	**80**	**171**
4	(a)	AGHORI	90	198	288	407	683	1,090	0.002	214	383	597	193	300	493	0	0	0
	(b)	KARKARMUNDA / KARKARMUNDI	49	35	84	249	135	384	0.001	142	70	212	107	65	172	0	0	0
		Total	**139**	**233**	**372**	**656**	**818**	**1,474**	**0.002**	**356**	**453**	**809**	**300**	**365**	**665**	**0**	**0**	**0**
5		AGNANI	151	190	341	627	692	1,319	0.002	317	356	673	309	336	645	1	0	1
		Total	**151**	**190**	**341**	**627**	**692**	**1,319**	**0.002**	**317**	**356**	**673**	**309**	**336**	**645**	**1**	**0**	**1**
6		AHOM	3	1	4	14	2	16	0.000	12	1	13	2	1	3	0	0	0
		Total	**3**	**1**	**4**	**14**	**2**	**16**	**0.000**	**12**	**1**	**13**	**2**	**1**	**3**	**0**	**0**	**0**
7		ALIYA	0	0	0	0	5	5	0.000	0	2	2	0	3	3	0	0	0
		Total	**0**	**0**	**0**	**0**	**5**	**5**	**0.000**	**0**	**2**	**2**	**0**	**3**	**3**	**0**	**0**	**0**
8	(a)	AMBALAKARAN	986	787	1,773	4,448	3,094	7,542	0.013	2,274	1,556	3,830	2,174	1,536	3,710	0	2	2
	(b)	AMBALAKARMA	317	599	916	1,399	2,384	3,783	0.006	700	1,194	1,894	699	1,182	1,881	0	8	8
	(c)	MATRACHA	81	90	171	336	376	712	0.001	171	193	364	165	183	348	0	0	0
	(d)	MUTRACHA	59	101	160	243	441	684	0.001	122	231	353	121	208	329	0	2	2
	(e)	MUTRASI	117	138	255	517	532	1,049	0.002	259	272	531	257	260	517	1	0	1
		Total	**1,560**	**1,715**	**3,275**	**6,943**	**6,827**	**13,770**	**0.023**	**3,526**	**3,446**	**6,972**	**3,416**	**3,369**	**6,785**	**1**	**12**	**13**
9	(a)	AMBALAVASI	83	224	307	331	923	1,254	0.002	184	472	656	147	450	597	0	1	1
	(b)	NAMBISHAN	0	2	2	0	6	6	0.000	0	4	4	0	2	2	0	0	0
		Total	**83**	**226**	**309**	**331**	**929**	**1,260**	**0.002**	**184**	**476**	**660**	**147**	**452**	**599**	**0**	**1**	**1**
10		AMMA KODAVA	557	353	910	2,200	1,309	3,509	0.006	1,104	671	1,775	1,095	638	1,733	1	0	1

Sl.No		Caste Name	Total Households			Total Population			Percentage to State Population	Gender								
										Male			Female			Third Gender		
			Rural	Urban	Total	Rural	Urban	Total		Rural	Urban	Total	Rural	Urban	Total	Rural	Urban	Total
		Total	557	353	910	2,200	1,309	3,509	0.006	1,104	671	1,775	1,095	638	1,733	1	0	1
11		ANAPPAN	99	183	282	412	706	1,118	0.002	[illegible]								
		Total	[illegible]															

Sl.No		Caste Name	Total Households Rural	Total Households Urban	Total Households Total	Total Population Rural	Total Population Urban	Total Population Total	Percentage to State Population	Male Rural	Male Urban	Male Total	Female Rural	Female Urban	Female Total	Third Gender Rural	Third Gender Urban	Third Gender Total
	(d)	MUTRACHA	59	101	160	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
	(e)	MUTRASI	117	138	255	517	532	1,049	0.002	259	272	531	[illegible]	[illegible]	[illegible]	[illegible]	[illegible]	[illegible]
		Total	1,560	1,715	3,275	6,943	6,827	13,770	0.023	3,526	3,446	6,972	3,416	3,369	6,785	1	12	13
9	(a)	AMBALAVASI	83	224	307	331	923	1,254	0.002	184	472	656	147	450	597	0	1	1
	(b)	NAMBISHAN	0	2	2	0	6	6	0.000	0	4	4	0	2	2	0	0	0
		Total	83	226	309	331	929	1,260	0.002	184	476	660	147	452	599	0	1	1
10		AMMA KODAVA	557	353	910	2,200	1,309	3,509	0.006	1,104	671	1,775	1,095	638	1,733	1	0	1

Sl.No		Caste Name	Total Households			Total Population			Percentage to State Population	Gender								
										Male			Female			Third Gender		
			Rural	Urban	Total	Rural	Urban	Total		Rural	Urban	Total	Rural	Urban	Total	Rural	Urban	Total
		Total	**557**	**353**	**910**	**2,200**	**1,309**	**3,509**	**0.006**	**1,104**	**671**	**1,775**	**1,095**	**638**	**1,733**	**1**	**0**	**1**
11		ANAPPAN	99	183	282	412	706	1,118	0.002	215	371	586	197	335	532	0	0	0
		Total	**99**	**183**	**282**	**412**	**706**	**1,118**	**0.002**	**215**	**371**	**586**	**197**	**335**	**532**	**0**	**0**	**0**
12		ANDHRAS / TELUGUS	198	631	829	761	2,259	3,020	0.005	391	1,193	1,584	370	1,063	1,433	0	3	3
		Total	**198**	**631**	**829**	**761**	**2,259**	**3,020**	**0.005**	**391**	**1,193**	**1,584**	**370**	**1,063**	**1,433**	**0**	**3**	**3**
13	(a)	ANDI	640	531	1,171	2,823	2,097	4,920	0.008	1,467	1,048	2,515	1,356	1,049	2,405	0	0	0
	(b)	ANDIPANDARAM	221	337	558	939	1,242	2,181	0.004	481	649	1,130	458	592	1,050	0	1	1
		Total	**861**	**868**	**1,729**	**3,762**	**3,339**	**7,101**	0.012	**1,948**	**1,697**	**3,645**	**1,814**	**1,641**	**3,455**	**0**	**1**	**1**
14		ANDURAN	391	289	680	1,693	1,094	2,787	0.005	916	565	1,481	776	529	1,305	1	0	1
		Total	**391**	**289**	**680**	**1,693**	**1,094**	**2,787**	**0.005**	**916**	**565**	**1,481**	**776**	**529**	**1,305**	**1**	**0**	**1**
15		ANGLO-INDIAN	37	278	315	137	942	1,079	0.002	71	474	545	66	468	534	0	0	0
		Total	**37**	**278**	**315**	**137**	**942**	**1,079**	**0.002**	**71**	**474**	**545**	**66**	**468**	**534**	**0**	**0**	**0**
16		ANSARI	0	4	4	0	21	21	0.000	0	15	15	0	6	6	0	0	0
		Total	**0**	**4**	**4**	**0**	**21**	**21**	**0.000**	**0**	**15**	**15**	**0**	**6**	**6**	**0**	**0**	**0**
17	(a)	ARASU / ARAS	1,778	2,211	3,989	6,858	8,250	15,108	0.025	3,509	4,134	7,643	3,345	4,112	7,457	4	4	8
	(b)	URS	2,384	975	3,359	8,585	3,702	12,287	0.021	4,262	1,839	6,101	4,321	1,862	6,183	2	1	3
		Total	**4,162**	**3,186**	**7,348**	**15,443**	**11,952**	**27,395**	**0.046**	**7,771**	**5,973**	**13,744**	**7,666**	**5,974**	**13,640**	**6**	**5**	**11**
18		ARCHAKALU	0	1	1	0	3	3	0.000	0	1	1	0	2	2	0	0	0
		Total	**0**	**1**	**1**	**0**	**3**	**3**	**0.000**	**0**	**1**	**1**	**0**	**2**	**2**	**0**	**0**	**0**
19		ARORA	0	6	6	0	18	18	0.000	0	11	11	0	7	7	0	0	0
		Total	**0**	**6**	**6**	**0**	**18**	**18**	**0.000**	**0**	**11**	**11**	**0**	**7**	**7**	**0**	**0**	**0**
20		ARYA KSHATRIYA	249	880	1,129	1,071	3,565	4,636	0.008	542	1,812	2,354	529	1,752	2,281	0	1	1
		Total	**249**	**880**	**1,129**	**1,071**	**3,565**	**4,636**	**0.008**	**542**	**1,812**	**2,354**	**529**	**1,752**	**2,281**	**0**	**1**	**1**
21		ARYA SAMAJA/ARYA SAMAJ	0	1	1	0	4	4	0.000	0	2	2	0	2	2	0	0	0
		Total	**0**	**1**	**1**	**0**	**4**	**4**	**0.000**	**0**	**2**	**2**	**0**	**2**	**2**	**0**	**0**	**0**
22		ARYAN	239	302	541	1,073	1,151	2,224	0.004	547	589	1,136	526	562	1,088	0	0	0
		Total	**239**	**302**	**541**	**1,073**	**1,151**	**2,224**	**0.004**	**547**	**589**	**1,136**	**526**	**562**	**1,088**	**0**	**0**	**0**
23		ASSAMESE	6	3	9	23	9	32	0.000	23	4	27	0	5	5	0	0	0
		Total	**6**	**3**	**9**	**23**	**9**	**32**	**0.0001**	**23**	**4**	**27**	**0**	**5**	**5**	**0**	**0**	**0**
24	(a)	ATARI	83	126	209	354	491	845	0.001	185	246	431	169	244	413	0	1	1
	(b)	ATHARI	119	137	256	377	540	917	0.002	298	267	565	79	273	352	0	0	0
		Total	**202**	**263**	**465**	**731**	**1,031**	**1,762**	**0.003**	**483**	**513**	**996**	**248**	**517**	**765**	**0**	**1**	**1**
25		BAANDHI	488	1,231	1,719	1,961	4,387	6,348	0.011	1,003	2,266	3,269	957	2,115	3,072	1	6	7
		Total	**488**	**1,231**	**1,719**	**1,961**	**4,387**	**6,348**	**0.011**	**1,003**	**2,266**	**3,269**	**957**	**2,115**	**3,072**	**1**	**6**	**7**
26		BADAGA	0	10	10	0	32	32	0.000	0	20	20	0	12	12	0	0	0

Sl.No		Caste Name	Total Households			Total Population			Percentage to State Population	Gender								
										Male			Female			Third Gender		
			Rural	Urban	Total	Rural	Urban	Total		Rural	Urban	Total	Rural	Urban	Total	Rural	Urban	Total
		Total	0	10	10	0	32	32	0.000	0	20	20	0	12	12	0	0	0
27		BADAYI	1	0	1	3	0	3	0.000	2	0	2	1	0	1	0	0	0
		Total	1	0	1	3	0	3	0.000	2	0	2	1	0	1	0	0	0
28	(a)	BAGADI	595	432	1,027	2,578	1,743	4,321	0.007	1,291	880	2,171	1,287	862	2,149	0	1	1
	(b)	BAGAADI	467	329	796	2,137	1,249	3,386	0.006	1,085	643	1,728	1,049	606	1,655	3	0	3
	(c)	BAGDI	248	949	1,197	1,037	3,196	4,233	0.007	544	1,669	2,213	492	1,527	2,019	1	0	1
		Total	1,310	1,710	3,020	5,752	6,188	11,940	0.020	2,920	3,192	6,112	2,828	2,995	5,823	4	1	5
29		BAGGA / BAGGARU	1,691	799	2,490	7,105	3,092	10,197	0.017	3,499	1,526	5,025	3,604	1,563	5,167	2	3	5
		Total	1,691	799	2,490	7,105	3,092	10,197	0.017	3,499	1,526	5,025	3,604	1,563	5,167	2	3	5
30		BAGRI	243	260	503	1,059	1,024	2,083	0.003	533	527	1,060	526	497	1,023	0	0	0
		Total	243	260	503	1,059	1,024	2,083	0.003	533	527	1,060	526	497	1,023	0	0	0
31		BAHA/BAHAI	0	2	2	0	8	8	0.000	0	5	5	0	3	3	0	0	0
		Total	0	2	2	0	8	8	0.000	0	5	5	0	3	3	0	0	0
32		BAHADUR	108	316	424	432	1,204	1,636	0.003	250	641	891	182	563	745	0	0	0
		Total	108	316	424	432	1,204	1,636	0.003	250	641	891	182	563	745	0	0	0
ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕು. ಸಂಕ್ಷಿಪ್ತ ಮನೆಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ಭೇಟಿ ನೀಡಿದಾಗ ಹೊಸದಾಗಿ ನಿರ್ಮಾಣಗೊಂಡ ಕಟ್ಟಡಕ್ಕೆ ಹೊಸ ಸಂಖ್ಯೆಯನ್ನು ನೀಡಬೇಕಾಗಿರುತ್ತದೆ. ಉದಾ: ಈಗಾಗಲೆ ಎಹೆಚ್ಎಲ್ ನಲ್ಲಿ ಕಟ್ಟಡ ಸಂಖ್ಯೆ 10 ಮತ್ತು 11ರ ಮಧ್ಯ ಖಾಲಿ ಇರುವ ನಿವೇಶನದಲ್ಲಿ ಹೊಸ ಕಟ್ಟಡ ನಿರ್ಮಾಣವಾಗಿದ್ದಲ್ಲಿ, ಆ ಕಟ್ಟಡಕ್ಕೆ 10/1 ಎಂದು ನಮೂದಿಸುವುದು. ಒಂದು ವೇಳೆ ಕೊನೆಯ ಕಟ್ಟಡ ಸಂಖ್ಯೆಯ ನಂತರ ಹೊಸ ಕಟ್ಟಡ ಬಂದಿದ್ದಲ್ಲಿ ಆ ಕಟ್ಟಡಕ್ಕೆ ಕೊನೆ ಸಂಖ್ಯೆ ನಂತರದ ಸಂಖ್ಯೆ ನೀಡಬೇಕು. ಉದಾ: ಕೊನೆ ಕಟ್ಟಡದ ಸಂಖ್ಯೆ 135 ಇದ್ದಲ್ಲಿ ಹೊಸದಾಗಿ ನಿರ್ಮಾಣಗೊಂಡ ಕಟ್ಟಡದ ಸಂಖ್ಯೆ 136 ಎಂದು ನೀಡಬೇಕು. ಹೊಸ ಕಟ್ಟಡ 10/1 ರಲ್ಲಿ 2 ಕುಟುಂಬಗಳು ಇದ್ದಲ್ಲಿ 10/1(1), 10/1(2) ಎಂದು ನಮೂದಿಸುವುದು. ಮುಂದುವರೆದು 10/1(1)ರ ಒಂದೇ ಮನೆಯಲ್ಲಿ ಈಗ 2 ಕುಟುಂಬಗಳು ವಾಸಿಸುತ್ತಿದ್ದರೆ ಅವುಗಳಿಗೆ 10/1(1)(ಎ), 10/1(1)(ಬಿ) ಎಂದು ನಮೂದಿಸುವುದು.

ಎಹೆಚ್ಎಲ್ ಲಭ್ಯವಿಲ್ಲದಿದ್ದಾಗ ನಮೂನೆ 2ರ ಮನೆಪಟ್ಟಿಯನ್ನು ಲೇಔಟ್ ಮ್ಯಾಪ್ ಆಧಾರದ ಮೇಲೆ ಹೊಸದಾಗಿ ತಯಾರಿಸಬೇಕು. ಇಂತಹ ಸಂದರ್ಭದಲ್ಲಿ ಕಾಲಂ 2 ರಲ್ಲಿ ಕಟ್ಟಡದ ಸಂಖ್ಯೆಯನ್ನು 1 ರಿಂದ ಪ್ರಾರಂಭಿಸಿ ಕ್ರಮವಾಗಿ ಕಡೆಯ ಕಟ್ಟಡದವರೆವಿಗೂ ಸಂಖ್ಯೆಯನ್ನು ನೀಡಬೇಕು. ಅದೇ ರೀತಿ ಕಾಲಂ 3 ರಲ್ಲಿ ಜನಗಣತಿ ಮನೆ ಸಂಖ್ಯೆಯನ್ನು 1 ರಿಂದ ಪ್ರಾರಂಭಿಸಿ ಕ್ರಮವಾಗಿ ನೀಡಬೇಕು. ಅಲ್ಲದೆ, ನಮೂನೆ-3ರರೊಂದಿಗೆ ಸಮೀಕ್ಷೆಗಾಗಿ ಮನೆ ಮನೆಗೆ ಭೇಟಿ ಮಾಡುವ ಸಂದರ್ಭದಲ್ಲಿ ಅನುಕೂಲಮಾಡಿಕೊಳ್ಳುವ ಸಲುವಾಗಿ ಪರಿಷ್ಕರಣೆ ಮಾಡಿಕೊಂಡ ಸಂಕ್ಷಿಪ್ತ ಮನೆಪಟ್ಟಿಯ ಶುದ್ಧ ಪ್ರತಿಯನ್ನು ನಮೂನೆ-2ರಲ್ಲಿ ಪ್ರತ್ಯೇಕವಾಗಿ ತಯಾರಿಸಿಕೊಂಡು ಬಳಸಿಕೊಳ್ಳುವುದು ಸೂಕ್ತ.

ಈ ಪರಿಷ್ಕರಣಾ ಕಾರ್ಯವನ್ನು, ಗಣತಿದಾರರು ಅವರಿಗೆ ವಹಿಸಲಾದ ಬ್ಲಾಕುಗಳಲ್ಲಿ ಕೈಗೊಂಡು (ಪ್ರಾರಂಭದ 2-3 ದಿನಗಳು) ಸಮೀಕ್ಷೆಯನ್ನು ನಿರ್ವಹಿಸಬೇಕು.

ಮನೆಪಟ್ಟಿಯನ್ನು ಪರಿಷ್ಕರಿಸುವಾಗ ಬ್ಲಾಕಿನಲ್ಲಿರುವ ಮನೆಗಳನ್ನು ಪ್ರಾರಂಭದಿಂದ ಹಿಡಿದು ಕೊನೆಯವರೆಗಿನ ಮನೆಗಳಿಗೆ ಅನುಕ್ರಮ ಸಂಖ್ಯೆಯನ್ನು ಮನೆಯ ಮುಂಭಾಗದ ಬಾಗಿಲ ಬಳಿ ಗಣತಿದಾರರು ಬರೆಯಬೇಕು.

ಮನೆಯ ಸಮೀಕ್ಷೆಯನ್ನು ಮಾಡಿ ಮುಗಿಸಿದ ನಂತರ, ಸಮೀಕ್ಷಾ ಕಾರ್ಯ ಮುಗಿಸಿರುವ ಕುರಿತು ನಿಮಗೆ ನೀಡಿರುವ ಸ್ಟಿಕ್ಕರ್ (Sticker) ನ್ನು ಮನೆಯ ಬಾಗಿಲ ಮೇಲ್ಗಡೆ ಅಂಟಿಸುವುದು. ಈ ಸ್ಟಿಕ್ಕರ್‌ಗಳನ್ನು ಗಣತಿದಾರರಿಗೆ ಒದಗಿಸಲಾಗುವುದು.

ನಮೂನೆ – 3 (ಕುಟುಂಬದ ಅನುಸೂಚಿ) ಭರ್ತಿ ಮಾಡುವ ವಿಧಾನ :

4.1 ಕುಟುಂಬದ ಅನುಸೂಚಿಯು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾಗಿ ಸಂಗ್ರಹಿಸುವ ಮುಖ್ಯವಾದ ನಮೂನೆಯಾಗಿರುತ್ತದೆ. ಸದರಿ ನಮೂನೆಯಲ್ಲಿ ಪ್ರತಿ ಕುಟುಂಬದ ಸದಸ್ಯರ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ. ಕುಟುಂಬ ಅನುಸೂಚಿಯ ಪ್ರಾರಂಭದಲ್ಲಿ ಜಿಲ್ಲೆ, ತಾಲ್ಲೂಕು, ಗ್ರಾಮ, ಪಟ್ಟಣ, ವಾರ್ಡ್ ಹಾಗೂ ಬ್ಲಾಕುಗಳಿಗೆ ಅನ್ವಯಿಸುವ ವಿವರಗಳನ್ನು ಭರ್ತಿಮಾಡುವುದು. ಇದರಲ್ಲಿ ನೀವು ಸ್ಥಳಗಳ ಗುರುತಿಗೆ ಸಂಬಂಧಿಸಿದಂತೆ ಕೆಲವಷ್ಟು ಸಂಕೇತ ಸಂಖ್ಯೆಗಳನ್ನು ಭರ್ತಿ ಮಾಡಬೇಕಾಗಿದ್ದು, ಛಾರ್ಜ್ ಅಧಿಕಾರಿಗಳು ನಿಮಗೆ ನೀಡುವ ಸಂಕ್ಷಿಪ್ತ ಮನೆ ಪಟ್ಟಿಯಲ್ಲಿ ಈ ಮಾಹಿತಿ ಲಭ್ಯವಿರುತ್ತದೆ. ತರಬೇತಿ ಸಮಯದಲ್ಲಿ ಈ ಸಂಕೇತಗಳನ್ನು ಸರಿಯಾಗಿ ಧೃಢಪಡಿಸಿಕೊಳ್ಳುವುದು ಮತ್ತು ಸಮೀಕ್ಷಾ ಅವಧಿಯಲ್ಲಿ ಇವುಗಳನ್ನು ತಪ್ಪಾಗದಂತೆ ನಮೂನೆಯ ನಿಗಧಿತ ಬಾಕ್ಸ್‌ನಲ್ಲಿ ನಮೂದಿಸುವುದು. ವಿವಿಧ ಹಂತವಾರು ಮಾಹಿತಿ ಸಂಕಲನಕ್ಕೆ ಈ ವಿವರಗಳು ಮುಖ್ಯವಾಗುವುದರಿಂದ ಇದನ್ನು ನಿಖರವಾಗಿ ನಮೂದಿಸಬೇಕು. ಕುಟುಂಬಕ್ಕೆ ಸಂಬಂಧಿಸಿದಂತೆ 2 ಭಾಗಗಳಲ್ಲಿ ನೀವು ಮಾಹಿತಿಯನ್ನು ಸಂಗ್ರಹಿಸಬೇಕಾಗಿದ್ದು ಇದರಲ್ಲಿ ಕಾಲಂ ಸಂಖ್ಯೆ 1 ರಿಂದ 39ರವರೆಗೆ ಕುಟುಂಬದ ಪ್ರತಿ ಸದಸ್ಯರಿಗೆ ಸಂಬಂಧಿಸಿದ ಮಾಹಿತಿಯನ್ನು ಮತ್ತು ಸಾಲು (ಕಾಲಂ)40 ರಿಂದ 55ರವರೆಗೆ ಕುಟುಂಬಕ್ಕೆ ಸಂಬಂಧಿಸಿದ ಒಟ್ಟಾರೆ ಮಾಹಿತಿಯನ್ನು ನಮೂದಿಸುವುದು.

ಭಾಗ-I ರಲ್ಲಿ ಕುಟುಂಬದ ಮುಖ್ಯಸ್ಥ ಮತ್ತು ಸದಸ್ಯರ ವೈಯಕ್ತಿಕ ವಿವರಗಳು, ಶೈಕ್ಷಣಿಕ ಮತ್ತು ಔದ್ಯೋಗಿಕ, ಆರ್ಥಿಕ ಮತ್ತು ರಾಜಕೀಯ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ವಿವರಗಳು ಹಾಗೂ ಭಾಗ-IIರಲ್ಲಿ ಕುಟುಂಬದ

ಮಾಹಿತಿಗಳ ವಿವರಗಳನ್ನು ಸಂಗ್ರಹಿಸುವ ಕಾಲಂಗಳಿರುತ್ತವೆ. ಎರಡು–ಮೂರು ಕಾಲಂಗಳನ್ನು ಬಿಟ್ಟರೆ ಇನ್ನುಳಿದ ಕಾಲಂಗಳಲ್ಲಿ ನಮೂದಿಸುವ ವಿವರಗಳನ್ನು ಸಂಕೇತ ಸಂಖ್ಯೆಗಳ ಮೂಲಕ ದಾಖಲಿಸಬೇಕಾಗುತ್ತದೆ. ಅಂತಹ ಸಂಕೇತ ಸಂಖ್ಯೆಗಳನ್ನು ಒಳಗೊಂಡಿರುವ ಸಮಗ್ರ ಸಂಕೇತ ಪಟ್ಟಿಯನ್ನು ಸಿದ್ಧಪಡಿಸಿದ್ದು ಅದನ್ನು ಗಣತಿದಾರರ ಕೈಪಿಡಿಯ ಅನುಬಂಧ–2ರಲ್ಲಿ ಅಳವಡಿಸಲಾಗಿದೆ. ಅವುಗಳನ್ನು ಬಹು ಜಾಗರೂಕತೆಯಿಂದ ಓದಿ ಮನನ ಮಾಡಿಕೊಂಡು ಸ್ಪಷ್ಟವಾಗಿ ಅನ್ವಯಿಸುವ ಸಂಕೇತ ಸಂಖ್ಯೆಯನ್ನು ಸಂಬಂಧಪಟ್ಟ ಕಾಲಂನಲ್ಲಿ ಗೊತ್ತುಪಡಿಸಿರುವ ಚೌಕದಲ್ಲಿ (ಬಾಕ್ಸ್) ನಮೂದಿಸುವುದು. ಕೆಲವು ಮಾಹಿತಿಗಳನ್ನು ಕೇವಲ ಒಂದು ಸಂಕೇತ ಸಂಖ್ಯೆಯಿಂದ ವ್ಯಕ್ತಪಡಿಸಬಹುದಾಗಿದ್ದರೆ, ಇನ್ನು ಕೆಲವು ಮಾಹಿತಿಗಳಿಗೆ ಬಹು ಸಂಕೇತಗಳು (Multiple Codes) ಅನ್ವಯವಾಗುತ್ತಿದ್ದು, ಅವುಗಳನ್ನು ನಮೂದಿಸಲು, ಅಗತ್ಯಕ್ಕನುಸಾರವಾಗಿ, ಹೆಚ್ಚುವರಿ ಬಾಕ್ಸುಗಳಿಗೆ ಅವಕಾಶ ಕಲ್ಪಿಸಲಾಗಿದೆ.

4.2 ಕುಟುಂಬದ ಜವಾಬ್ದಾರಿಯುತ ಸದಸ್ಯರೊಬ್ಬರಿಂದ ವಿಚಾರಣೆಯ ಮೂಲಕ ಕುಟುಂಬದ ಅನುಸೂಚಿಯಲ್ಲಿ ಮಾಹಿತಿ ಸಂಗ್ರಹಿಸಬೇಕಾಗುತ್ತದೆ. ಕುಟುಂಬದ ಅನುಸೂಚಿಯನ್ನು ಭರ್ತಿ ಮಾಡಲು ಅಗತ್ಯವಾದ ಮಾಹಿತಿಯನ್ನು ಸ್ಪಷ್ಟವಾಗಿ ಹೇಳಬಲ್ಲ ಕುಟುಂಬದ ಸದಸ್ಯರೊಬ್ಬರಿಂದ ವಿವರ ಪಡೆಯಬೇಕು. ಕುಟುಂಬ ಅನುಸೂಚಿಯಲ್ಲಿರುವ ಬಹಳಷ್ಟು ಕಾಲಂಗಳಿಗೆ ನೀಡಬೇಕಾದ ಉತ್ತರಗಳನ್ನು ಸಂಕೇತ ಸಂಖ್ಯೆಗಳ ಮೂಲಕ ಪಡೆಯಲು ಯೋಜಿಸಲಾಗಿದೆ. ಅನುಸೂಚಿಯಲ್ಲಿ ಕುಟುಂಬದ ಸದಸ್ಯರ ಹೆಸರುಗಳನ್ನು ಮಾತ್ರ ಅಕ್ಷರಗಳಲ್ಲಿ ಬರೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಜಾತಿಪಟ್ಟಿಯಲ್ಲಿ (ಅನುಬಂಧ–3ಎ, 3ಬಿ ಮತ್ತು 3ಸಿ) ಸೇರ್ಪಡೆಯಾಗದೇ ಇರುವ ಜಾತಿ/ಉಪಜಾತಿಗಳನ್ನು ನಮೂದಿಸುವ ಸಲುವಾಗಿ ಕುಟುಂಬದ ಅನುಸೂಚಿಯ ಪುಟ–1ರ ಕೆಳಭಾಗದಲ್ಲಿ @ಚಿಹ್ನೆಯನ್ನು ನಮೂದಿಸಿ, ಸ್ಥಳಾವಕಾಶವನ್ನು ಕಲ್ಪಿಸಲಾಗಿದ್ದು, ಸಮೀಕ್ಷಾ ಕಾಲದಲ್ಲಿ ಮಾಹಿತಿ ನೀಡುವ ವ್ಯಕ್ತಿಯು ತಿಳಿಸುವ ಜಾತಿ/ಉಪಜಾತಿಯನ್ನು ನಮೂದಿಸಬಹುದು. ಸಂಕೇತಗಳ ಮೂಲಕ ಮಾಹಿತಿ ನೀಡಬೇಕಾದ ಕಡೆಗಳಲ್ಲಿ ಕಾಲಂನ ಕೆಳಗೆ(ಸಾಲಿನ ಎದುರು)* ಚಿಹ್ನೆಯಿಂದ ತೋರಿಸಲಾಗಿರುತ್ತದೆ.

4.3 ಕೈಪಿಡಿಯಲ್ಲಿ ಕುಟುಂಬದ ಅನುಸೂಚಿಯ ಮಾದರಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ ಹಾಗೂ ಇವುಗಳನ್ನು ನಿಮಗೆ ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಲಾಗುತ್ತದೆ. ಕುಟುಂಬದ ಸದಸ್ಯ ಅಥವಾ ಅಧಿಕೃತ ಗಣತಿ ಅಧಿಕಾರಿಯನ್ನು ಹೊರತುಪಡಿಸಿ ಬೇರೆ ಯಾವುದೇ ಸಂಸ್ಥೆ/ವ್ಯಕ್ತಿಗೆ ಕುಟುಂಬದ ಅನುಸೂಚಿಯಲ್ಲಿ ಭರ್ತಿ ಮಾಡಿದ ಮಾಹಿತಿಗಳನ್ನು ಪರಿಶೀಲಿಸಲು ಅವಕಾಶವಿರುವುದಿಲ್ಲ.

4.4 ಭರ್ತಿ ಮಾಡಲ್ಪಟ್ಟ ಅನುಸೂಚಿಗಳು ಹಾಗೂ ಖಾಲಿ ಇರುವ ಅನುಸೂಚಿಗಳು ಕೈತಪ್ಪಿನಿಂದ ಅಥವಾ ಅಜಾಗರೂಕತೆಯಿಂದ ಮಾಹಿತಿ ಸಂಗ್ರಹಿಸುವ ಸ್ಥಳದಲ್ಲಿ ಮರೆತು ಬಿಟ್ಟುಬರದಂತೆ ಎಚ್ಚರವಹಿಸಬೇಕು. ಅನುಕ್ರಮ ಸಂಖ್ಯೆಗಳು ಮುದ್ರಿತವಾಗಿರುವ ಸಂಖ್ಯಾಕ್ರಮದಲ್ಲಿಯೇ ಅಂದರೆ ಸರಣಿಯನ್ನು ಅನುಸರಿಸಿ ಕುಟುಂಬದ ಅನುಸೂಚಿಗಳನ್ನು ಬಳಸಬೇಕೆಂದು ಸಲಹೆ ನೀಡಲಾಗಿದೆ. ನಿಮಗೆ ವಹಿಸಲಾಗಿರುವ ಕಾರ್ಯವು ಸಂಪೂರ್ಣಗೊಂಡ ಬಳಿಕ, ನೀವು ಗಣತಿಯಲ್ಲಿ ಎಲ್ಲಾ ಮನೆಗಳು ಹಾಗೂ ಕುಟುಂಬಗಳನ್ನು ಸಂಪೂರ್ಣವಾಗಿ ಒಳಪಡಿಸಿರುವ ಬಗ್ಗೆ ಪ್ರಮಾಣ ಪತ್ರ ಮತ್ತು ಬಳಸಿದ/ ಬಳಸದಿರುವ / ಹಾಳಾದ ಅನುಸೂಚಿ ಹಾಗೂ ನಮೂನೆಗಳ ಸಮಗ್ರ ಪಟ್ಟಿಯನ್ನು ನೀಡಬೇಕಾಗಿದ್ದುವುಗಳಿಗೆ ಸಂಬಂಧಿಸಿದ ಲೆಕ್ಕವನ್ನು ತಪ್ಪದೆ ನೀಡುವುದು ನಿಮ್ಮ ಜವಾಬ್ದಾರಿ.

4.5 ಪ್ರತಿಯೊಂದು ಪ್ರಶ್ನೆಗೆ ಅನ್ವಯಿಸುವ ಸರಿಯಾದ ಅರ್ಥ ಮತ್ತು ವ್ಯಾಖ್ಯೆಯ ವಿವರಗಳನ್ನು ಸೂಕ್ತ ಸ್ಥಳಗಳಲ್ಲಿ ವಿವರಿಸಲಾಗಿದೆ. ಗಣತಿಯ ಸಮಯದಲ್ಲಿ ದಾಖಲು ಮಾಡಿದ ಮಾಹಿತಿಗಳ ನಿಖರತೆ, ಕೈಪಿಡಿಯಲ್ಲಿ ನೀಡಲಾಗಿರುವ ಸೂಚನೆಗಳನ್ನು ಪಾಲಿಸುವಲ್ಲಿ ನೀವು ವಹಿಸಿರುವ ಆಸಕ್ತಿಯ ಮೇಲೆ ಅವಲಂಬಿಸಿರುತ್ತದೆ. ಆದುದರಿಂದ ನೀವು ಒಂದಕ್ಕಿಂತಲೂ ಹೆಚ್ಚು ಬಾರಿ ಈ ಸೂಚನೆಗಳನ್ನು ಓದಲು ಸಲಹೆ ನೀಡಲಾಗಿದೆ. ಕುಟುಂಬದ ಅನುಸೂಚಿಯಲ್ಲಿ ಬಳಸಲಾಗಿರುವ ಪದಗಳ ಸ್ಪಷ್ಟ ಪರಿಚಯ ಹಾಗೂ ವಿವಿಧ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಪಡೆದುಕೊಳ್ಳಲು ನೀವು ಅನುಸರಿಸಬೇಕಾದ ಕ್ರಮ ಬಹಳ ಮಹತ್ವದ್ದಾಗಿರುತ್ತದೆ. ಸೂಚನೆಗಳನ್ನು ಸರಿಯಾಗಿ ಓದಿ ಮನನ ಮಾಡಿಕೊಂಡಲ್ಲಿ, ಸಮೀಕ್ಷೆಯ ವೇಳೆಯಲ್ಲಿ ಎದುರಾಗಬಹುದಾದ ತೊಂದರೆಗಳನ್ನು

ನಿವಾರಿಸಲು ನಿಮಗೆ ಸಹಾಯವಾಗುತ್ತದೆ. ಒಂದು ವೇಳೆ, ನಿಮಗೆ ಅನುಮಾನಗಳೇನಾದರೂ ಇದ್ದಲ್ಲಿ ನಿಮ್ಮ ಮೇಲ್ವಿಚಾರಕರು ಅಥವಾ ಚಾರ್ಜ್ ಅಧಿಕಾರಿಗಳಿಂದ ಬಗೆಹರಿಸಿಕೊಳ್ಳಲು ಹಿಂಜರಿಯಬೇಡಿರಿ.

4.6 **ಸಮೀಕ್ಷೆಗೆ ಒಳಪಡುವ ವ್ಯಕ್ತಿಗಳು** : ನಿಮ್ಮ ಬ್ಲಾಕಿನಲ್ಲಿರುವ ಎಲ್ಲಾ ಮನೆಗಳು, ಎಲ್ಲಾ ಕುಟುಂಬಗಳು, ಹಾಗೂ ಕುಟುಂಬದ ಸದಸ್ಯರು ಸಮೀಕ್ಷೆಯಿಂದ ಬಿಟ್ಟು ಹೋಗದಂತೆ ಮತ್ತು ಅವರು ಒಂದಕ್ಕಿಂತ ಹೆಚ್ಚು ಬಾರಿ ಗಣತಿಗೆ ಒಳಪಡದಂತೆ ಎಚ್ಚರಿಕೆ ವಹಿಸುವುದು.

4.7 **ಸಮೀಕ್ಷೆಯ ಉದ್ದೇಶಕ್ಕಾಗಿ ನೀವು ಕುಟುಂಬವೊಂದಕ್ಕೆ ಭೇಟಿಯಿತ್ತಾಗ**

ಅ) **ಕೆಳಗೆ ಸೂಚಿಸಲಾಗಿರುವ ವ್ಯಕ್ತಿಗಳ ಕುರಿತು ಮಾಹಿತಿ ಪಡೆಯಿರಿ** :

i. ಕುಟುಂಬದಲ್ಲಿ ಸಾಮಾನ್ಯವಾಗಿ ವಾಸ ಮಾಡುತ್ತಿದ್ದು, ಆದರೆ ನಿಮ್ಮ ಭೇಟಿಯ ಸಮಯದಲ್ಲಿ ಹಾಜರಿಲ್ಲದವರು;

ii. ಉದ್ಯೋಗ, ವಿದ್ಯಾಭ್ಯಾಸ, ತರಬೇತಿ, ಆರೋಗ್ಯ ಚಿಕಿತ್ಸೆ ಇತ್ಯಾದಿ ಕಾರಣಗಳಿಗಾಗಿ ಮನೆಯಿಂದ/ಕುಟುಂಬದಿಂದ ದೂರವಿರುವ ಸದಸ್ಯರಿಗೆ ಸಂಬಂಧಿಸಿದ ಮಾಹಿತಿಯನ್ನು ಕೂಡ ಸಮೀಕ್ಷೆಯಲ್ಲಿ ಅವರ ಕುಟುಂಬದ ಮುಖ್ಯಸ್ಥರಿಂದ / ಇತರೆ ಸದಸ್ಯರಿಂದ ಪಡೆಯುವುದು.

iii. ವೃದ್ಧಾಶ್ರಮ, ಅನಾಥಾಶ್ರಮ, ಬಿಕ್ಷುಕರ ಪುನರ್ವಸತಿ ಕೇಂದ್ರ ಇತ್ಯಾದಿ ಸಂಸ್ಥೆಗಳಲ್ಲಿ ವಾಸವಿರುವ ವ್ಯಕ್ತಿಗಳನ್ನು ಕೂಡ ಸಮೀಕ್ಷೆಯಲ್ಲಿ ಒಳಪಡಿಸುವುದು.

ಆ) **ಕೆಳಗೆ ಸೂಚಿಸಲಾಗಿರುವ ವ್ಯಕ್ತಿಗಳ ಕುರಿತು ಮಾಹಿತಿ ಪಡೆಯುವ ಅಗತ್ಯವಿಲ್ಲ** :

ವ್ಯಾಪಾರ ಅಥವಾ ಪ್ರವಾಸಕ್ಕಾಗಿ ತಾತ್ಕಾಲಿಕವಾಗಿ ಬಂದಿರುವ ವಿದೇಶೀಯರು, ಪೇಯಿಂಗ್ ಗೆಸ್ಟ್, ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಗೃಹಗಳಲ್ಲಿ (ಲಾಡ್ಜ್) ವಾಸವಿರುವ, ಆದರೆ ಅವರ ಕುಟುಂಬ ಬೇರೆ ಕಡೆ ಇರುವ ವ್ಯಕ್ತಿಗಳಿಂದ ಮಾಹಿತಿ ಪಡೆಯುವ ಅಗತ್ಯವಿಲ್ಲ.

ಅದೇ ರೀತಿ, ಅಲ್ಪ ಅವಧಿಗೆ ಭೇಟಿ ಮಾಡುವ ಸಂಬಂಧಿಕರು ಹಾಗೂ ಸ್ನೇಹಿತರನ್ನು ಕುಟುಂಬದ ಸಮೀಕ್ಷೆಯಲ್ಲಿ ಒಳಪಡಿಸುವ ಅಗತ್ಯವಿಲ್ಲ. ಇದಲ್ಲದೆ, ಮನೆಗಳಿಗೆ ಆಕಸ್ಮಿಕವಾಗಿ ಭೇಟಿ ನೀಡುವವರನ್ನು (Casual Visitors) ಕೂಡ ಸಮೀಕ್ಷೆಯಲ್ಲಿ ಒಳಪಡಿಸಬಾರದು.

4.8 ಅಲೆಮಾರಿ ಕುಟುಂಬಗಳು ನಿಮ್ಮ ಪ್ರದೇಶದಲ್ಲಿ ತಾತ್ಕಾಲಿಕ ನೆಲೆಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಅಂಗಡಿ ಮುಂಗಟ್ಟುಗಳ ಖಾಲಿ ಸ್ಥಳಗಳಲ್ಲಿ, ಬಯಲು ಪ್ರದೇಶದಲ್ಲಿ ರಾತ್ರಿ ವೇಳೆ ಬೀಡು ಬಿಟ್ಟಿದ್ದರೆ ಅಂತಹವರನ್ನು ವಸತಿರಹಿತ ಕುಟುಂಬ ಎಂದು ಪರಿಗಣಿಸಿ, ಸಮೀಕ್ಷೆಗೆ ಒಳಪಡಿಸಬೇಕು. ಆದರೆ ಹಾಲಿ ನಡೆಯುತ್ತಿರುವ ಸಮೀಕ್ಷೆಯಲ್ಲಿ ಅವರ ಹೆಸರನ್ನು ಬೇರೆ ಸ್ಥಳಗಳಲ್ಲಿ ದಾಖಲು ಮಾಡಲಾಗಿಲ್ಲವೆಂಬ ವಿಷಯವನ್ನು ಅವರಿಂದ ತಿಳಿದುಕೊಂಡ ನಂತರವೇ ಅವರನ್ನು ಸಮೀಕ್ಷೆಗೆ ಒಳಪಡಿಸಬೇಕು. ಈ ಸಮೀಕ್ಷೆಯ ಧ್ಯೇಯೋದ್ದೇಶದ ಹಿನ್ನೆಲೆಯಲ್ಲಿ ಇಂತಹ ಅಲೆಮಾರಿ ಸಮುದಾಯಗಳ ಮಾಹಿತಿಗಳು ಅತ್ಯಂತ ಮಹತ್ವದ್ದೆಂಬುದನ್ನು ಮನಗಾಣಬೇಕು. ಆದ್ದರಿಂದ ಇಂತಹ ಅಲೆಮಾರಿ ಕುಟುಂಬಗಳ ಮಾಹಿತಿ ಬಿಟ್ಟು ಹೋಗದಂತೆ ಎಚ್ಚರ ವಹಿಸಬೇಕು.

4.9 ಅನುಸೂಚಿ ನಮೂನೆ-3 ತುಂಬುವ ಕ್ರಮ

ನಮೂನೆ-3ರ ಮೇಲ್ಭಾಗದಲ್ಲಿ ಗಣತಿದಾರರಿಗೆ ವಹಿಸಿಕೊಡಲಾದ ಗಣತಿಬ್ಲಾಕಿಗೆ ಸಂಬಂಧಿಸಿದ ನಿರ್ದಿಷ್ಟ ಮಾಹಿತಿಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಜಿಲ್ಲಾ ಸಂಕೇತ ಸಂಖ್ಯೆ, ತಾಲ್ಲೂಕು ಸಂಕೇತ ಸಂಖ್ಯೆ, ಚಾರ್ಜ್ ಸಂಕೇತ ಸಂಖ್ಯೆ, ಗ್ರಾಮ/ಪಟ್ಟಣ/ನಗರ ಸಂಕೇತ ಸಂಖ್ಯೆ ಇತ್ಯಾದಿ ವಿವರಗಳನ್ನು, 2011ರ ಜನಗಣತಿಯಲ್ಲಿ ನೀಡಿದ ಸಂಕೇತ ಸಂಖ್ಯೆಗಳನ್ನೇ ಬಳಸಿ ಭರ್ತಿ ಮಾಡಬೇಕು. ನಮೂನೆ-3ರ ಮೇಲ್ಭಾಗದ (ಒಂದನೇ ಪುಟ) ಬಲತುದಿಯಲ್ಲಿರುವ ಬಾಕ್ಸ್‌ಗಳನ್ನು ಸರಿಯಾಗಿ ಓದಿ ತಿಳಿದುಕೊಂಡು ಅವುಗಳನ್ನು ಜಾಗರೂಕತೆಯಿಂದ ಭರ್ತಿ ಮಾಡಬೇಕು. ಅಲ್ಲಿ ನೀಡಿರುವ ಒಂದು ಬಾಕ್ಸಿನಲ್ಲಿ, ಜನಗಣತಿ 2011ರ ಎಹೆಚ್‌ಎಲ್ (ನಮೂನೆ-2)

ಕಾಲಂ-1 ರಲ್ಲಿ ಇರುವ ಕ್ರಮಸಂಖ್ಯೆಯನ್ನು ನಮೂದಿಸಬೇಕು. ಸದರಿ ಬಾಕ್ಸಿನ ಬಲಭಾಗದಲ್ಲಿರುವ ಇನ್ನೊಂದು ಬಾಕ್ಸಿನಲ್ಲಿ ಎಹೆಚ್‌ಎಲ್‌ನ ಕಾಲಂ-3 ರಲ್ಲಿ ನಮೂದಿಸಿರುವ ಮನೆ ಸಂಖ್ಯೆಯನ್ನು ಭರ್ತಿ ಮಾಡಬೇಕು. ಈ ಎರಡು ಬಾಕ್ಸ್‌ಗಳ ಕೆಳಭಾಗದಲ್ಲಿರುವ ಬಾಕ್ಸಿನಲ್ಲಿ (4 ಭಾಗಗಳಿರುವ ಬಾಕ್ಸ್) ಜನಗಣತಿ 2011 ರಲ್ಲಿ ಅಳವಡಿಸಲಾದ ಗಣತಿ ಬ್ಲಾಕ್ ಸಂಖ್ಯೆಯನ್ನು ನಮೂದಿಸುವುದು. ನಮೂನೆ-3ರ ಪುಟ-1ರ ಮೇಲ್ಭಾಗದಲ್ಲಿರುವ ಎಲ್ಲ ವಿವರಗಳನ್ನು ನಿಗದಿಪಡಿಸಿರುವ ಬಾಕ್ಸ್‌ಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

ನಮೂನೆ-3ರಲ್ಲಿ ಒಟ್ಟು 55 ಕಾಲಂಗಳಿದ್ದು, ಅವುಗಳಲ್ಲಿ ಕೆಲವು ಮಾನದಂಡಗಳು ಮಹತ್ವದ ಹಾಗೂ ನಿರ್ಣಾಯಕ (Critical) ಮಾಹಿತಿಗಳಾಗಿರುತ್ತವೆ. ಉದಾ: ಜಾತಿ-ಉಪಜಾತಿಗೆ ಸೇರಿದ ಕಾಲಂ-6 ಮತ್ತು ಕಾಲಂ-7, ಆಧಾರ್ ಕಾರ್ಡ್ ಮತ್ತು ಚುನಾವಣಾ ಆಯೋಗದ ಗುರುತಿನ ಚೀಟಿ (ಕಾಲಂ-11 ಮತ್ತು ಕಾಲಂ-12), ಶಾಲೆ ಬಿಟ್ಟಾಗಿನ ತರಗತಿ ಮತ್ತು ಶಾಲೆ ಬಿಡಲು ಕಾರಣ (ಕಾಲಂ-19 ಮತ್ತು ಕಾಲಂ-21), ಉದ್ಯೋಗಕ್ಕೆ ಸಂಬಂಧಿಸಿದ ಮಾಹಿತಿಗಳು (ಕಾಲಂ-25), ಬ್ಯಾಂಕ್ ಅಕೌಂಟ್ ಮಾಹಿತಿ (ಕಾಲಂ-33), ಅಲೆಮಾರಿ ಜನಾಂಗಗಳ ಮಾಹಿತಿ (ಕಾಲಂ-37), ಕುಟುಂಬವು ಹೊಂದಿರುವ ಜಮೀನು (ಕಾಲಂ-40), ಕುಟುಂಬವು ಹೊಂದಿರುವ ಸ್ಥಿರಾಸ್ತಿ ಹಾಗೂ ಚರಾಸ್ತಿ (ಕಾಲಂ-44 ಮತ್ತು ಕಾಲಂ-45), ಪಡಿತರ ಚೀಟಿ ಸಂಖ್ಯೆ (ಕಾಲಂ-47), ವಾಸದ ಮನೆ ಮತ್ತು ನಿವೇಶನ (ಕಾಲಂ-50 ಮತ್ತು ಕಾಲಂ-51).

ಮೇಲೆ ವಿವರಿಸಿದ ಕಾಲಂಗಳನ್ನು ಭರ್ತಿ ಮಾಡುವಾಗ ಸಮೀಕ್ಷಾದಾರರು ಕುಟುಂಬದ ಸದಸ್ಯರಿಂದ ಸರಿಯಾದ ಮಾಹಿತಿಗಳನ್ನು ಪಡೆದುಕೊಂಡು ಅದನ್ನು ಬಹಳ ಜಾಗರೂಕತೆಯಿಂದ ದಾಖಲು ಮಾಡಬೇಕು. ಈ ಮಾಹಿತಿಗಳು ಈ ಹಿಂದೆ ಸಂಗ್ರಹಿಸಲಾದ ಆಧಾರ್, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ, ಆರ್.ಡಿ.ಪಿ.ಆರ್ ಇಲಾಖೆಯ ಪಂಚತಂತ್ರ ಹಾಗೂ ಎಸ್.ಇ.ಸಿ.ಸಿ, ಆಹಾರ ಇಲಾಖೆಯ ಪಡಿತರ ಚೀಟಿ, ಇತ್ಯಾದಿಗಳ ದತ್ತಹುಂಡಿ (Data base) ಯಲ್ಲಿ ಲಭ್ಯವಿದ್ದು, ಈ ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನು ಅವುಗಳೊಂದಿಗೆ ತಾಳೆ ಮಾಡಿ ನೋಡಲಾಗುವುದು. ಆದಕಾರಣ, ಮಾಹಿತಿಗಳನ್ನು ಭರ್ತಿ ಮಾಡುವಾಗ ಸಮೀಕ್ಷಾದಾರರು ಬಹಳ ಕಾಳಜಿ ಮತ್ತು ಜವಾಬ್ದಾರಿಯೊಂದಿಗೆ ಕಾರ್ಯನಿರ್ವಹಿಸಬೇಕು. ಆಧಾರ್, ಚುನಾವಣಾ, ಹಾಗೂ ಪಡಿತರ ಚೀಟಿ ವಿವರಗಳನ್ನು ಬರೆಯುವಾಗ ಸಂಬಂಧಪಟ್ಟ ಕಾರ್ಡುಗಳನ್ನು ನೋಡಿಕೊಂಡು ಬಹಳ ಜಾಗರೂಕತೆಯಿಂದ ಸ್ಪಷ್ಟವಾಗಿ ಬರೆಯಬೇಕು. ಸಮೀಕ್ಷಾ ನಮೂನೆಯಲ್ಲಿರುವ ಎಲ್ಲ ಕಾಲಂಗಳನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು. **ಒಂದು ವೇಳೆ, ಯಾವುದೇ ಒಂದು ಅಂಶ ಕುಟುಂಬದ ಸದಸ್ಯರಿಗೆ/ಕುಟುಂಬಕ್ಕೆ ಅನ್ವಯವಾಗದಿದ್ದಲ್ಲಿ, ಅಂತಹ ಬಾಕ್ಸ್‌ನಲ್ಲಿ 'X' ಎಂದು ನಮೂದಿಸಬೇಕು.**

ಅನುಸೂಚಿಯಲ್ಲಿ ಕುಟುಂಬದ ಹತ್ತು ಸದಸ್ಯರ ಮಾಹಿತಿಯನ್ನು ಸಂಗ್ರಹಿಸಲು ಅವಕಾಶ ಮಾಡಲಾಗಿದೆ. ಒಂದು ವೇಳೆ ಕುಟುಂಬದ ಸದಸ್ಯರ ಸಂಖ್ಯೆ 10 ಕ್ಕಿಂತ ಹೆಚ್ಚು ಇದ್ದಲ್ಲಿ, ಹೆಚ್ಚುವರಿ ಅನುಸೂಚಿ ನಮೂನೆಗಳನ್ನು ಬಳಸಿ ಸದಸ್ಯರ ಮಾಹಿತಿಯನ್ನು ಭಾಗ-1 ರಲ್ಲಿ ಕಾಲಂ2 ರಿಂದ39ರವರೆಗೆ ಪಡೆಯಬೇಕು ಮತ್ತು ಹೆಚ್ಚುವರಿಯಾಗಿ ಬಳಸಿದ ನಮೂನೆಯ ಅನುಕ್ರಮಸಂಖ್ಯೆಯನ್ನು ನಮೂನೆ-3ರ ಕೊನೆಯ ಪುಟದ ಕೆಳಭಾಗದಲ್ಲಿ (ಮೇಲ್ವಿಚಾರಕರ ಸಹಿಯ ಎದುರುಭಾಗದಲ್ಲಿ) ನಮೂದಿಸಬೇಕು. ಅಂತಹ ಸಂದರ್ಭಗಳಲ್ಲಿ, ಕುಟುಂಬದ ಮಾಹಿತಿಯನ್ನು ಭಾಗ-2 ರಲ್ಲಿ (ಕಾಲಂ 40 ರಿಂದ 55ರವರೆಗೆ) ಒಂದು ಬಾರಿ ಮಾತ್ರ ನಮೂದಿಸಬೇಕು. ಒಂದೇ ಕುಟುಂಬಕ್ಕೆ ಅನ್ವಯಿಸುವ ಅಂತಹ ನಮೂನೆಗಳನ್ನು (ಮೊದಲು ಉಪಯೋಗಿಸಿದ ನಮೂನೆ-3 ಹಾಗೂ ಹೆಚ್ಚುವರಿಯಾಗಿ ಉಪಯೋಗಿಸಿದ ನಮೂನೆ-3) ಒಟ್ಟಾಗಿ ಸೇರಿಸಿ ಟ್ಯಾಗ್ ಮಾಡಬೇಕು.

ಗಣತಿದಾರನು ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಿದಾಗ, ಒಳಪಡಿಸಲಾದ ಕುಟುಂಬಗಳ ಅನುಕ್ರಮ ಸಂಖ್ಯೆಯನ್ನು ಪ್ರತಿಯೊಂದು ಅನುಸೂಚಿಯಲ್ಲಿ (ನಮೂನೆ-3 ರಲ್ಲಿ) ನಮೂದಿಸಬೇಕು. ಒಂದು ವೇಳೆ,

ಒಂದು ಕುಟುಂಬದಲ್ಲಿರುವ ಸದಸ್ಯರು 10 ಕ್ಕಿಂತ ಹೆಚ್ಚು ಇದ್ದು, ಒಂದಕ್ಕಿಂತ ಹೆಚ್ಚು ಅನುಸೂಚಿಗಳನ್ನು ಉಪಯೋಗಿಸಿಕೊಂಡಿದ್ದಲ್ಲಿ, ಮೊದಲ ಅನುಸೂಚಿಯಲ್ಲಿ ನೀಡಿರುವ ಕುಟುಂಬದ ಅನುಕ್ರಮ ಸಂಖ್ಯೆಯನ್ನೇ ಹೆಚ್ಚುವರಿ ಅನುಸೂಚಿಗಳಲ್ಲಿಯೂ ನಮೂದಿಸತಕ್ಕದ್ದು.

4.10 ಕ್ರಮಸಂಖ್ಯೆ: ಕಾಲಂ ನಂ.1

ಕುಟುಂಬ ಅನುಸೂಚಿಯಲ್ಲಿ ಕುಟುಂಬದಲ್ಲಿರುವ ಪ್ರತಿ ವ್ಯಕ್ತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ದಾಖಲಿಸಬೇಕಾಗಿರುತ್ತದೆ. ಅದರಂತೆ ಕುಟುಂಬ ಮುಖ್ಯಸ್ಥರಿಂದ ಪ್ರಾರಂಭಿಸಿ ಕ್ರಮವಾಗಿ ಪ್ರತಿಯೊಬ್ಬ ಕುಟುಂಬದ ಸದಸ್ಯರಿಗೂ ಕ್ರಮ ಸಂಖ್ಯೆವಾರು ದಾಖಲಿಸಿ.

4.11 ಕುಟುಂಬದ ಮುಖ್ಯಸ್ಥರ ಮತ್ತು ಸದಸ್ಯರುಗಳ ಹೆಸರು:ಕಾಲಂ ನಂ.2

ಕುಟುಂಬದ ಮುಖ್ಯಸ್ಥರು ಸಾಮಾನ್ಯವಾಗಿ ಕುಟುಂಬದ ಇತರ ಸದಸ್ಯರೊಂದಿಗೆ ಮನೆಯಲ್ಲಿಯೇ ವಾಸವಿರುತ್ತಾರೆ. ಮುಖ್ಯಸ್ಥನು ಕೆಲಸಕ್ಕಾಗಿ 6 ತಿಂಗಳಿಗಿಂತ ಹೆಚ್ಚು ಸಮಯ ಬೇರೆ ಕಡೆಗೆ ವಲಸೆ ಹೋಗಿದ್ದು, ಅವರೇ ಮುಖ್ಯಸ್ಥನೆಂದು ಕುಟುಂಬದ ಇತರೆ ಸದಸ್ಯರು ತಿಳಿಸಿದ್ದಲ್ಲಿ ಆ ವ್ಯಕ್ತಿಯನ್ನು ಕುಟುಂಬದ ಮುಖ್ಯಸ್ಥರೆಂದು ಪರಿಗಣಿಸಿ ಪಟ್ಟಿ ಮಾಡಬೇಕು.

ಸಮೀಕ್ಷೆಗೆ ಒಳಪಡುವ ವ್ಯಕ್ತಿಯ ಹೆಸರನ್ನು ಕುಟುಂಬದ ಮುಖ್ಯಸ್ಥರಿಂದ ಪ್ರಾರಂಭಿಸಿ, ಅಕ್ಕಪಕ್ಕದ ಗೆರೆಗಳಿಗೆ ತಗಲದಂತೆ ಹೆಸರನ್ನು ಅಂದವಾಗಿ ಬರೆಯಬೇಕು. ವ್ಯಕ್ತಿಯ ಹೆಸರು ಉದ್ದವಾಗಿದ್ದಲ್ಲಿ ಮತ್ತು ಲಭ್ಯವಿರುವ ಜಾಗದಲ್ಲಿ ಬರೆಯಲಾಗದಿದ್ದ ಪಕ್ಷದಲ್ಲಿ ಆಗ ಆ ವ್ಯಕ್ತಿಯ ಹೆಸರನ್ನು ಚಿಕ್ಕದಾಗಿ ಬರೆಯುವುದು ಸೂಕ್ತ. ಉದಾಹರಣೆಗೆ: ಲಕ್ಷ್ಮೀ ನಾರಾಯಣ ಶಿವ ಪುಟ್ಟಸ್ವಾಮಿ ಎಂದು ಇದ್ದಲ್ಲಿ ಮಾಹಿತಿದಾರರು ಅಪೇಕ್ಷಿಸಿದಂತೆ, ಎಲ್.ಎನ್.ಎಸ್.ಪುಟ್ಟಸ್ವಾಮಿ ಎಂದೂ ರಾಜಲಕ್ಷ್ಮೀ ಶಂಕರ ಭಟ್ ಎಂದು ಇದ್ದರೆ ರಾಜಲಕ್ಷ್ಮೀ ಎಸ್.ಬಿ ಎಂದೂ ನಮೂದಿಸಬಹುದಾಗಿರುತ್ತದೆ.

ಕುಟುಂಬದ ಪರಿಪಾಲನೆಯ ಪ್ರಮುಖ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಮುಖ್ಯಸ್ಥರು ಕುಟುಂಬದ ಪರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವ ವ್ಯಕ್ತಿಯಾಗಿರುತ್ತಾರೆ. ಕುಟುಂಬದ ಸದಸ್ಯರ ಪೈಕಿ ವಯಸ್ಸಿನಲ್ಲಿ ಎಲ್ಲರಿಗಿಂತ ಹಿರಿಯ ಪುರುಷ ಅಥವಾ ಸಂಪಾದಿಸುತ್ತಿರುವ ವ್ಯಕ್ತಿಯೇ ಕುಟುಂಬದ ಮುಖಸ್ಥನಾಗಿರಬೇಕೆಂಬ ನಿಯಮವೇನೂ ಇಲ್ಲ. ಒಬ್ಬ ಮಹಿಳೆ ಕೂಡ ಕುಟುಂಬದ ಮುಖ್ಯಸ್ಥಳಾಗಿರಬಹುದು. ಅಂತಹ ಸಂದರ್ಭಗಳಲ್ಲಿ ಮಹಿಳಾ ಮುಖ್ಯಸ್ಥೆಯ ಹೆಸರು ಕ್ರಮಸಂಖ್ಯೆ 1ರಲ್ಲಿ ದಾಖಲಿಸಬೇಕು. ವಾಸ್ತವವಾಗಿ ಕುಟುಂಬದ ಮುಖ್ಯಸ್ಥರು ಯಾರು ಎಂಬ ವಿಷಯದ ಬಗ್ಗೆ ನೀವು ಚರ್ಚೆ ಮಾಡುವುದು ಅನಗತ್ಯ. ಆದರೆ ಆ ಕುಟುಂಬವು ಯಾರನ್ನು ಮುಖ್ಯಸ್ಥರೆಂದು ಪರಿಗಣಿಸುತ್ತದೆಯೋ ಆ ವ್ಯಕ್ತಿಯನ್ನೇ ನೀವು ಕುಟುಂಬದ ಮುಖ್ಯಸ್ಥರೆಂದು ದಾಖಲಿಸಿರಿ. ಉದಾಹರಣೆಗೆ, ಪುರುಷ ಸದಸ್ಯನು ತನ್ನ ಖಾಯಂ ಉದ್ಯೋಗಕ್ಕಾಗಿ ಬೆಳಗಾವಿಯಲ್ಲಿದ್ದು, ಆತನ ಹೆಂಡತಿ ಮತ್ತು ಮಕ್ಕಳು ಬೆಂಗಳೂರಿನಲ್ಲಿಯೇ ಉಳಿದಿರಬಹುದು. ಈ ಪ್ರಕರಣದಲ್ಲಿ ಕುಟುಂಬದ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿರುವ ಆತನ ಮಡದಿಯನ್ನು ಬೆಂಗಳೂರಿನಲ್ಲಿ ಸಮೀಕ್ಷೆಯಾಗುತ್ತಿರುವ ಕುಟುಂಬದ ಮುಖ್ಯಸ್ಥಳೆಂದು ದಾಖಲಿಸಬೇಕು. ಪತಿಯನ್ನು ಅದೇ ಕುಟುಂಬದ ಸದಸ್ಯರೆಂದು ಪರಿಗಣಿಸತಕ್ಕದ್ದು. ಅವರನ್ನು ಬೆಳಗಾವಿಯಲ್ಲಿ ಪ್ರತ್ಯೇಕವಾಗಿ ಸಮೀಕ್ಷೆಗೆ ಒಳಪಡಿಸಬಾರದು.

ಉತ್ತರಿಸುತ್ತಿರುವ ವ್ಯಕ್ತಿಯು, ಕುಟುಂಬದ ಮಹಿಳೆಯ ಹೆಸರನ್ನು ಸ್ವಇಚ್ಛೆಯಿಂದ ನೀಡಲು ಬಯಸದಿದ್ದರೆ, ಹೇಳಲೇಬೇಕೆಂದು ಒತ್ತಾಯಿಸಬಾರದು. ಅದೇ ರೀತಿ ಉತ್ತರಿಸುತ್ತಿರುವ ಮಹಿಳೆಯೊಬ್ಬಳು ತನ್ನ ಪತಿಯ ಅಥವಾ ಇತರೆ ಸದಸ್ಯರ ಹೆಸರನ್ನು ಅವರಲ್ಲಿ ಪ್ರಚಲಿತವಿರುವ ಪದ್ಧತಿ ಅನ್ವಯ ನೀಡಲು ನಿಷೇಧವಿದ್ದಲ್ಲಿ, ಅಂತಹ ಹೆಸರನ್ನು ಹೇಳಲೇಬೇಕೆಂದು ಒತ್ತಾಯ ಮಾಡಕೂಡದು. ಅಂತಹ ಮಾಹಿತಿಯನ್ನು ಕುಟುಂಬದ ಇನ್ನೊಬ್ಬ ಸದಸ್ಯರಿಂದ ಪಡೆಯಬಹುದು. ಕೆಲವೊಮ್ಮೆ ಶಿಶುಗಳಿಗೆ ಮತ್ತು ಮಕ್ಕಳಿಗೆ ನಾಮಕರಣವನ್ನು ಮಾಡದಿರಬಹುದು ಇಂತಹ ಎಲ್ಲಾ ಪ್ರಕರಣಗಳಲ್ಲಿ ಶಿಶು ಎಂದು ಬರೆದು ಅದರ ಮುಂದೆ ತಂದೆ ಅಥವಾ ತಾಯಿಯ ಹೆಸರನ್ನು ನಮೂದಿಸಬೇಕು.

ಸಮೀಕ್ಷಾ ವ್ಯಾಪ್ತಿಯೊಳಗೆ ಬರುವ ಕುಟುಂಬದಲ್ಲಿ ವಾಸವಿರುವ ಎಲ್ಲಾ ಸದಸ್ಯರುಗಳನ್ನು ಕ್ರಮಬದ್ಧವಾಗಿ ಪಟ್ಟಿ ಮಾಡಬೇಕು. ಉದಾಹರಣೆ :ಕುಟುಂಬದ ಮುಖ್ಯಸ್ಥರು ಗಂಡಾಗಿದ್ದಲ್ಲಿ ಅವರ ಹೆಸರಿನ ನಂತರ ಹೆಂಡತಿಯ

ಹೆಸರನ್ನು ಬರೆಯಬೇಕು. ಕುಟುಂಬದ ಮುಖ್ಯಸ್ಥೆಯು ಹೆಣ್ಣಾಗಿದ್ದಲ್ಲಿ ಅವರ ಹೆಸರಿನ ನಂತರ ಗಂಡನ ಹೆಸರನ್ನು ಬರೆಯಬೇಕು. ಸದರಿ ಕುಟುಂಬದಲ್ಲಿ ಮುಖ್ಯಸ್ಥರೊಂದಿಗೆ ಅವರ ತಂದೆ-ತಾಯಿ, ಅತ್ತೆ-ಮಾವ ವಾಸಿಸುತ್ತಿದ್ದಲ್ಲಿ ಅವರ ಹೆಸರನ್ನು ಕುಟುಂಬದ ಸದಸ್ಯರಾಗಿ ಕ್ರಮವಾಗಿ ಬರೆಯುವುದು. ಕುಟುಂಬದ ಮುಖ್ಯಸ್ಥ/ಮುಖ್ಯಸ್ಥೆ ಅವಿವಾಹಿತರಾಗಿದ್ದಲ್ಲಿ, ಗಂಡ ಅಥವಾ ಹೆಂಡತಿ ಹೆಸರನ್ನು ನಮೂದಿಸುವ ಪ್ರಮೇಯ ಬರುವುದಿಲ್ಲ. ಇದಾದ ನಂತರ ಕುಟುಂಬದ ಮುಖ್ಯಸ್ಥರ ಮಕ್ಕಳ ಹೆಸರನ್ನು ಅವರ ವಯಸ್ಸಿನ ಕ್ರಮದಲ್ಲಿ ನಮೂದಿಸುವುದು. ಒಂದು ವೇಳೆ ಕುಟುಂಬದ ಮುಖ್ಯಸ್ಥರ ಮಕ್ಕಳು ವಿವಾಹಿತರಾಗಿದ್ದಲ್ಲಿ ಅವರ ಹೆಸರಿನ ನಂತರ ಅವರ ಹೆಂಡತಿ ಹಾಗೂ ಮಕ್ಕಳ ಹೆಸರನ್ನು ವಯಸ್ಸಿನ ಅನುಕ್ರಮದಲ್ಲಿ ನಮೂದಿಸಬೇಕು. ಕೆಲವು ಕುಟುಂಬಗಳಲ್ಲಿ ಮುಖ್ಯಸ್ಥರ ವೈಯಕ್ತಿಕ ಕುಟುಂಬದ ಹೊರತಾಗಿ ಅವರ ಸಹೋದರ-ಸಹೋದರಿಯರು ಕೂಡ ಒಟ್ಟು ಕುಟುಂಬದಲ್ಲಿ ವಾಸವಿರುವ ಸಾಧ್ಯತೆಗಳಿರುತ್ತವೆ. ಅಂತಹವರನ್ನು ಕೂಡ ಗಣತಿಯಲ್ಲಿ ಸೇರಿಸಲು ಸೂಚಿಸಲಾಗಿದೆ.

ಸಂಬಂಧಿಗಳಲ್ಲದ ಮನೆ ಕೆಲಸದವರು, ಅತಿಥಿಗಳು ಇತ್ಯಾದಿಗಳು ಕುಟುಂಬದೊಳಗೆ ವಾಸಿಸುತ್ತಿದ್ದಲ್ಲಿ, ಅವರನ್ನು ಕುಟುಂಬದ ಸದಸ್ಯರೆಂದು ಪರಿಗಣಿಸಿ ಭರ್ತಿ ಮಾಡಬೇಕು, ಕುಟುಂಬದ ಅನುಸೂಚಿಯಲ್ಲಿ ಪಟ್ಟಿ ಮಾಡಿ ವಿವರಗಳನ್ನು ದಾಖಲಿಸುವ ಈ ಕ್ರಮವು ವಿಶೇಷವಾಗಿ ಸಣ್ಣ ಮಕ್ಕಳು ಮತ್ತು ಹಿರಿಯ ವ್ಯಕ್ತಿಗಳು ಬಿಟ್ಟು ಹೋಗುವ ಸಾಧ್ಯತೆಯನ್ನು ತಡೆಗಟ್ಟುವ ಉದ್ದೇಶವನ್ನು ಹೊಂದಿರುತ್ತದೆ.

ಸಮೀಕ್ಷಾ ಸಮಯದಲ್ಲಿ ಪ್ರತಿಯೊಂದು ವ್ಯಕ್ತಿಯನ್ನು ಒಂದೇ ಒಂದು ಬಾರಿ ಎಣಿಕೆ ಮಾಡುವುದು ಮುಖ್ಯ.

4.12 ಕುಟುಂಬದ ಮುಖ್ಯಸ್ಥರೊಂದಿಗಿನ ಸಂಬಂಧ:ಕಾಲಂ ನಂ 3

ಕುಟುಂಬದ ಇತರ ಸದಸ್ಯರು ಕುಟುಂಬದ ಮುಖ್ಯಸ್ಥರೊಂದಿಗೆ ಹೊಂದಿರುವ ಸಂಬಂಧವನ್ನು ನಿಮಗೆ ನೀಡಿರುವ 24 ಸಂಕೇತ ಸಂಖ್ಯೆಗಳ ಮೂಲಕ ದಾಖಲಿಸಬೇಕು. ನಿಮಗೆ ನೀಡಿರುವ ಕೈಪಿಡಿಯ ಸಂಕೇತ ಪಟ್ಟಿ (ಅನುಬಂಧ-2) ಯಲ್ಲಿ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ. ದತ್ತು ಮಕ್ಕಳನ್ನು ಹಾಗೂ ಸ್ವಂತ ಮಕ್ಕಳನ್ನು, ಒಂದೇ ರೀತಿಯಲ್ಲಿ ಪರಿಗಣಿಸಲಾಗುತ್ತದೆ. ಸಂಬಂಧಗಳು "ಇತರೆ" ಆಗಿದ್ದಲ್ಲಿ ಸಂಕೇತ ಸಂಖ್ಯೆ: "00" ದಾಖಲಿಸುವುದು.

4.13 ಲಿಂಗ:ಕಾಲಂ ನಂ. 4

ಲಿಂಗದ ಮಾಹಿತಿಯನ್ನು ನಿಮಗೆ ನೀಡಿರುವ 3 ಸಂಕೇತಗಳ ಮೂಲಕ ನಮೂದಿಸಬೇಕು. ಗಂಡಾಗಿದ್ದರೆ 1 ಎಂದೂ ಹೆಣ್ಣಾಗಿದ್ದರೆ 2 ಎಂದು ನಮೂದಿಸುವುದು. ಆದಷ್ಟು ವ್ಯಕ್ತಿಯ ಹೆಸರು ಮತ್ತು ಕುಟುಂಬದ ಮುಖ್ಯಸ್ಥರೊಡನೆ ಇರುವ ಸಂಬಂಧವನ್ನು ಕಾಲಂ 2 ಮತ್ತು 3ರಲ್ಲಿ ದಾಖಲಿಸಿರುವುದನ್ನು ಗಮನದಲ್ಲಿರಿಸಿಕೊಂಡು ವ್ಯಕ್ತಿಯ ಲಿಂಗವನ್ನು ತಿಳಿಯಲು ಪ್ರಯತ್ನಿಸಿರಿ. ಒಂದು ವೇಳೆ ಮಾಹಿತಿದಾರರು ಸಂಕೇತ ಸಂಖ್ಯೆ 1 ಅಥವಾ 2ನ್ನು ಹೊರತುಪಡಿಸಿ, ವಿಶೇಷ ಸಂದರ್ಭದಲ್ಲಿ ವರದಿ ಮಾಡಲು ಬಯಸಿದಲ್ಲಿ, ತೃತೀಯ ಲಿಂಗದ ಸಂಕೇತ ಸಂಖ್ಯೆ 3ನ್ನು ನೀಡಬೇಕು.

4.14 ಧರ್ಮ: ಕಾಲಂ ನಂ. 5

ಒಂದು ಕುಟುಂಬದಲ್ಲಿ ಇರುವ ವ್ಯಕ್ತಿಗಳು ಹೊಂದಿರುವ ನಂಬಿಕೆ, ಪರಂಪರಾಗತವಾಗಿ ಆಚರಿಸುವ ವಿಧಿವಿಧಾನಗಳು, ಹಬ್ಬ ಹರಿದಿನಗಳು ಇತ್ಯಾದಿ ಸಂಪ್ರದಾಯಗಳ ಮೇಲೆ ಧರ್ಮಗಳು ಸಾಮಾನ್ಯವಾಗಿ ಆಧಾರಿತವಾಗಿರುತ್ತವೆ. ಕುಟುಂಬದ ಮುಖ್ಯಸ್ಥರು / ಸದಸ್ಯರು ತಿಳಿಸುವ ಧರ್ಮವನ್ನು ವಿಶ್ವಾಸದಿಂದ ಸಂಕೇತ ಸಂಖ್ಯೆ ಮೂಲಕ ದಾಖಲಿಸಿ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದು ಒಂದು ಕುಟುಂಬದ ಎಲ್ಲಾ ಸದಸ್ಯರುಗಳು ಒಂದೇ ಧರ್ಮಕ್ಕೆ ಸೇರಿರಬೇಕೆಂಬ ಅವಶ್ಯಕತೆಯಿರುವುದಿಲ್ಲ. ಆದ್ದರಿಂದ ಕುಟುಂಬದ ಪ್ರತಿ ಸದಸ್ಯರ ಬಗ್ಗೆ ಪ್ರತ್ಯೇಕವಾಗಿ ವಿಚಾರಿಸಬೇಕು. ಒಂದೇ ಕುಟುಂಬದಲ್ಲಿರುವ ಸದಸ್ಯರುಗಳು ಭಿನ್ನಭಿನ್ನ ಧರ್ಮಗಳನ್ನು ಅನುಸರಿಸಬಹುದು. ಅಂತರ್‌ಧರ್ಮ ವಿವಾಹಗಳಾದ ಸಂದರ್ಭಗಳಲ್ಲಿ ಅವರ ಮಕ್ಕಳು ಯಾವ ಧರ್ಮಕ್ಕೆ ತಾವು ಸೇರಿದ್ದೇವೆಂದು ಹೇಳುತ್ತಾರೋ ಆ ಧರ್ಮದ ಹೆಸರನ್ನು ನಮೂದಿಸಬೇಕು.

ತಾನು ಯಾವುದೇ ಧರ್ಮಕ್ಕೆ ಸೇರಿಲ್ಲವೆಂದೂ ಹಾಗೂ ತಾನು 'ನಾಸ್ತಿಕ'ನೆಂದು ತಿಳಿಸಿದ್ದಲ್ಲಿ ಅಂತಹ ವ್ಯಕ್ತಿಯ ಹೆಸರಿನ ಮುಂದೆ ಸಂಕೇತ ಸಂಖ್ಯೆ '08'ನ್ನು ದಾಖಲಿಸುವುದು. ಒಬ್ಬ ವ್ಯಕ್ತಿಯು ತನ್ನ ಧರ್ಮ ಯಾವುದೆಂದು 'ಗೊತ್ತಿಲ್ಲ'ವೆಂದು ಹೇಳಿದಲ್ಲಿ ಸಂಕೇತ ಸಂಖ್ಯೆ "09" ದಾಖಲಿಸಿ. ಧರ್ಮವನ್ನು ತಿಳಿಸಲು ನಿರಾಕರಿಸಿದ್ದಲ್ಲಿ ಸಂಕೇತ ಸಂಖ್ಯೆ "10"ನ್ನು ಉಪಯೋಗಿಸಬೇಕು. ಸಂಕೇತ ಪಟ್ಟಿಯಲ್ಲಿ ನಮೂದಾದ 7 ಧರ್ಮಗಳ ಹೊರತಾಗಿ ಬೇರೆಯೊಂದು ಧರ್ಮಕ್ಕೆ ಸೇರಿದ್ದಾಗಿ ಹೇಳಿದ ಪ್ರಕರಣಗಳಲ್ಲಿ ಸಂಕೇತ ಸಂಖ್ಯೆ "00" ದಾಖಲಿಸುವುದು.

ಜಾತಿಯ ಹೆಸರುಗಳನ್ನು ಧರ್ಮವೆಂದು ತಪ್ಪಾಗಿ ಭಾವಿಸಬಾರದು ಹಾಗೂ ಧರ್ಮ ಮತ್ತು ಮಾತೃಭಾಷೆ ಇವೆರಡರ ನಡುವೆ ಯಾವುದೇ ಸಂಬಂಧವನ್ನು ಕಲ್ಪಿಸಲು ಸಹ ಯತ್ನಿಸಬಾರದು.

4.15 ಜಾತಿ & ಉಪಜಾತಿ: ಕಾಲಂ ನಂ.6&7

ಜಾತಿ ಮತ್ತು ಉಪಜಾತಿಗಳ ಮಾಹಿತಿ ಆಯೋಗದ ಸಮೀಕ್ಷಾ ಉದ್ದೇಶಕ್ಕೆ ಅತಿಮುಖ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿವಿಧ ಜನಾಂಗೀಯ ಅಧ್ಯಯನ ವರದಿ, ವಿವಿಧ ಆಯೋಗಗಳ ವರದಿ, ಸರ್ಕಾರದ ಹಿಂದಿನ ಮೀಸಲಾತಿ ಪಟ್ಟಿ ಮತ್ತು ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ಬಂದ ಮನವಿಗಳು ಮುಂತಾದವುಗಳನ್ನು ಆಧರಿಸಿ ರಾಜ್ಯದಲ್ಲಿನ ಎಲ್ಲಾ ಜಾತಿ/ಉಪಜಾತಿಗಳ ಪಟ್ಟಿಯನ್ನು ಸಿದ್ಧಪಡಿಸಿ ಅವುಗಳನ್ನು ಅನುಬಂಧ – 3 'A',ದಲ್ಲಿ ಅಳವಡಿಸಲಾಗಿದೆ. ಅನುಸೂಚಿತ ಜಾತಿಗಳ ಪಟ್ಟಿ ಮತ್ತು ಅನುಸೂಚಿತ ಪಂಗಡಗಳ ಪಟ್ಟಿಯನ್ನು ಅನುಬಂಧ–3'B' ಮತ್ತು ಅನುಬಂಧ–3'C'ದಲ್ಲಿ ಅಳವಡಿಸಲಾಗಿರುತ್ತದೆ. ಈ ಎರಡು ಪಟ್ಟಿಗಳಲ್ಲಿ ಸೇರಿರುವ ಜಾತಿಗಳು (ಸಮಾನಾಂತರ ಜಾತಿಗಳು ಸೇರಿದಂತೆ) ಭಾರತ ಸರ್ಕಾರವು ಹೊರಡಿಸಿರುವ ಅಧಿಸೂಚನೆಗೆ ಯಥಾವತ್ತಾಗಿರುತ್ತವೆ. ಆದ್ದರಿಂದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸಂಬಂಧಿಸಿದಂತೆ ಉಪಜಾತಿಗಳನ್ನು / ಪರ್ಯಾಯ ಹೆಸರುಗಳನ್ನು ಭರ್ತಿ ಮಾಡುವ ಸಂದರ್ಭಗಳಲ್ಲಿ ಆ ಹೆಸರುಗಳನ್ನು ಅನುಬಂಧ–3'B' ಮತ್ತು ಅನುಬಂಧ–3'C'ದಲ್ಲಿರುವ ಹೆಸರುಗಳಿಗೆ ಮಾತ್ರ ಸೀಮಿತಗೊಳಿಸಬೇಕು.

ಅನುಬಂಧ–3'A'ರಲ್ಲಿ 1351, ಅನುಬಂಧ–3'B'ದಲ್ಲಿ 101 ಮತ್ತು ಅನುಬಂಧ–3'C'ದಲ್ಲಿ 51 ಜಾತಿ/ಉಪಜಾತಿಗಳಿದ್ದು, ಅವುಗಳಿಗೆ ಪ್ರತ್ಯೇಕ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿರುತ್ತದೆ. ಜಾತಿ/ಉಪಜಾತಿಗಳನ್ನು ಪಟ್ಟಿಯಲ್ಲಿ ಗುರುತಿಸಲು ಗಣತಿದಾರರಿಗೆ ಸುಲಭವಾಗುವ ದೃಷ್ಠಿಯಿಂದ ಅವುಗಳನ್ನು ಆಂಗ್ಲ ಅಕ್ಷರಮಾಲೆ **(English Alphabetical Order)** ಯಂತೆ ನಿರೂಪಿಸಲಾಗಿದೆ. ಈ ಪಟ್ಟಿಯು ಜಾತಿ ಮತ್ತು ಉಪಜಾತಿಗೆ ತಯಾರಿಸಿದ ಒಂದೇ ಪಟ್ಟಿಯಾಗಿದ್ದು, ಅನುಬಂಧ–3 'A'ರಲ್ಲಿರುವಂತೆ 4 ಅಂಕಿಯ ಸಂಕೇತವನ್ನು, ಅನುಬಂಧ–3 'B'ರಲ್ಲಿರುವಂತೆ 3 ಅಂಕಿಯ ಸಂಕೇತವನ್ನು, ಅನುಬಂಧ–3 'C'ರಲ್ಲಿರುವಂತೆ 2 ಅಂಕಿಯ ಸಂಕೇತವನ್ನು ಬಳಸಿಕೊಂಡು ಮಾಹಿತಿ ತುಂಬಬೇಕು. ಉದಾ: ಹಿಂದುಳಿದ ಹಾಗೂ ಸಾಮಾನ್ಯ ಜಾತಿಗಳ ಪಟ್ಟಿಯಲ್ಲಿ ಜಾತಿ/ಉಪಜಾತಿಯ ಸಂಕೇತ ಸಂಖ್ಯೆ 0016 ಆಗಿದ್ದಲ್ಲಿ ಅದನ್ನು "A0016" ಎಂದು ಅಂಕಣದಲ್ಲಿ ತುಂಬುವುದು. ಪರಿಶಿಷ್ಟ ಜಾತಿಗೆ ಸೇರಿದ ಜಾತಿ/ಉಪಜಾತಿಯಾಗಿದ್ದು ಸಂಕೇತ ಸಂಖ್ಯೆ 016 ಆಗಿದ್ದಲ್ಲಿ ಅದನ್ನು "B016" ಎಂದು ಅಂಕಣದಲ್ಲಿ ತುಂಬುವುದು. ಪರಿಶಿಷ್ಟ ಪಂಗಡಕ್ಕೆ ಸೇರಿದ ಜಾತಿ/ಉಪಜಾತಿಯಾಗಿದ್ದು ಸಂಕೇತ ಸಂಖ್ಯೆ 16 ಆಗಿದ್ದಲ್ಲಿ ಅದನ್ನು "C16" ಎಂದು ಅಂಕಣದಲ್ಲಿ ತುಂಬುವುದು. ಒಂದು ವೇಳೆ ಅನುಬಂಧ–3'A', 3'B', ಮತ್ತು 3'C', ಗಳಲ್ಲಿ ನೀಡಿದ ಜಾತಿ/ಉಪಜಾತಿಗಳ ಪಟ್ಟಿಗಳಲ್ಲಿ ಯಾವುದೇ ಜಾತಿ ಸೇರಿರದಿದ್ದಲ್ಲಿ ಮತ್ತು ಅಂತಹ ಜಾತಿಯ ಕುರಿತು ಸಮೀಕ್ಷೆಯ ವೇಳೆಯಲ್ಲಿ ಕುಟುಂಬದ ಸದಸ್ಯರು ಮಾಹಿತಿ ನೀಡಿದ್ದಲ್ಲಿ ಅಂತಹ ಜಾತಿಯನ್ನು "ಇತರೆ" ಎಂದು ಪರಿಗಣಿಸಿ ಸಂಕೇತ ಸಂಖ್ಯೆ '00000' ನ್ನು ಸಂಬಂಧಪಟ್ಟ ಸದಸ್ಯರ ಹೆಸರಿನ ಮುಂದೆ ನಮೂದಿಸಿರಿ ಹಾಗೂ ಅಂತಹ ಜಾತಿ/ಉಪಜಾತಿಯ ಹೆಸರನ್ನು **ಅನುಸೂಚಿಯ ಒಂದನೇ ಪುಟದ ಕೆಳಭಾಗದಲ್ಲಿ ಒದಗಿಸಿರುವ ಅಂಕಣದಲ್ಲಿ (@ ಗುರುತು ಹಾಕಿದ ಜಾಗದಲ್ಲಿ) ಸ್ಪಷ್ಟವಾದ ಅಕ್ಷರಗಳಲ್ಲಿ ನಮೂದಿಸುವುದು.**

ಕೆಲವು ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯು ನಾನು 'ಯಾವುದೇ ಜಾತಿಗೆ ಸೇರಿಲ್ಲ' ಅಥವಾ 'ಜಾತಿರಹಿತ'ನೆಂದು ಹೇಳಬಹುದು. ಅಂತಹ ವ್ಯಕ್ತಿಯ ಹೆಸರಿನ ಮುಂದೆ ಸಂಕೇತ ಸಂಖ್ಯೆ '22222' ಎಂದು ದಾಖಲಿಸುವುದು. ಇನ್ನು ಕೆಲವರು ನನಗೆ ಜಾತಿ 'ಗೊತ್ತಿಲ್ಲ'ವೆಂದು ತಿಳಿಸಿದ್ದಲ್ಲಿ, ಅಂತಹವರ ಹೆಸರಿನ ಮುಂದೆ ಸಂಕೇತ ಸಂಖ್ಯೆ '33333'

ಎಂದು ದಾಖಲಿಸುವುದು. ಯಾವುದೇ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯು ತನ್ನ ಜಾತಿಯನ್ನು ತಿಳಿಸಲು ನಿರಾಕರಿಸಿದರೆ ಅಂತಹ ವ್ಯಕ್ತಿಯ ಹೆಸರಿನ ಮುಂದೆ ಸಂಕೇತ ಸಂಖ್ಯೆ '44444' ಎಂದು ದಾಖಲಿಸುವುದು.

ಜಾತಿಯ ಮಾಹಿತಿ ಅತ್ಯಂತ ಸೂಕ್ಷ್ಮವಾದ ವಿಷಯವಾಗಿದ್ದು, ಅದನ್ನು ಪಡೆದುಕೊಳ್ಳುವಾಗ ಮಾಹಿತಿದಾರರ ಅಥವಾ ಸದಸ್ಯರುಗಳ ಭಾವನೆಗಳಿಗೆ ನೋವಾಗದಂತೆ, ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳುವ ಅಗತ್ಯವಿದೆ ಮತ್ತು ಮಾಹಿತಿಯ ನಿಖರತೆಯನ್ನು ಜಾಗರೂಕತೆಯಿಂದ ದೃಢಪಡಿಸಿಕೊಳ್ಳಬೇಕು.

ಯಾವುದೇ ವ್ಯಕ್ತಿಯು ವರದಿ ಮಾಡುವ ಜಾತಿಯ ಹೆಸರನ್ನು ಯಥಾವತ್ತಾಗಿ ದಾಖಲೆ ಮಾಡಲು ನೀವು ಕರ್ತವ್ಯ ಬದ್ಧರಾಗಿರುತ್ತೀರಿ ಮತ್ತು ಈ ವಿಷಯವಾಗಿ ನೀವು ಯಾವುದೇ ಬಗೆಯ ವಾಗ್ವಾದದಲ್ಲಿ ತೊಡಗಬಾರದು. ವ್ಯಕ್ತಿಯು ವರದಿ ಮಾಡಿದ ಜಾತಿ/ಉಪಜಾತಿಗೆ ಬದಲಾಗಿ ಬೇರೆ ಯಾವುದೇ ಜಾತಿ/ಉಪಜಾತಿಯ ಹೆಸರನ್ನು ದಾಖಲೆ ಮಾಡಲು ಯತ್ನಿಸಬಾರದು.

ಇಲ್ಲಿ ಯಾವುದೇ ಜಾತಿ, ಪಂಗಡಗಳನ್ನು ಸಮರ್ಥಿಸಲು ಯಾವುದೇ ಪುರಾವೆ/ ದಾಖಲೆಗಳನ್ನು ಒದಗಿಸುವ ಅಗತ್ಯವಿರುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ. ಆದರೆ ಮಾಹಿತಿಯನ್ನು ಪಡೆಯುವಾಗ ಕುಟುಂಬದ ಸದಸ್ಯರಲ್ಲದವರು ಒಂದು ನಿರ್ದಿಷ್ಟ ರೀತಿಯಲ್ಲಿ ಮಾಹಿತಿ ದಾಖಲಿಸುವಂತೆ ಒತ್ತಾಯವನ್ನು ಅಥವಾ ಪ್ರಭಾವವನ್ನು ನಿಮ್ಮ ಮೇಲಾಗಲಿ ಅಥವಾ ಮಾಹಿತಿ ನೀಡುವವರ ಮೇಲಾಗಲಿ ಹೇರತಕ್ಕದ್ದಲ್ಲ.

ಉಪಜಾತಿ ಯಾವುದು ಇಲ್ಲವೆಂದು ತಿಳಿಸಿದ್ದಲ್ಲಿ, ಖಾಲಿ ಉಳಿಯುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

4.16 ಜಾತಿಗೆ ಇರುವ ಇನ್ನಿತರೆ ಪರ್ಯಾಯ ಹೆಸರುಗಳು: ಕಾಲಂ ನಂ.8

ಪರ್ಯಾಯ (Synonymous) ಜಾತಿ ಮತ್ತು ಉಪಜಾತಿಗಳನ್ನು ಗುರುತಿಸಲು ಅನುಕೂಲವಾಗುವ ಉದ್ದೇಶದಿಂದ ಈ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಮಾಹಿತಿ ನೀಡುವವರು ಅವರ ಜಾತಿ/ಉಪಜಾತಿ ಕುರಿತು ಮಾಹಿತಿ ನೀಡಿದ ನಂತರ, ಸದರಿ ಜಾತಿಗೆ ಬೇರೆ ಯಾವ ಹೆಸರುಗಳಲ್ಲಿ ಕರೆಯಲಾಗುತ್ತಿದೆ ಎಂಬ ಬಗ್ಗೆ ಗಣತಿದಾರರು ಮಾಹಿತಿದಾರರನ್ನು ಕೇಳಬೇಕು. ಮಾಹಿತಿದಾರರು ತಿಳಿಸಬಹುದಾದ ಗರಿಷ್ಠ 3 ಪರ್ಯಾಯ ಜಾತಿ/ಉಪಜಾತಿಗಳನ್ನು ಕಾಲಂ 8ರಲ್ಲಿ ನೀಡಿರುವ 3 ಬಾಕ್ಸ್‌ಗಳಲ್ಲಿ ಗಣತಿದಾರರು ಸಂಕೇತ ಸಂಖ್ಯೆಗಳ ಮೂಲಕ ನಮೂದಿಸಬೇಕು. (ಅನುಬಂಧ-3'A', 3'B', ಮತ್ತು 3'C', ಗಳಲ್ಲಿ ಸೇರಿರುವ ಜಾತಿ/ಉಪಜಾತಿಗಳ ಪಟ್ಟಿಯನ್ನು ಉಲ್ಲೇಖಿಸಬಹುದು). ಖಾಲಿ ಉಳಿಯುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

4.17 **ಪೂರ್ಣಗೊಂಡ ವಯಸ್ಸು:** ಕಾಲಂ 9

ಪ್ರತಿಯೊಬ್ಬ ವ್ಯಕ್ತಿಯ ವಯಸ್ಸನ್ನು ನಿಖರವಾಗಿ ನಮೂದಿಸುವುದು. ಸಮೀಕ್ಷೆ ನಡೆಸುವ ಸಂದರ್ಭದಲ್ಲಿ ಕುಟುಂಬದ ಸದಸ್ಯರ ವಯಸ್ಸನ್ನು ದಾಖಲಿಸುವಾಗ, ಸಮೀಕ್ಷೆಯ ದಿನಾಂಕದಂದು, ವಾಸ್ತವವಾಗಿ ಆ ವ್ಯಕ್ತಿಯ ಪೂರ್ಣಗೊಂಡ ವರ್ಷವನ್ನು ಮಾತ್ರ ದಾಖಲಿಸುವುದು.

ಗಣತಿಯ ಸಂದರ್ಭದಲ್ಲಿ ಕುಟುಂಬದಲ್ಲಿ ಒಂದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶಿಶು ಇದ್ದಲ್ಲಿ ವಯಸ್ಸನ್ನು "00" ಎಂದು ನಮೂದಿಸಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ವ್ಯಕ್ತಿಗಳಿಗೆ ಸಾಮಾನ್ಯವಾಗಿ ತಮ್ಮ ನಿಖರವಾದ ವಯಸ್ಸು ನೆನಪಿರುವುದಿಲ್ಲ. ಅಂತಹ ವ್ಯಕ್ತಿಗಳ ವಯಸ್ಸನ್ನು ಜಾಗರೂಕತೆಯಿಂದ ಕೇಳಿ ಪಡೆಯುವುದು. ತಾಯಂದಿರನ್ನು ವಿಚಾರಿಸುವುದರ ಮೂಲಕ ಅವರ ಮಕ್ಕಳ ನಿಖರವಾದ ವಯಸ್ಸನ್ನು ಪಡೆಯಬಹುದು.

4.18 **ಮಾತೃಭಾಷೆ:** ಕಾಲಂ ನಂ.10

ಬಾಲ್ಯಾವಸ್ಥೆಯಲ್ಲಿರುವಾಗ ಒಬ್ಬ ವ್ಯಕ್ತಿಯ ತಾಯಿಯು ಆ ಮಗುವಿನೊಂದಿಗೆ ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದಳೋ ಅದೇ ಆ ವ್ಯಕ್ತಿಯ ಮಾತೃಭಾಷೆ. ಒಂದು ವೇಳೆ ಶಿಶುವಾಗಿರುವಾಗಲೇ ತಾಯಿಯು ಮೃತಪಟ್ಟಿದ್ದರೆ, ಆಗ ಆ ವ್ಯಕ್ತಿಯು ಬಾಲ್ಯಾವಸ್ಥೆಯಲ್ಲಿರುವಾಗ ಮನೆಯಲ್ಲಿ ಮುಖ್ಯವಾಗಿ ಯಾವ ಭಾಷೆಯಲ್ಲಿ

ಮಾತನಾಡಲಾಗುತ್ತಿತ್ತೋ ಆ ಭಾಷೆಯೇ ಆ ವ್ಯಕ್ತಿಯ ಮಾತೃಭಾಷೆಯಾಗಿರುತ್ತದೆ. ಎಳೆವಯಸ್ಸಿನ ಶಿಶುಗಳ ಮತ್ತು ಮೂಕರ ವಿಷಯದಲ್ಲಿ ಅವರವರ ತಾಯಂದಿರು ಸಾಮಾನ್ಯವಾಗಿ ಮಾತನಾಡುವ ಭಾಷೆಯನ್ನೇ ನಮೂದಿಸಬೇಕು. ಯಾವುದೇ ಬಗೆಯ ಸಂದೇಹವು ಕಂಡುಬಂದರೆ ಕುಟುಂಬದಲ್ಲಿ ಮುಖ್ಯವಾಗಿ ಮಾತನಾಡಲು ಬಳಸಲ್ಪಡುತ್ತಿರುವ ಭಾಷೆಯನ್ನೇ ನಮೂದಿಸಬಹುದು. ಮಾತೃಭಾಷೆಯೆಂದು ವರದಿಯಾಗುವ ಭಾಷೆಗೆ ಲಿಪಿಯು ಇರಲೇಬೇಕೆಂಬ ಕಡ್ಡಾಯವಿಲ್ಲ.

ಮಾಹಿತಿದಾರರು ಮಾತೃಭಾಷೆ ಎಂದು ವರದಿ ಮಾಡಿದ ಭಾಷೆಯ ಹೆಸರನ್ನು ಯಾವುದೇ ಆಗಿದ್ದರೂ, ಸಂಕೇತಗಳ ಮೂಲಕ ದಾಖಲಿಸಿರಿ. ಸಂಕೇತವಿಲ್ಲದ ಇತರೆ ಭಾಷೆಗಳಿಗೆ ಸಂಕೇತ "00" ಎಂದು ನಮೂದಿಸಿ. ಸಂಕೇತ ಸಂಖ್ಯೆಗಳನ್ನು ಅನುಬಂಧ-2ರಲ್ಲಿ ನಿಗದಿಪಡಿಸಲಾಗಿದೆ.

ಧರ್ಮ ಮತ್ತು ಮಾತೃಭಾಷೆ ಇವೆರಡರ ನಡುವೆ ಯಾವುದೇ ಬಗೆಯ ಸಂಬಂಧವನ್ನು ಕಲ್ಪಿಸಲು ನೀವು ಪ್ರಯತ್ನಿಸಬಾರದು.

ಕುಟುಂಬವು ಸಂಬಂಧಿಗಳಿಂದ ಅಥವಾ ಸಂಬಂಧವಿಲ್ಲದ ಅಥವಾ ಅವುಗಳ ಮಿಶ್ರಣಗಳಿಂದ ಕೂಡಿರಬಹುದಾದ್ದರಿಂದ, ಪ್ರತಿಯೊಬ್ಬ ವ್ಯಕ್ತಿಯನ್ನು ಆಕೆಯ/ಆತನ ಮಾತೃಭಾಷೆ ಬಗ್ಗೆ ವಿಚಾರಿಸುವುದು ಅತ್ಯಾವಶ್ಯಕ, ಏಕೆಂದರೆ ಕುಟುಂಬದಲ್ಲಿರುವ ಪ್ರತಿಯೊಬ್ಬ ಸದಸ್ಯರ ಮಾತೃಭಾಷೆ ಒಂದೇ ಆಗಿರಬೇಕೆಂಬುದಿಲ್ಲ ಹಾಗೂ ಬೇರೆ ಬೇರೆ ಸದಸ್ಯರ ಮಾತೃಭಾಷೆ ಬೇರೆ ಬೇರೆ ಆಗಿರಬಹುದು.

4.19 **ಆಧಾರ್ ಕಾರ್ಡ್‌ಸಂಖ್ಯೆ:**ಕಾಲಂ ನಂ 11

ಕುಟುಂಬದ ಸದಸ್ಯರಿಗೆ ಆಧಾರ್ ಕಾರ್ಡನ್ನು ವಿತರಣೆ ಮಾಡಿದ್ದರೆ ಅದರಲ್ಲಿರುವ 12 ಗುರುತಿನ ಅಂಕಿಗಳನ್ನು ಸಂಬಂಧಪಟ್ಟ ಹೆಸರಿನ ಮುಂದೆ ದಾಖಲಿಸುವುದು. ಪಡೆಯದಿದ್ದಲ್ಲಿ x ಎಂದು ದಾಖಲಿಸುವುದು.

4.20 **ಚುನಾವಣಾ ಆಯೋಗದ ಗುರುತಿನ ಚೀಟಿ ಸಂಖ್ಯೆ :**ಕಾಲಂ ನಂ 12

ಭಾರತ ಚುನಾವಣಾ ಆಯೋಗವು ನೀಡಿರುವ ಗುರುತಿನ ಚೀಟಿಯ ಸಂಖ್ಯೆಯನ್ನು ಸದಸ್ಯರ ಹೆಸರ ಮುಂದೆ ನಮೂದಿಸುವುದು. ಪಡೆಯದಿದ್ದಲ್ಲಿ x ಎಂದು ದಾಖಲಿಸುವುದು.

4.21**ಅಂಗವಿಕಲರಾಗಿದ್ದರೆ:** ಕಾಲಂ ನಂ 13

ವ್ಯಕ್ತಿಯು ದೈಹಿಕವಾಗಿ/ಮಾನಸಿಕವಾಗಿ ಅಂಗವಿಕಲರಾಗಿದ್ದಲ್ಲಿ ಸಂಕೇತ ಪಟ್ಟಿಯಲ್ಲಿ ನೀಡಿರುವ ಸಂಖ್ಯೆಗಳನ್ನು ಬಳಸಿಕೊಂಡು ನಮೂನೆಯಲ್ಲಿ ನಮೂದಿಸುವುದು. ಪ್ರಧಾನವಾಗಿರುವ ವೈಕಲ್ಯತೆಯನ್ನು ಮಾತ್ರ ನಮೂದಿಸುವುದು. ಅಂಗವಿಕಲತೆ ಇಲ್ಲದಿದ್ದಲ್ಲಿ ಸಂಕೇತ "09" ನಮೂದಿಸುವುದು. ಸಂಕೇತ ಸಂಖ್ಯೆಗಳನ್ನು ಅನುಬಂಧ-2ರಲ್ಲಿ ನಿಗದಿಪಡಿಸಲಾಗಿದೆ. ಗಣತಿಯ ಸಂದರ್ಭದಲ್ಲಿ ಕುಟುಂಬದಲ್ಲಿ ಯಾರಾದರೂ ಸಂಕೇತ ಪಟ್ಟಿಯಲ್ಲಿ ಸೂಚಿಸಿರುವ ಅಂಗವಿಕಲತೆಯನ್ನು ಹೊಂದಿರದೆ ಇತರೆ ಅಂಗವಿಕಲತೆಯನ್ನು ಹೊಂದಿದ್ದಲ್ಲಿ "00" ಎಂದು ನಮೂದಿಸಬೇಕು.

4.22ವೈವಾಹಿಕ ಸ್ಥಾನಮಾನ:ಕಾಲಂ ನಂ.14

ಈ ಪ್ರಶ್ನೆಗೆ ಕುಟುಂಬದ ಪ್ರತಿ ಸದಸ್ಯರ ಮಾಹಿತಿಯನ್ನು ಪಡೆದು ಜಾಗರೂಕತೆಯಿಂದ ಅನುಬಂಧ-2ರಲ್ಲಿರುವ ಸಂಕೇತ ಪಟ್ಟಿಯನ್ನು ಬಳಸಿಕೊಂಡು ದಾಖಲಿಸುವುದು. ಸದರಿ ಮಾಹಿತಿಯನ್ನು ಸಂಗ್ರಹಿಸುವ ಸೂಕ್ಷ್ಮತೆಯನ್ನು ಅರಿತು ಮಾಹಿತಿದಾರರೊಂದಿಗೆ ಸೌಜನ್ಯದಿಂದ ಮಾಹಿತಿಯನ್ನು ಪಡೆದು ನಮೂದಿಸಬೇಕು. ಈ ಮಾಹಿತಿಯು ಸಾಮಾಜಿಕ ಬದಲಾವಣೆ ಕುರಿತಂತೆ ಬೆಳಕು ಚೆಲ್ಲುವುದರಿಂದ ಮಾಹಿತಿಯ ನಿಖರತೆಯ ಬಗ್ಗೆ ಎಚ್ಚರವಹಿಸುವುದು.

ಎಂದೂ ವಿವಾಹವಾಗದೆ ಇರುವ ವ್ಯಕ್ತಿಗೆ, ಈ ಪ್ರಶ್ನೆ ಅಡಿಯಲ್ಲಿರುವ ಚೌಕದಲ್ಲಿ ಸಂಕೇತ "01" ದಾಖಲಿಸುವುದು.

ಇಲ್ಲಿ ವಯಸ್ಸನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ವ್ಯಕ್ತಿಗಳಿಂದ ಉತ್ತರ ಪಡೆಯುವುದು. ಅತಿ ಸಣ್ಣ ವಯಸ್ಸಿನ ಮಕ್ಕಳಿಗೆ ಮದುವೆಯಾಗಿಲ್ಲವೆಂದು ನಮಗೆ ಗೊತ್ತಿದ್ದರೂ ಸಹ ವಿಚಾರಣೆಯ ನಂತರ ಸೂಕ್ತ ಸಂಕೇತ ಸಂಖ್ಯೆಯನ್ನು ದಾಖಲಿಸಬೇಕು. ದೇಶದ ಹಲವು ಭಾಗಗಳಲ್ಲಿ ಬಾಲ್ಯ ವಿವಾಹ ಅಥವಾ ಯೌವ್ವನಾವಸ್ಥೆಗೆ (ಮದುವೆಗೆ ನಿಗದಿಯಾದ ಕನಿಷ್ಠ ವಯೋಮಿತಿ) ತಲುಪುವ ಮುಂಚೆಯೆ ಮದುವೆಯಾಗುವ ವ್ಯವಸ್ಥೆಯಿರುವುದು ನಿಮಗೆ ತಿಳಿದಿರಬಹುದು. ಸಂಕೇತ ಸಂಖ್ಯೆಗಳನ್ನು ಅನುಬಂಧ-2ರಲ್ಲಿ ನಿಗಧಿಪಡಿಸಲಾಗಿದೆ.

4.23 ವಿವಾಹ ಆದ ಸಮಯದಲ್ಲಿ ವಯಸ್ಸು: ಕಾಲಂ ನಂ.15

ವಿವಾಹ ಆದ ಸಮಯದಲ್ಲಿ ವಯಸ್ಸನ್ನು ತಿಳಿಸಿದಂತೆ ನಮೂದಿಸುವುದು. ಕೆಲವು ಕಡೆ ಅಲ್ಪ ವಯಸ್ಕರು ವಿವಾಹ ಆದ ಪ್ರಸಂಗಗಳಲ್ಲಿ ಅವರು ತಿಳಿಸಿದ ವಯಸ್ಸನ್ನು ನಮೂದಿಸುವುದು.

ಸದ್ಯದಲ್ಲಿ ವಿವಾಹಿತ ಸ್ಥಿತಿಯಲ್ಲಿರುವವರು ಅಥವಾ ವಿಧವೆ ಅಥವಾ ವಿಧುರರಾಗಿರುವವರು ಅಥವಾ ಬೇರ್ಪಡೆಯಾಗಿರುವವರು ಅಥವಾ ವಿವಾಹ ವಿಚ್ಛೇಧನ ಪಡೆದವರಿಂದ ಅವರ ವಿವಾಹವಾದ ವಯಸ್ಸನ್ನು ಕೇಳಿ ನಮೂದಿಸುವುದು. ಮರು ಮದುವೆಯಾದ ಮತ್ತು ಬಹು ಪತಿ/ಬಹುಪತ್ನಿತ್ವ ಹೊಂದಿದ ವ್ಯಕ್ತಿಯಿಂದ ತನ್ನ ಮೊದಲನೆಯ ಮದುವೆಯಾದಾಗಿನ ವಯಸ್ಸನ್ನು ನಮೂದಿಸುವುದು. ಅವಿವಾಹಿತರೆಂದು ಹೇಳಿಕೊಂಡ ವ್ಯಕ್ತಿಗೆ ಈ ಪ್ರಶ್ನೆ ಕೇಳಬಾರದು.

4.24 ಶೈಕ್ಷಣಿಕ ವಿವರಗಳು:

ಶಾಲೆಗೆ ಸೇರಿದ ಸಮಯದಲ್ಲಿ ವಯಸ್ಸು: ಕಾಲಂ ನಂ.16

ಆಯೋಗದಿಂದ ನಡೆಸಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮುಖ್ಯ ಉದ್ದೇಶವು ಹಿಂದುಳಿದ ವರ್ಗದವರನ್ನು ಗುರುತಿಸುವುದಾಗಿರುತ್ತದೆ. ಇದರಲ್ಲಿ ಪ್ರಧಾನ ಅಂಶವು ಶೈಕ್ಷಣಿಕ ಮಾಹಿತಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಕರಾರುವಾಕ್ಕಾಗಿ ಸಂಗ್ರಹಿಸಬೇಕಾಗುತ್ತದೆ. ಇದರಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ.

ಶಾಲೆಗೆ ಸೇರಿದ ಸಮಯದಲ್ಲಿ ಕುಟುಂಬದ ಸದಸ್ಯರಿಗೆ ಆಗಿದ್ದ ವಯಸ್ಸನ್ನು ನಮೂದಿಸುವುದು. 6 ವರ್ಷದೊಳಗಿನ ಮಕ್ಕಳು, 6 ವರ್ಷ ಪೂರೈಸಿದ ನಂತರವೂ ಶಾಲೆಗೆ ದಾಖಲಾಗದ ಅಥವಾ ಔಪಚಾರಿಕ ಶಾಲೆಗಳಿಗೆ ಸೇರದ ಕುಟುಂಬದ ಸದಸ್ಯರಿಗೆ ಸಂಕೇತ "00" ಎಂದು ನಮೂದಿಸುವುದು.

4.25 ಶಾಲೆಯ ವಿಧ:ಕಾಲಂ ನಂ. 17

ಅನುಬಂಧ-2ರಲ್ಲಿ ಸರ್ಕಾರಿ, ಖಾಸಗಿ, ಕಾನ್ವೆಂಟ್, ಮದರಸ ಇತ್ಯಾದಿ ಶಾಲೆಗಳನ್ನು 15 ವರ್ಗಗಳಲ್ಲಿ ವಿಂಗಡಿಸಲಾಗಿರುತ್ತದೆ. ಅಧ್ಯಯನ ಮಾಡಿದ ಶಾಲೆಗೆ ಅನ್ವಯಿಸುವ ಸಂಕೇತ ಸಂಖ್ಯೆಯನ್ನು ನಮೂದಿಸುವುದು. ಈ ಉದ್ದೇಶಕ್ಕಾಗಿ 3 ಬಾಕ್ಸ್‌ಗಳನ್ನು ನಮೂನೆಯಲ್ಲಿ ಒದಗಿಸಲಾಗಿದ್ದು, 3 ವಿಧದ ಶಾಲೆಗಳನ್ನು ಮಾತ್ರ ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. ಒಂದೇ ಶಾಲೆಯಲ್ಲಿ ಅಧ್ಯಯನ ಮಾಡಿದ್ದಲ್ಲಿ ಅನ್ವಯಿಸುವ ಒಂದೇ ಸಂಕೇತ ಸಂಖ್ಯೆಯನ್ನು ನಮೂದಿಸುವುದು. ಖಾಲಿ ಉಳಿಯುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

4.26 ವಿದ್ಯಾಭ್ಯಾಸದ ವಿವರಗಳು: ಕಾಲಂ ನಂ. 18

ಅಕ್ಷರಸ್ಥ : ಒಬ್ಬ ವ್ಯಕ್ತಿಯ ವಯಸ್ಸು 7 ವರ್ಷಕ್ಕಿಂತ ಹೆಚ್ಚಾಗಿದ್ದು, ಓದಲು, ಬರೆಯಲು ಮತ್ತು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿದ್ದರೆ. ಅವರನ್ನು ಅಕ್ಷರಸ್ಥರೆಂದು ಪರಿಗಣಿಸಲಾಗುತ್ತದೆ. ಅಂದರೆ, ಓದುವುದಕ್ಕೆ ಮಾತ್ರ ಬಂದು ಬರೆಯಲು ಬಾರದೇ ಇದ್ದರೆ ಅಕ್ಷರಸ್ಥ ಎಂದು ಪರಿಗಣಿಸುವುದಿಲ್ಲ. ಅಕ್ಷರಸ್ಥ ಎಂದು ಪರಿಗಣಿಸಲ್ಪಡಬೇಕಾದರೆ, ಒಬ್ಬ ವ್ಯಕ್ತಿ ಯಾವುದೇ ಸಾಂಪ್ರದಾಯಿಕ ಶಿಕ್ಷಣವನ್ನು ಪಡೆದಿರಲೇಬೇಕೆಂಬ ಅಗತ್ಯವಿಲ್ಲ. ವಯಸ್ಕರ ಶಿಕ್ಷಣ ಶಾಲೆಗಳಿಗೆ ಅಥವಾ ಸಾಂಪ್ರದಾಯಿಕವಲ್ಲದ ಯಾವುದೇ ಶಿಕ್ಷಣ ಪಡೆದಿರಬಹುದು. ಕುರುಡರಾಗಿದ್ದು ಬ್ರೈಲ್ ಲಿಪಿಯನ್ನು ಓದಬಲ್ಲವರು ಕೂಡ ಅಕ್ಷರಸ್ಥರೆಂದು ಪರಿಗಣಿತರಾಗುತ್ತಾರೆ.

ಅನಕ್ಷರಸ್ಥ : ಓದಲು ಮತ್ತು ಬರೆಯಲು ಬಾರದೆ ಇದ್ದವರು, ಓದಲು ಮಾತ್ರ ಬಂದು ಯಾವುದೇ ಭಾಷೆಯಲ್ಲೂ ಬರೆಯಲು ಬಾರದೆ ಇದ್ದವರು ಅನಕ್ಷರಸ್ಥರು. ಆರು ವರ್ಷ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ ಎಲ್ಲಾ ಮಕ್ಕಳನ್ನು ತಾಂತ್ರಿಕವಾಗಿ ಅನಕ್ಷರಸ್ಥರೆಂದೇ ಪರಿಗಣಿಸಬೇಕಾಗುತ್ತದೆ.

ಒಬ್ಬ ವ್ಯಕ್ತಿಯು ಹೊಂದಿರಬಹುದಾದ ವಿವಿಧ ರೀತಿಯ ವಿದ್ಯಾಭ್ಯಾಸದ ವಿವರಗಳನ್ನು ಅನುಬಂಧ-2ರಲ್ಲಿ ಸ್ಥೂಲವಾಗಿ ವರ್ಗೀಕರಿಸಿದ್ದು 22 ಸಂಕೇತ ಸಂಖ್ಯೆಗಳನ್ನು ನೀಡಲಾಗಿದೆ. ಕುಟುಂಬದ ಸದಸ್ಯರಿಗೆ ಅನ್ವಯಿಸುವ ಅತೀ ಹೆಚ್ಚಿನ ವಿದ್ಯಾಭ್ಯಾಸದ ವಿವರವನ್ನು ಸಂಕೇತ ಸಂಖ್ಯೆಯ ಮೂಲಕ ನಮೂದಿಸುವುದು. ಸಂಕೇತ ಪಟ್ಟಿಯಲ್ಲಿ ಲಭ್ಯವಿರದ ಯಾವುದೇ ವಿದ್ಯಾಭ್ಯಾಸದ ಕೋರ್ಸನ್ನು ಮುಗಿಸಿದ್ದಲ್ಲಿ ಇತರೆ "00" ಎಂದು ನಮೂದಿಸುವುದು.ಖಾಲಿ ಉಳಿಯುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

ಶಾಲೆ ಬಿಟ್ಟಿದ್ದರೆ ವಿವರಗಳು:

4.27 ಶಾಲೆ ಬಿಟ್ಟಾಗಿನ ತರಗತಿ: ಕಾಲಂ ನಂ.19

ಈ ಮಾಹಿತಿಯು 6 ವರ್ಷದಿಂದ 16 ವರ್ಷದೊಳಗಿರುವ ಸದಸ್ಯರಿಗೆ ಮಾತ್ರ ಅನ್ವಯಿಸುತ್ತದೆ. ಕುಟುಂಬದ ಸದಸ್ಯರು ತಮ್ಮ ವಿದ್ಯಾಭ್ಯಾಸವನ್ನು ತ್ಯಜಿಸಿ ಶಾಲೆ ಬಿಟ್ಟಿದ್ದಲ್ಲಿ ಯಾವ ತರಗತಿಯಲ್ಲಿದ್ದಾಗ ಬಿಟ್ಟಿದ್ದಾರೆಂಬುದನ್ನು ಒದಗಿಸಿರುವ ಬಾಕ್ಸ್‌ನಲ್ಲಿ ಸ್ಪಷ್ಟವಾಗಿ ನಮೂದಿಸುವುದು. ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಮಾತ್ರ ಈ ಮಾಹಿತಿಯು ಸೀಮಿತವಾಗಿರುತ್ತದೆ. ಅನ್ವಯಿಸದಿದ್ದಲ್ಲಿ X ಎಂದು ನಮೂದಿಸುವುದು.

4.28 ಶಾಲೆ ಬಿಟ್ಟಾಗಿನ ವಯಸ್ಸು; ಕಾಲಂ ನಂ.20

ಈ ಕಾಲಂನಲ್ಲಿ ಒಂದು ಬಾಕ್ಸ್‌ನ್ನು ನೀಡಲಾಗಿದ್ದು ಅದರಲ್ಲಿ ಕುಟುಂಬದ ಸದಸ್ಯನು ಶಾಲೆಯನ್ನು ಬಿಟ್ಟ ಸಮಯದಲ್ಲಿ ಅವರ ಪೂರ್ಣಗೊಂಡಿರುವ ವಯಸ್ಸನ್ನು ಸ್ಪಷ್ಟವಾಗಿ ನಮೂದಿಸುವುದು. ಅನ್ವಯಿಸದಿದ್ದಲ್ಲಿ X ಎಂದು ನಮೂದಿಸುವುದು.

4.29 ಶಾಲೆ ಬಿಡಲು ಕಾರಣ: ಕಾಲಂ ನಂ:21

ಗ್ರಾಮೀಣ, ನಗರ ಪ್ರದೇಶ, ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿ 10ನೇ ತರಗತಿ ವರೆಗೆ ಓದುತ್ತಿರುವ ಮಕ್ಕಳು ಶಾಲೆ ಬಿಡಲು ಆರ್ಥಿಕ ಸಮಸ್ಯೆ, ಕುಟುಂಬದ ವಲಸೆ, ಮನೆಕೆಲಸದಲ್ಲಿ ನಿರತರಾಗಿರುವುದು ಇತರೆ ಕಾರಣಗಳಿಂದಾಗಿ ವಿದ್ಯಾಭ್ಯಾಸವನ್ನು ನಿಲ್ಲಿಸಿ ಶಾಲೆ ಬಿಡುವ ನಿದರ್ಶನಗಳನ್ನು ಗಮನಿಸಲಾಗಿದೆ. ಶಾಲೆ ಬಿಡಲು ಇರುವ ವಿವಿಧ ಕಾರಣಗಳನ್ನು 22 ವರ್ಗಗಳಲ್ಲಿ ವಿಂಗಡಿಸಲಾಗಿದ್ದು ಅವುಗಳಿಗೆ 01 ರಿಂದ 22 ಸಂಕೇತ ಸಂಖ್ಯೆಗಳನ್ನು ನೀಡಿದ್ದು ಅವುಗಳನ್ನು ಅನುಬಂಧ-2ರಲ್ಲಿ ಅಳವಡಿಸಲಾಗಿದೆ. ಶಾಲೆ ಬಿಟ್ಟ ವ್ಯಕ್ತಿಗೆ ಅನ್ವಯಿಸುವ ಕಾರಣವನ್ನು ಕಾಲಂನಲ್ಲಿ ನೀಡಿರುವ ಬಾಕ್ಸ್‌ನಲ್ಲಿ ನಮೂದಿಸುವುದು. ಒಂದು ವೇಳೆ ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ಶಾಲೆಯನ್ನು ಬಿಟ್ಟಿದ್ದಲ್ಲಿ ಗರಿಷ್ಠ 3 ಕಾರಣಗಳನ್ನು ನೀಡಿರುವ 3 ಬಾಕ್ಸ್‌ಗಳಲ್ಲಿ ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. ಅನ್ವಯಿಸದ ಖಾಲಿ ಉಳಿಯುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು. ಕುಟುಂಬದಲ್ಲಿ ಯಾರಾದರೂ ಮೇಲ್ಕಾಣಿಸಿದ ಸಂಕೇತ ಸಂಖ್ಯೆಗಳನ್ನು ಹೊರತು ಪಡಿಸಿ ಬೇರೆ ಯಾವುದಾದರೂ ಕಾರಣದಿಂದಾಗಿ ಶಾಲೆ ಬಿಟ್ಟಿದ್ದರೆ "00" ಎಂದು ನಮೂದಿಸಬೇಕು.

4.30.17 ರಿಂದ 40 ವರ್ಷದವರು ಶಿಕ್ಷಣ ಮುಂದುವರೆಸದಿರಲು ಕಾರಣ : ಕಾಲಂ ನಂ. 22 :

ಸಾಮಾನ್ಯವಾಗಿ 10ನೇ ತರಗತಿ ಮುಗಿಸಿದವರು ಇಲ್ಲವೇ ಅದರಲ್ಲಿ ಅನುತ್ತೀರ್ಣರಾದವರು ಶಿಕ್ಷಣವನ್ನು ಮುಂದುವರಿಸದಿರುವ ನಿದರ್ಶನಗಳು ಇರುತ್ತವೆ. ಇನ್ನೂ ಕೆಲವು ಕಡೆಗಳಲ್ಲಿ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಸಿಗದ ಕಾರಣ ಇಲ್ಲವೆ ಅಂತಹ ಕೋರ್ಸುಗಳನ್ನು ಸೇರಲು ಆರ್ಥಿಕ ಸಮಸ್ಯೆ ಎದುರಾದ ಪ್ರಕರಣಗಳಲ್ಲಿ ಕೆಲವರು ವ್ಯಾಸಂಗವನ್ನು ನಿಲ್ಲಿಸಿರುವ ನಿದರ್ಶನಗಳು ಇವೆ. ಹೀಗೆಅನೇಕ ಕಾರಣಗಳಿಂದ 17 ರಿಂದ 40 ವರ್ಷದ

ಒಳಗಿರುವವರು ಶಿಕ್ಷಣ ಮುಂದುವರೆಸದಿರಲು ಸಾಧ್ಯವಾಗದೇ ಇರಬಹುದು ಅಂತಹವುಗಳನ್ನು ಪಟ್ಟಿ ಮಾಡಿದ್ದು ಅನುಬಂಧ-2ರಲ್ಲಿ ಅವುಗಳಿಗೆ 01 ರಿಂದ 15ರವರೆಗೆ ಸಂಕೇತ ಸಂಖ್ಯೆಗಳನ್ನು ನೀಡಲಾಗಿರುತ್ತದೆ. ಗಣತಿಗೆ ಒಳಪಟ್ಟ ಸದಸ್ಯರಿಗೆ ಸಂಕೇತ ಸಂಖ್ಯೆಯನ್ನು ನಮೂದಿಸುವುದು. ಗರಿಷ್ಠ 3 ಕಾರಣಗಳನ್ನು ನಮೂದಿಸಲು ಅನುಕೂಲವಾಗುವಂತೆ 3 ಬಾಕ್ಸ್‌ಗಳನ್ನು ಒದಗಿಸಲಾಗಿರುತ್ತದೆ. ಅನ್ವಯಿಸದ ಖಾಲಿ ಉಳಿಯುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

4.31 ಅನಕ್ಷರಸ್ಥರಾಗಿದ್ದರೆ ಕಾರಣ: ಕಾಲಂ ನಂ. 23

ಅನಕ್ಷರತೆಗೆ ಕಾರಣಗಳಿಗೆ ವರ್ಗೀಕರಿಸಲಾಗಿದ್ದು, ಅವುಗಳನ್ನು 9 ಸಂಕೇತ ಸಂಖ್ಯೆಗಳ ಮೂಲಕ ಅನುಬಂಧ-2ರಲ್ಲಿ ತೋರಿಸಲಾಗಿದೆ. ಕುಟುಂಬದ ಅನಕ್ಷರಸ್ಥ ಸದಸ್ಯನಿಗೆ ಅನ್ವಯಿಸುವ ಕಾರಣವನ್ನು ಸಂಕೇತ ಸಂಖ್ಯೆಯ ಮೂಲಕ ನಮೂದಿಸುವುದು. ಒಂದಕ್ಕಿಂತ ಹೆಚ್ಚು ಕಾರಣಗಳಿದ್ದಲ್ಲಿ ಗರಿಷ್ಠ 3 ಕಾರಣಗಳನ್ನು ಸಂಕೇತ ಸಂಖ್ಯೆಗಳ ಮೂಲಕ ನಮೂದಿಸಬಹುದು. ಇತರೆ ಕಾರಣಗಳಿದ್ದಲ್ಲಿ ಸಂಕೇತ ಸಂಖ್ಯೆ '00' ಎಂದು ನಮೂದಿಸುವುದು. ಅನ್ವಯಿಸದೇ ಇದ್ದಲ್ಲಿ, ಬಾಕ್ಸುಗಳಲ್ಲಿ X ಎಂದು ನಮೂದಿಸುವುದು.

4.32ನೀವು ಹಾಲಿ ಕೆಲಸ ಮಾಡುತ್ತಿದ್ದೀರಾ? ಕಾಲಂ ನಂ 24

ಅನುಬಂಧ-2ರಲ್ಲಿ 7 ಸಂಕೇತ ಸಂಖ್ಯೆಗಳನ್ನು ನೀಡಲಾಗಿದೆ. ಅವು ಸ್ವಯಂ ವೇದ್ಯವಾಗಿದ್ದು, ಅನ್ವಯಿಸುವ ಸಂಕೇತ ಸಂಖ್ಯೆಗಳನ್ನು ರೀತ್ಯಾ ನಮೂದಿಸುವುದು. ಬಹುತೇಕ ಕುಟುಂಬಗಳಲ್ಲಿ ತಾಯಿ ಹಾಗೂ ಇತರ ಸ್ತ್ರೀಯರು ಅಡಿಗೆ ಇತ್ಯಾದಿ ಮನೆವಾರ್ತೆ ಗೃಹ ಕೃತ್ಯಗಳಲ್ಲಿ ನಿರತರಾಗಿರುತ್ತಾರೆ. ಸದರಿ ಕೆಲಸಗಳಿಗಾಗಿ ಅವರಿಗೆ ಪ್ರತ್ಯೇಕವಾದ ಆದಾಯ ಸಂದಾಯವಾಗದಿದ್ದಾಗ್ಯೂ ಕುಟುಂಬಕ್ಕೆ ಅವರ ಕೊಡುಗೆ ಮಹತ್ವದ್ದಾಗಿರುತ್ತದೆ. ಅಂತಹವರನ್ನು "ಗೃಹಿಣಿ" ಎಂದು ಪರಿಗಣಿಸಿ ಸಂಕೇತ ಸಂಖ್ಯೆ '02' ಎಂದು ನಮೂದಿಸಬೇಕು. ಕೆಲಸ ಮಾಡದಿರುವುದಕ್ಕೆ ಇತರೆ ಕಾರಣಗಳಿದ್ದಲ್ಲಿ ಸಂಕೇತ ಸಂಖ್ಯೆ "00" ಎಂದು ನಮೂದಿಸುವುದು.

4.33ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ಸೇವೆ/ಉದ್ಯೋಗ: ಕಾಲಂ 25

ಈ ಮಾಹಿತಿಯು ಸಮೀಕ್ಷೆಗೆ ಬಹಳ ಮಹತ್ವದ್ದಾಗಿದ್ದು, ಮಾಸಿಕ ವೇತನದ ಆಧಾರದ ಮೇಲೆ ಕೆಲಸ ಮಾಡುವ ವ್ಯಕ್ತಿಗಳಿಗೆ ಹಾಗೂ ನಿವೃತ್ತಿ ಹೊಂದಿದ ಪಿಂಚಣಿದಾರರಿಗೆ ಅನ್ವಯವಾಗುತ್ತದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಸೇವೆಯಲ್ಲಿ ತೊಡಗಿದವರಲ್ಲದೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಧೀನದಲ್ಲಿ ಬರುವ ನಿಗಮಗಳು, ಮಂಡಳಿಗಳು ಹಾಗೂ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ನೌಕರರಿಗೆ ಅನ್ವಯಿಸುತ್ತದೆ. ವಿಶಿಷ್ಟ ಹುದ್ದೆಗಳಲ್ಲೂ ಸೇವೆ ಸಲ್ಲಿಸುತ್ತಿರುವ ಗಣ್ಯರಿಗೆ ಸಂಬಂಧಿಸಿದ ಮಾಹಿತಿಯನ್ನು ಕೂಡ ಪಡೆಯಲು ಅನುಕೂಲವಾಗುವಂತೆ ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಲ್ಲಿಯ ಸೇವೆ ಮತ್ತು ನಿಗಮ, ಮಂಡಳಿ, ಸಂಸ್ಥೆಗಳಲ್ಲಿ, ಸರ್ಕಾರಿ ಕ್ಷೇತ್ರದಲ್ಲಿ ಗುತ್ತಿಗೆ ಆಧಾರದ ಸೇವೆ ಮತ್ತು ಸರ್ಕಾರಿ ಕ್ಷೇತ್ರದಲ್ಲಿ ಹೊರಗುತ್ತಿಗೆ ಆಧಾರದ ಸೇವೆ ಕೆಲಸ ಮಾಡುವ ನೌಕರರನ್ನು 4 ಗುಂಪುಗಳಲ್ಲಿ (ಎ,ಬಿ,ಸಿ,ಡಿ) ವರ್ಗೀಕರಿಸಲಾಗಿರುತ್ತದೆ.

ಖಾಸಗಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಖಾಸಗಿ ಕಂಪನಿಗಳು, ಪಿಪಿಪಿ ಕಂಪನಿಗಳು, ಹೊರಗುತ್ತಿಗೆ ಕಂಪನಿಗಳಲ್ಲಿ ಕೆಲಸ ಮಾಡುವ ವಿವಿಧ ಹಂತದ ಸಿಬ್ಬಂದಿಗಳನ್ನು ಆಡಳಿತ ವರ್ಗ, ತಾಂತ್ರಿಕ ವರ್ಗ ಹಾಗೂ ಸಿಬ್ಬಂದಿ ವರ್ಗವಾಗಿ ವರ್ಗೀಕರಿಸಲಾಗಿರುತ್ತದೆ. ಅದೇ ರೀತಿಯಲ್ಲಿ ಬಹುರಾಷ್ಟ್ರೀಯ ಮತ್ತು ಮಾಹಿತಿ ತಂತ್ರಜ್ಞಾನ ಸಂಸ್ಥೆಗಳಲ್ಲಿ ಕೆಲಸ ಮಾಡುವವರನ್ನು ಕೂಡ 3 ಗುಂಪುಗಳಲ್ಲಿ ವರ್ಗೀಕರಿಸಲಾಗಿರುತ್ತದೆ.

ಮೇಲಿನಂತೆ ವರ್ಗೀಕರಿಸಲಾದ ಗುಂಪುಗಳಿಗೆ ಪ್ರತ್ಯೇಕ ಸಂಕೇತ ಸಂಖ್ಯೆಗಳನ್ನು, ಅಂದರೆ 01 ರಿಂದ 34ರವರೆಗೆ ಅನುಬಂಧ-2ರಲ್ಲಿ ನೀಡಲಾಗಿರುತ್ತದೆ. ಸಮೀಕ್ಷೆಯ ಸಮಯದಲ್ಲಿ ಗಣತಿದಾರರು ಕುಟುಂಬದ ಸದಸ್ಯರಿಂದ ಅವರು ಮಾಸಿಕ ವೇತನದ ಮೇಲೆ ಕೆಲಸ ಮಾಡುತ್ತಿರುವ ಉದ್ಯೋಗದ ಕುರಿತು ಸ್ಪಷ್ಟ ಮಾಹಿತಿಯನ್ನು ಪಡೆದು, ಅನ್ವಯಿಸುವ ಸಂಕೇತ ಸಂಖ್ಯೆಯನ್ನು ಭರ್ತಿ ಮಾಡಲು ಸೂಚಿಸಲಾಗಿದೆ. ಪಿಂಚಣಿದಾರರನ್ನು 3 ಗುಂಪುಗಳಲ್ಲಿ ವರ್ಗೀಕರಿಸಿದ್ದು, ಅವರಿಗೆ ಅನ್ವಯಿಸುವ ಸಂಕೇತ ಸಂಖ್ಯೆಗಳನ್ನು ದಾಖಲಿಸಲು ಸೂಚಿಸಿದೆ. ಮೇಲೆ

ಹೇಳಲಾದ ಸಂಕೇತ ಹೊರತಾಗಿ ಬೇರೆ ರೀತಿಯ ಮಾಸಿಕ ವೇತನ ಉದ್ಯೋಗವನ್ನು ಹೊಂದಿದ್ದಲ್ಲಿ ಅಂತಹ ವ್ಯಕ್ತಿಗೆ ಸಂಬಂಧಿಸಿದಂತೆ ಸಂಕೇತ ಸಂಖ್ಯೆ "00" ಎಂದು ನಮೂದಿಸುವುದು. ಅನ್ವಯಿಸದಿರುವ ವ್ಯಕ್ತಿಗಳಿಗೆ ಬಾಕ್ಸ್‌ನಲ್ಲಿ X ಎಂದು ಗುರುತಿಸುವುದು.

4.34**ಹಾಲಿ ಉದ್ಯೋಗ/ವ್ಯಾಪಾರ (ಸ್ವಯಂ ಉದ್ಯೋಗ)** : ಕಾಲಂ 26

ಯಾವುದೇ ಕುಟುಂಬವು / ಸದಸ್ಯರು ಒಂದು ವಸ್ತುವನ್ನು ಉತ್ಪಾದನಾ ರೂಪದಲ್ಲಿ ಮತ್ತು ಸ್ವಂತ ಬಂಡವಾಳದೊಂದಿಗೆ ಒಂದು ಆರ್ಥಿಕ ಚಟುವಟಿಕೆಯಲ್ಲಿ ಬೇರೆಯವರನ್ನು ಅವಲಂಬಿಸದೆ ಸ್ವಂತವಾಗಿ ಕುಟುಂಬದ ಸದಸ್ಯರೊಂದಿಗೆ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರೆ ಅಂತಹ ಚಟುವಟಿಕೆಗಳನ್ನು ಸ್ವಯಂ ಉದ್ಯೋಗವೆಂದು ಕರೆಯಲಾಗುವುದು.

ವ್ಯಕ್ತಿಯು ತೊಡಗಿರುವ ಉದ್ಯೋಗಗಳಲ್ಲಿ ಕೃಷಿ ಸಾಗುವಳಿ (ತೋಟಗಾರಿಕೆ, ಪ್ಲಾಂಟೇಷನ್, ಇತ್ಯಾದಿ ಸೇರಿ) ಹೈನುಗಾರಿಕೆ, ರೇಷ್ಮೆ ಕೃಷಿ ಮತ್ತು ಉದ್ಯೋಗ, ಕುಶಲ ಕಾರ್ಮಿಕರು, ವಿವಿಧ ವಸ್ತುಗಳ ತಯಾರಕರು, ಕಿರಾಣಿ ಅಂಗಡಿ ನಡೆಸುವವರು, ಹೂವು-ತರಕಾರಿ-ಹಣ್ಣು, ಮಾಂಸ-ಮೀನು ಮಾರಾಟಗಾರರು ಇಂತಹ ಅನೇಕ ಉದ್ಯೋಗಗಳು ಈ ಕಾಲಂನ ವ್ಯಾಪ್ತಿಯಲ್ಲಿ ಬರುತ್ತವೆ. ಇಂತಹ 107 ತರಹದ ಉದ್ಯೋಗ, ವ್ಯಾಪಾರ, ಉದ್ದಿಮೆಗಳನ್ನು ಗುರುತಿಸಲಾಗಿದ್ದು, ಅವುಗಳಿಗೆ 1 ರಿಂದ 107 ರವರೆಗೆ ಸಂಕೇತ ಸಂಖ್ಯೆ ನೀಡಲಾಗಿರುತ್ತದೆ (ಅನುಬಂಧ-2). ಮೇಲೆ ವರ್ಗೀಕರಿಸಿದ ಉದ್ಯೋಗಗಳ ಹೊರತಾಗಿ ಇತರೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗೆ ಸಂಬಂಧಿಸಿದಂತೆ ಸಂಕೇತ ಸಂಖ್ಯೆ "000" ಎಂದು ಬಳಸಿಕೊಳ್ಳಲು ಸೂಚಿಸಲಾಗಿದೆ.

ಕೆಲವು ಸಂದರ್ಭಗಳಲ್ಲಿ, ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ತರಹದ ಉದ್ಯೋಗ / ವ್ಯಾಪಾರಗಳಲ್ಲಿ ತೊಡಗಿರಬಹುದು. ಅಂತಹ ಸನ್ನಿವೇಶಗಳನ್ನು ಸಂಗ್ರಹಿಸುವ ದೃಷ್ಟಿಯಿಂದ ಈ ಕಾಲಂನಲ್ಲಿ 3 ಬಾಕ್ಸ್‌ಗಳನ್ನು ಒದಗಿಸಲಾಗಿದೆ. ಅನ್ವಯಿಸುವ ಸಂಕೇತ ಸಂಖ್ಯೆಯನ್ನು ಬಾಕ್ಸ್‌ಗಳಲ್ಲಿ ನಮೂದಿಸುವುದು. ಅನ್ವಯಿಸದ ಖಾಲಿ ಉಳಿದಿರುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

4.35**ಸಾಂಪ್ರದಾಯಿಕ ಕಸುಬುಗಳ ವಿವರ :**

ನಿಮ್ಮ ಕುಟುಂಬದ ಸಾಂಪ್ರದಾಯಿಕ ಕುಲಕಸುಬು ಯಾವುದು? ಕಾಲಂ 27

ಕೆಲವೊಂದು ಕುಟುಂಬಗಳು ಅವರ ಜೀವನ ನಿರ್ವಹಣೆಗಾಗಿ ತಲೆತಲಾಂತರಗಳಿಂದ ಬಂದಿರತಕ್ಕಂತಹ ಕುಲ ಕಸುಬುಗಳನ್ನು ಅವಲಂಬಿಸಿರುತ್ತಾರೆ. ವಂಶಪಾರಂಪರ್ಯ ವೃತ್ತಿಯಲ್ಲಿ **"ಕೌಶಲ್ಯತೆ"**ಯು ಪ್ರಧಾನವಾಗಿ ಇರಬೇಕಾಗಿರುತ್ತದೆ. ಸದರಿ ಕುಲಕಸುಬುಗಳಿಂದ ಆದಾಯ ಸಾಕಷ್ಟು ಪ್ರಮಾಣದಲ್ಲಿ ಬರಲಿ ಬರದೇ ಇರಲಿ, ಕಸುಬುದಾರರು ತಮ್ಮ ವೃತ್ತಿಯನ್ನು ಸಾಮಾನ್ಯವಾಗಿ ಮುಂದುವರೆಸಿಕೊಂಡು ಹೋಗುತ್ತಾರೆ. ಉದಾಹರಣೆ : ದೊಂಬರ ಆಟ ಆಡುವವರು, ಕರಡಿ ಕುಣಿಸುವವರು, ಶಕುನ ಹೇಳುವವರು, ಕ್ಷೌರಿಕರು, ಕಸಾಯಿ ವೃತ್ತಿಯವರು, ಬಡಗಿ ವೃತ್ತಿಯವರು, ಜರತಾರಿ ನೇಯುವವರು, ಗಾಣದ ಎಣ್ಣೆ ಉತ್ಪಾದಕರು, ಸಫಾಯಿ ಕರ್ಮಚಾರಿಗಳು, ದೇವಸ್ಥಾನದ ನಿರ್ವಹಣೆ ಮಾಡುವವರು, ಸೇಂದಿ ಇಳಿಸುವವರು ಇತ್ಯಾದಿ... ವರ್ಗಗಳ ಜನರು ವಂಶ ಪಾರಂಪರ್ಯ ಕುಲಕಸುಬುಗಳ ವ್ಯಾಪ್ತಿಯಲ್ಲಿ ಬರುತ್ತಾರೆ. ಈ ವರ್ಗ-ಜಾತಿಗೆ ಸೇರಿದ ಜನರಲ್ಲಿ ಅನೇಕರು ಅದೇ ವೃತ್ತಿಯನ್ನು ಇಂದಿಗೂ ಮುಂದುವರೆಸಿಕೊಂಡು ಹೋಗಿರಬಹುದು. ಹಿಂದಿನ ಕಾಲದಲ್ಲಿ ಪ್ರಚಲಿತವಿದ್ದ ಸ್ವಾವಲಂಬಿ ಗ್ರಾಮಗಳ ಅಸ್ತಿತ್ವ, ವಿಶೇಷ ಕುಲ ಕಸುಬುಗಳಿಗೆ ಲಭ್ಯವಿದ್ದ ರಾಜಾಶ್ರಯ ಇತ್ಯಾದಿ ವ್ಯವಸ್ಥೆಗಳು ಹೆಚ್ಚುತ್ತಿರುವ ಇಂದಿನ ನಗರೀಕರಣ ಮತ್ತು ಆಧುನೀಕರಣ ವ್ಯವಸ್ಥೆಯಲ್ಲಿ ನಶಿಸಿ ಹೋಗುತ್ತಿವೆ. ಈ ಹಿನ್ನೆಲೆಯಲ್ಲಿ ತಲೆ ತಲಾಂತರಗಳಿಂದ ಬಂದಿರುವ ಕೆಲವು ಕುಲ ಕಸುಬುಗಳನ್ನು ಮುಂದುವರೆಸಿಕೊಂಡು ಹೋಗಿ ಕುಟುಂಬವನ್ನು ನಡೆಸಿಕೊಂಡು ಹೋಗಲು ಬೇಕಾಗಿರುವ ಆದಾಯವನ್ನು ಗಳಿಸಲು ಸಾಧ್ಯವಾಗುವುದಿಲ್ಲ. ಆದ ಕಾರಣ ಅಂತಹ ಕುಲ ಕಸುಬುದಾರರು ತಮ್ಮ ಹಿಂದಿನ ವೃತ್ತಿಯನ್ನು ಈಗ ಅನುಸರಿಸಿಕೊಂಡು ಹೋಗಲು ಸಾಧ್ಯವಾಗದ ಸಂದರ್ಭಗಳು ಇರುತ್ತವೆ. ಆದಾಗ್ಯೂ, ಅನೇಕ ತಲೆ ಮಾರುಗಳಿಂದ ನಡೆಸಿಕೊಂಡು ಬಂದಿರುವ ಕುಲ ಕಸುಬಿಗೆ ಸೇರಿದ ಕುಟುಂಬಗಳನ್ನು/ವ್ಯಕ್ತಿಗಳನ್ನು ಈ ಕಾಲಂನಲ್ಲಿ ಗುರುತಿಸಬೇಕು.

ಇಂತಹ ಸಾಂಪ್ರದಾಯಿಕವಾಗಿ ಬಂದಿರುವ 80 ಕುಲ ಕಸುಬುಗಳನ್ನು ಪಟ್ಟಿ ಮಾಡಿದ್ದು ಅನುಬಂಧ-2ರಲ್ಲಿ ಅಳವಡಿಸಲಾಗಿದೆ. ಹಾಗೂ ಅವುಗಳಿಗೆ 1 ರಿಂದ 80ರವರೆಗೆ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ. ಯಾವುದೇ ಕುಟುಂಬ ಅಥವಾ ವ್ಯಕ್ತಿಗೆ ಸಂಬಂಧಿಸಿದಂತೆ, ಪಟ್ಟಿಯಲ್ಲಿಲ್ಲದ ಕುಲಕಸುಬು ಮಾಡುತ್ತಿದ್ದಲ್ಲಿ ಅದನ್ನು "00" ಎಂಬ ಸಂಕೇತ ಸಂಖ್ಯೆ ಎಂದು ನಮೂದಿಸಬೇಕು. ಅನ್ವಯಿಸದಿದ್ದಲ್ಲಿ ಬಾಕ್ಸ್‌ನಲ್ಲಿ X ಎಂದು ನಮೂದಿಸುವುದು.

4.36ಸಾಂಪ್ರದಾಯಿಕ ಕಸುಬುಗಳ ವಿವರ :

ಸದರಿ ಕುಸುಬು ಮುಂದುವರೆದಿದೆಯೇ?ಕಾಲಂ ನಂ. 28

ಕಾಲಂ 26ಕ್ಕೆ ಸಂಬಂಧಿಸಿದಂತೆ ಕುಟುಂಬದ ಕೆಲವು ಸದಸ್ಯರು ತಮ್ಮ ಕುಲ ಕಸುಬು/ವೃತ್ತಿಯ ಕುರಿತು ತಿಳಿಸಿದ್ದು ಅದನ್ನು ನೀವು ನಮೂದಿಸಿರುವಿರಿ. ಅಂತಹ ವ್ಯಕ್ತಿಗಳು ಸದರಿ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗಿದ್ದಲ್ಲಿ ನೀಡಿರುವ ಬಾಕ್ಸ್‌ನಲ್ಲಿ '1' (ಹೌದು) ಎಂದೂ ಹಾಗೂ ಕುಲಕಸುಬನ್ನು ಬಿಟ್ಟಿದ್ದಲ್ಲಿ/ಮುಂದುವರೆಸಿಕೊಂಡು ಹೋಗದೇ ಇದ್ದಲ್ಲಿ ಬಾಕ್ಸ್‌ನಲ್ಲಿ '2' (ಇಲ್ಲ) ಎಂದು ನಮೂದಿಸುವುದು. ಅನ್ವಯಿಸದಿದ್ದಲ್ಲಿ, ಬಾಕ್ಸ್‌ನಲ್ಲಿ X ಎಂದು ನಮೂದಿಸುವುದು.

4.37ಸಾಂಪ್ರದಾಯಿಕ ಕಸುಬುಗಳ ವಿವರ :

ಸದರಿ ಕುಸುಬಿನಿಂದ ಬಂದ ಕಾಯಿಲೆಗಳು:ಕಾಲಂ ನಂ. 29

ತಲೆ ತಲಾಂತರಗಳಿಂದ/ವಂಶಪಾರಂಪರ್ಯವಾಗಿ ನಡೆಸಿಕೊಂಡು ಬಂದಿರುವ ಕುಲ ಕಸುಬುಗಳನ್ನು ಸಾಮಾನ್ಯವಾಗಿ ಪ್ರಾಚೀನ ಮಾದರಿಯಲ್ಲಿ ನಿರ್ವಹಿಸಲಾಗುತ್ತಿದೆ. ಅದರಲ್ಲಿ ಹೆಚ್ಚಿನ ಆಧುನೀಕರಣವಿರುವುದಿಲ್ಲ. ಕೆಲಸಗಾರರ ಆರೋಗ್ಯ ರಕ್ಷಣೆ ಮಾಡುವಂತಹ ಪರಿಕರಗಳನ್ನು ಅವರು ಇಟ್ಟುಕೊಂಡಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ನೇರವಾಗಿ ಕೈಗಳಿಂದ ಹಾನಿಕಾರಕ ವಸ್ತುಗಳನ್ನು ಮುಟ್ಟುತ್ತಾರೆ. ಕೆಲಸದ ಸಮಯದಲ್ಲಿ ಉತ್ಪತ್ತಿಯಾಗುವ ವಾಸನೆ, ಧೂಳು ಇತ್ಯಾದಿಗಳಿಂದ ರಕ್ಷಿಸಿಕೊಳ್ಳುವ ಪರಿಕರಗಳನ್ನು ಇಟ್ಟುಕೊಂಡಿರುವುದಿಲ್ಲ. ರಾಸಾಯನಿಕಗಳೊಂದಿಗೆ ಸಂಪರ್ಕ, ನಿರಂತರವಾಗಿ ಧೂಳನ್ನು ಸೇವಿಸುವುದು, ನಿರಂತರವಾಗಿ ಬಗ್ಗಿ ಕೆಲಸ ಮಾಡುವುದು, ಕಣ್ಣುಗಳಲ್ಲಿ ಧೂಷಿತ ಕಣಗಳು ಸೇರುವುದು, ನಿರಂತರವಾಗಿ ಕರ್ಕಷ ಧ್ವನಿಗೆ ಒಳಪಡುವುದು ಇತ್ಯಾದಿ ಸನ್ನಿವೇಶಗಳಿಂದ ಅವರು ವಿವಿಧ ರೀತಿಯ ಅಲರ್ಜಿ, ಚರ್ಮರೋಗ, ಅಸ್ತಮಾ, ಮೂರ್ಛೆರೋಗ, ಮೂಳೆರೋಗ, ಫ್ಲೋರೋಸಿಸ್, ಕ್ಷಯರೋಗ ಇತ್ಯಾದಿಗಳಿಗೆ ಈಡಾಗುವ ಸಾಧ್ಯತೆಗಳು ಇರುತ್ತವೆ.ಅಂತಹ ಸನ್ನಿವೇಶಗಳನ್ನು 08 ವಿಧಗಳಾಗಿ ವರ್ಗೀಕರಿಸಿದ್ದು 01 ರಿಂದ 08ರವರೆಗೆ ಸಂಕೇತ ಸಂಖ್ಯೆಗಳನ್ನು ನೀಡಲಾಗಿದೆ. ಇದಲ್ಲದೆ, ಇತರೆ ಸಾಮಾನ್ಯ ಆರೋಗ್ಯ ಸಂಬಂಧಿತ ಖಾಯಿಲೆಗಳನ್ನು ಕೂಡ ಪಟ್ಟಿ ಮಾಡಿದ್ದು, ಅವುಗಳಿಗೆ ಸಂಕೇತ ಸಂಖ್ಯೆ 9 ರಿಂದ 17 ರವರೆಗೆ ಅನುಬಂಧ-2ರಲ್ಲಿ ಅಳವಡಿಸಲಾಗಿದೆ. ಸಂಬಂಧಪಟ್ಟ ವ್ಯಕ್ತಿಗೆ ಅನ್ವಯಿಸುವ ಸಂಕೇತ ಸಂಖ್ಯೆಯನ್ನು ಬಾಕ್ಸ್‌ನಲ್ಲಿ ನಮೂದಿಸುವುದು. ಒಂದಕ್ಕಿಂತ ಹೆಚ್ಚು ಆರೋಗ್ಯ ಸಮಸ್ಯೆಗೆ ತುತ್ತಾಗಿದ್ದಲ್ಲಿ ನೀಡಿರುವ 2 ಬಾಕ್ಸ್‌ಗಳಲ್ಲಿ ಪ್ರಮುಖವಾದ ಮಾಹಿತಿಯನ್ನು ನಮೂದಿಸಲು ಸೂಚಿಸಿದೆ. ಯಾವುದೇ ಖಾಯಿಲೆ ಇಲ್ಲದಿದ್ದಲ್ಲಿ '18' ಎಂದು ನಮೂದಿಸುವುದು. ಅನ್ವಯವಾಗದ (ಖಾಲಿ ಉಳಿದಿರುವ) ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

4.39 ಅಸಂಘಟಿತ ಕ್ಷೇತ್ರದಲ್ಲಿಯ ದಿನಗೂಲಿ ಕೆಲಸಗಾರರು: ಕಾಲಂ 30

ನಿಮಗೆ ತಿಳಿದಿರುವಂತೆ, ಸಂಘಟಿತ ಕ್ಷೇತ್ರ-ಉದ್ದಿಮೆಗಳಲ್ಲಿ ಕೆಲಸ ಮಾಡುವವರಿಗಿಂತ ಅಸಂಘಟಿತ ಉದ್ದಿಮೆ-ಕ್ಷೇತ್ರದಲ್ಲಿ ದಿನಗೂಲಿ ಆಧಾರದ ಮೇಲೆ ತೊಡಗಿರುವವರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿರುತ್ತದೆ. ಆದ ಕಾರಣ ಕುಟುಂಬದ ವ್ಯಕ್ತಿಗಳು ವಿವಿಧ ಕ್ಷೇತ್ರಗಳಲ್ಲಿ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಅಂಶಗಳನ್ನು ಸಮೀಕ್ಷೆಯಲ್ಲಿ ಹೊರ ತರುವುದು ಬಹಳ ಮುಖ್ಯ. ಇದು ಜನರ ಇರುವಿಕೆ, ಸ್ಥಿತಿಗತಿಗಳ ಕುರಿತಂತೆ ಬೆಳಕು ಚೆಲ್ಲುತ್ತದೆ. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ, ಕೃಷಿ ಚಟುವಟಿಕೆಗಳು, ಹಾಗೂ ತೋಟಗಾರಿಕೆ, ಪ್ಲಾಂಟೇಷನ್ ಚಟುವಟಿಕೆಗಳಲ್ಲಿ ದಿನಗೂಲಿಗಳಾಗಿ ಕೆಲಸ ಮಾಡುವವರ ಸಂಖ್ಯೆ ಬಹಳವಿರುತ್ತದೆ. ಇದಲ್ಲದೆ ಕಟ್ಟಡ ನಿರ್ಮಾಣ,

ಹೋಟೆಲ್‌ಗಳು, ಬೀಡಿ ತಯಾರಿಕೆ, ಮನೆಗೆಲಸ (Domestic work) ಇತ್ಯಾದಿಗಳಲ್ಲಿ ಅಕುಶಲ ಕೆಲಸಗಳನ್ನು ಮಾಡುವವರ ಸಂಖ್ಯೆ ಕೂಡ ಸಾಕಷ್ಟಿರುತ್ತದೆ. ಇಂತಹ ದಿನಗೂಲಿ ಕೆಲಸಗಾರರನ್ನು 10 ಪ್ರಮುಖ ಗುಂಪುಗಳಲ್ಲಿ ವಿಂಗಡಿಸಿದ್ದು, ಆ ಗುಂಪುಗಳಿಗೆ 01 ರಿಂದ 10 ರವರೆಗೆ ಸಂಕೇತ ಸಂಖ್ಯೆಗಳನ್ನು ಅನುಬಂಧ-2ರಲ್ಲಿ ನಿಗದಿಪಡಿಸಲಾಗಿದೆ.

ಕುಟುಂಬದ ವ್ಯಕ್ತಿಗೆ ಅನ್ವಯಿಸುವ ಸಂಖ್ಯೆಯನ್ನು ಬರೆಯುವುದು. ಕೆಲವು ಸನ್ನಿವೇಶಗಳಲ್ಲಿ ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ದಿನಗೂಲಿ ಕೆಲಸ ಮಾಡುತ್ತಾರೆ. ಅಂತಹ ಸಂದರ್ಭಗಳನ್ನು ಬಿಂಬಿಸುವುದಕ್ಕಾಗಿ 2 ಬಾಕ್ಸ್‌ಗಳನ್ನು ನೀಡಲಾಗಿದ್ದು, ಅನ್ವಯಿಸುವ ಸಂಕೇತ ಸಂಖ್ಯೆಯನ್ನು ದಾಖಲಿಸಲು ಸೂಚಿಸಿದೆ. ಮೇಲೆ ವರ್ಗೀಕರಿಸಿದ ಗುಂಪುಗಳ ಹೊರತಾಗಿ ಇತರೆ ಕ್ಷೇತ್ರದಲ್ಲಿ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿರುವ ವ್ಯಕ್ತಿಗೆ ಸಂಬಂಧಿಸಿದಂತೆ ಸಂಕೇತ ಸಂಖ್ಯೆ "00" ಎಂದು ಬಳಸಿಕೊಳ್ಳಲು ಸೂಚಿಸಲಾಗಿದೆ. ಅನ್ವಯವಾಗದ ಖಾಲಿ ಉಳಿದಿರುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

4.40ವಾರ್ಷಿಕ ಆದಾಯ: ಕಾಲಂ ನಂ. 31

ಕುಟುಂಬದ ಪ್ರತಿ ಸದಸ್ಯರು ವಾರ್ಷಿಕವಾಗಿ ಗಳಿಸುವ ಆದಾಯವನ್ನು ಕೇಳಿ ನೀಡಲಾಗಿರುವ 8 ಸಂಕೇತಗಳ ಪೈಕಿ ಅನ್ವಯವಾಗುವ ಸಂಕೇತವನ್ನು ಗುರುತಿಸಿಕೊಂಡು ಪ್ರತಿ ಸದಸ್ಯನ ಮುಂದೆ ದಾಖಲಿಸುವುದು. ಆದಾಯಕ್ಕೆ ಸಂಬಂಧಿಸಿದಂತೆ, 8 ಸ್ಲ್ಯಾಬ್‌ಗಳನ್ನು ಮಾಡಿದ್ದು, ಅವುಗಳನ್ನು ಪ್ರತ್ಯೇಕ ಸಂಕೇತ ಸಂಖ್ಯೆಗಳ ಮೂಲಕ ತೋರಿಸಲಾಗಿದೆ. ಕುಟುಂಬದ ವ್ಯಕ್ತಿಗೆ ಅನ್ವಯಿಸುವ ಸ್ಲ್ಯಾಬ್‌ನ್ನು ಸಂಕೇತ ಸಂಖ್ಯೆ ಮೂಲಕ ನಮೂದಿಸುವುದು. ಒಂದು ವೇಳೆ ಆದಾಯವಿಲ್ಲವೆಂದಾದಲ್ಲಿ ಸಂಕೇತ ಸಂಖ್ಯೆ '00' ಎಂದು ನಮೂದಿಸುವುದು.

4.41 ಆದಾಯ ತೆರಿಗೆ ಪಾವತಿದಾರರೇ: ಕಾಲಂ ನಂ. 32

ಒಂದು ಪರಿಮಿತಿಯನ್ನು ಮೀರಿದ ಆದಾಯವನ್ನು ಹೊಂದಿದ ವ್ಯಕ್ತಿಯು ವರಮಾನ ತೆರಿಗೆ ನಿರ್ಧರಣೆಗೆ ಒಳಪಡುತ್ತಾನೆ. ಕುಟುಂಬದ ಸದಸ್ಯರು ಆದಾಯ ತೆರಿಗೆ ಪಾವತಿದಾರರಾಗಿದ್ದರೆ ಮಾಹಿತಿಯನ್ನು '1' (ಹೌದು) ಎಂದು, ಆದಾಯ ತೆರಿಗೆ ಅನ್ವಯವಾಗದ ಸದಸ್ಯರಿಗೆ '2' (ಇಲ್ಲ) ಎಂದು ಸಂಕೇತ ಸಂಖ್ಯೆಯ ಮೂಲಕ ನಮೂದಿಸುವುದು.

4.42ಬ್ಯಾಂಕ್ ಅಕೌಂಟ್ ಹೊಂದಿದ್ದೀರಾ: ಕಾಲಂ ನಂ. 33

ಕುಟುಂಬದ ಸದಸ್ಯರು ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು ಇತ್ಯಾದಿ ಬ್ಯಾಂಕುಗಳಲ್ಲಿ ಅಕೌಂಟ್ ಹೊಂದಿದ್ದರೆ ಸಂಕೇತ ಸಂಖ್ಯೆಯನ್ನು '1', ಹೊಂದಿಲ್ಲದಿದ್ದರೆ '2'ನ್ನು ನಮೂದಿಸುವುದು. ಕೆಲವು ಸದಸ್ಯರುಗಳಿಗೆ ಅಂದರೆ ಅಪ್ರಾಪ್ತ ಮಕ್ಕಳು ಮುಂತಾದವರಿಗೆ ಸರ್ವೆಸಾಧಾರಣವಾಗಿ ಬ್ಯಾಂಕ್ ಅಕೌಂಟ್ ಇರುವುದಿಲ್ಲ. ಇವರಿಗೂ ಹೆಸರಿನ ಮುಂದೆ ಸಂಕೇತ '2'ನ್ನು ನಮೂದಿಸುವುದು.

4.43ಮೀಸಲಾತಿ ನೀತಿಯಿಂದ ಪಡೆದಿರುವ ಸೌಲಭ್ಯಗಳು :

ಶೈಕ್ಷಣಿಕ ಸೌಲಭ್ಯಗಳು :ಕಾಲಂ 34

ಕುಟುಂಬದ ಪ್ರತಿ ಸದಸ್ಯರು ಶೈಕ್ಷಣಿಕ ಉದ್ದೇಶಕ್ಕಾಗಿ ಮೀಸಲಾತಿ ನೀತಿಯಿಂದ ಪಡೆದಿರುವ ಸೌಲಭ್ಯಗಳನ್ನು ನೀಡಲಾಗಿರುವ 09 ಸಂಕೇತಗಳ ಪೈಕಿ ಅನ್ವಯವಾಗುವ 3 ಸಂಕೇತಗಳನ್ನು ದಾಖಲಿಸುವುದು. ಅನ್ವಯಿಸದಿದ್ದ ಬಾಕ್ಸ್‌ನಲ್ಲಿ X ಎಂದು ನಮೂದಿಸುವುದು.

4.44 ಮೀಸಲಾತಿ ನೀತಿಯಿಂದ ಪಡೆದಿರುವ ಸೌಲಭ್ಯಗಳು :

ಉದ್ಯೋಗ ಸೌಲಭ್ಯಗಳು :ಕಾಲಂ 35

ಕುಟುಂಬದ ಪ್ರತಿ ಸದಸ್ಯರು ಉದ್ಯೋಗ ಉದ್ದೇಶಕ್ಕಾಗಿ ಮೀಸಲಾತಿ ನೀತಿಯಿಂದ ಪಡೆದಿರುವ ಸೌಲಭ್ಯಗಳನ್ನು ನೀಡಲಾಗಿರುವ 04 ಸಂಕೇತಗಳ ಪೈಕಿ ಅನ್ವಯವಾಗುವ ಸಂಕೇತವನ್ನು ದಾಖಲಿಸುವುದು. ಅನ್ವಯಿಸದಿದ್ದಲ್ಲಿ ಬಾಕ್ಸ್‌ನಲ್ಲಿ X ಎಂದು ನಮೂದಿಸುವುದು.

4.45 ನೀವು ಜಾತಿ ಪ್ರಮಾಣ ಪತ್ರ ಪಡೆದಿರುತ್ತೀರಾ?ಕಾಲಂ 36

ಕುಟುಂಬದ ಸದಸ್ಯರು ಜಾತಿ ಪ್ರಮಾಣ ಪತ್ರ ಪಡೆದಿದ್ದರೆ ಸಂಕೇತ '1' ಎಂದು, ಪಡೆದಿಲ್ಲದಿದ್ದರೆ '2' ಎಂದು ನಮೂದಿಸುವುದು.

4.46 ಅಲೆಮಾರಿ / ಅರೆ-ಅಲೆಮಾರಿ ಜನಾಂಗಕ್ಕೆ ಸೇರಿದ್ದೀರಾ? ಕಾಲಂ 37

ಕುಟುಂಬದ ಸದಸ್ಯರು ಅಲೆಮಾರಿ / ಅರೆ ಅಲೆಮಾರಿಜನಾಂಗಕ್ಕೆ ಸೇರಿದ್ದರೆ "ಹೌದು" (ಸಂಕೇತ '1'), ಇಲ್ಲದಿದ್ದಲ್ಲಿ "ಇಲ್ಲ" (ಸಂಕೇತ '2') ಎಂದು ನಮೂದಿಸುವುದು

4.47 ರಾಜಕೀಯ ಪ್ರಾತಿನಿಧ್ಯ :

ಜನಪ್ರತಿನಿಧಿಗಳಾಗಿದ್ದಲ್ಲಿ ವಿವರಗಳು: ಕಾಲಂ 38

ಕುಟುಂಬದ ಸದಸ್ಯರು ಜನಪ್ರತಿನಿಧಿಗಳೇ ಎಂಬ ಬಗ್ಗೆ ಹಾಗೂ ಜನಪ್ರತಿನಿಧಿಗಳಾಗಿದ್ದಲ್ಲಿ, ಸಂಬಂಧಪಟ್ಟ ಕ್ಷೇತ್ರದಲ್ಲಿ ಪದಾಧಿಕಾರಿಯಾಗಿದ್ದಾರೆಯೇ ಎಂಬ ಮಾಹಿತಿಯನ್ನು ಸಮೀಕ್ಷೆಯಲ್ಲಿ ಸಂಗ್ರಹಿಸಲು ಉದ್ದೇಶಿಸಿದೆ. ಕುಟುಂಬದ ಸದಸ್ಯರು ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ತು ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ/ನಾಮನಿರ್ದೇಶಿತ ಪ್ರತಿನಿಧಿಗಳಾಗಿದ್ದಲ್ಲಿ ಅಂತಹ ಮಾಹಿತಿಗಳನ್ನು ಸಮೀಕ್ಷೆಯಲ್ಲಿ ಸಂಗ್ರಹಿಸಬೇಕು. ಜನಪ್ರತಿನಿಧಿಗಳು ಸದರಿ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿದ್ದಲ್ಲಿ ಅಥವಾ ಹುದ್ದೆಯನ್ನು ಅಲಂಕರಿಸಿದ್ದಲ್ಲಿ ಆ ಮಾಹಿತಿಗಳನ್ನು ಕೂಡ ಸಂಗ್ರಹಿಸಬೇಕು. ಸಮೀಕ್ಷೆ ನಡೆಯುವ ಸಮಯದಲ್ಲಿ ಹೊಂದಿರುವ / ಹಿಂದೆ ಹೊಂದಿದ್ದ ಸ್ಥಾನಕ್ಕೆ (ಹಾಲಿ ಮತ್ತು ಮಾಜಿ) ಸಂಬಂಧಿಸಿದ ಮಾಹಿತಿಗಳನ್ನು ನಮೂದಿಸಬೇಕು. ಪದಾಧಿಕಾರದ ಉದಾಹರಣೆ :

1. ಲೋಕಸಭೆ/ರಾಜ್ಯಸಭೆ/ವಿಧಾನಸಭೆ/ವಿಧಾನಪರಿಷತ್ತಿನಲ್ಲಿ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನ
2. ಕೇಂದ್ರ ಸರ್ಕಾರ/ರಾಜ್ಯ ಸರ್ಕಾರದಲ್ಲಿ ಸಚಿವ ಸ್ಥಾನ
3. ಮಹಾನಗರ ಪಾಲಿಕೆಗಳ ಮೇಯರ್, ನಗರ ಸಭೆ/ಪುರಸಭೆಗಳ ಅಧ್ಯಕ್ಷ/ಉಪಾಧ್ಯಕ್ಷ
4. ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯತ್ ಅಧ್ಯಕ್ಷ/ಉಪಾಧ್ಯಕ್ಷ ಇತ್ಯಾದಿ.

ಜನಪ್ರತಿ ನಿಧಿಗಳಿಗೆ ಸಂಬಂಧಿಸಿದಂತೆ ಅವರು ಹಾಲಿ ಸದಸ್ಯರೆ? ಮಾಜಿ ಸದಸ್ಯರೆ ಎನ್ನುವುದನ್ನು ಸೂಚಿಸಬೇಕಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಕುಟುಂಬದ ವ್ಯಕ್ತಿಯು ಹಾಲಿ ಯಾವುದೇ ಸದಸ್ಯತ್ವ ಅಥವಾ ಪದಾಧಿಕಾರಿ ಹುದ್ದೆಯನ್ನು ಹೊಂದದೆ ಇರಬಹುದು. ಅದಾಗ್ಯೂ ಈ ಹಿಂದೆ (ಮಾಜಿ)ಅವರು ಸದಸ್ಯತ್ವ ಅಥವಾ ಪದಾಧಿಕಾರಿ ಹುದ್ದೆಯನ್ನು ಅಲಂಕರಿಸಿರಬಹುದು. ಈ ಮಾಹಿತಿಯನ್ನು ಕೂಡ ಸಮೀಕ್ಷೆಯಲ್ಲಿ ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದೆ.

ಈ ಕಾಲಂಗೆ ಸಂಬಂಧಿಸಿದಂತೆ ಸದಸ್ಯತ್ವಕ್ಕೆ 01 ರಿಂದ 22ರವರೆಗಿನ ಸಂಕೇತ ಸಂಖ್ಯೆಗಳನ್ನು ಹಾಗೂ ಪದಾಧಿಕಾರಿಗಳ ಹುದ್ದೆಗಳನ್ನು ಹೊಂದಿದವರಿಗೆ 23 ರಿಂದ 44ರವರೆಗಿನ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ. ಕುಟುಂಬದ ಸದಸ್ಯರಿಗೆ ಅನ್ವಯಿಸುವ ಸಂಕೇತ ಸಂಖ್ಯೆಯನ್ನು ದಾಖಲು ಮಾಡುವುದು. ಒಂದಕ್ಕಿಂತ ಹೆಚ್ಚಿನ ಅಂಶಗಳು ಅನ್ವಯವಾಗುವ ಪ್ರಸಂಗಗಳಲ್ಲಿ ಅವುಗಳನ್ನು ದಾಖಲಿಸಲು ಅನುಕೂಲವಾಗುವಂತೆ 5 ಬಾಕ್ಸ್‌ಗಳನ್ನು ನೀಡಲಾಗಿದೆ. ಪ್ರಮುಖವಾದವುಗಳನ್ನು ಮಾತ್ರ ಭರ್ತಿ ಮಾಡಲು ಸೂಚಿಸಲಾಗಿದೆ. ಸಂಕೇತ ಸಂಖ್ಯೆಗಳನ್ನು ಅನುಬಂಧ-2ರಲ್ಲಿ ಅಳವಡಿಸಲಾಗಿದೆ. ಮಾಹಿತಿಯನ್ನು ಈ 5 ಬಾಕ್ಸ್‌ಗಳಿಗೆ ಸೀಮಿತಗೊಳಿಸಬೇಕು. ಇತರೆ ರಾಜಕೀಯ ಪ್ರಾತಿನಿಧ್ಯ ಹೊಂದಿದ್ದಲ್ಲಿ ನೀಡಿರುವ ಸಂಕೇತ ನಮೂದಿಸುವುದು.

ಒಂದು ವೇಳೆ ಕುಟುಂಬದ ಸದಸ್ಯನು ಯಾವುದೇ ಸದಸ್ಯತ್ವ ಅಥವಾ ಪದಾಧಿಕಾರವನ್ನು ಹೊಂದಿರದಿದ್ದಲ್ಲಿ ಖಾಲಿ ಇರುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

4.48 ರಾಜಕೀಯ ಪ್ರಾತಿನಿಧ್ಯ :

ನಿಗಮ-ಮಂಡಳಿ / ಸಹಕಾರಿ ಸಂಘ / ಸರ್ಕಾರೇತರ ಸಂಸ್ಥೆಗಳಲ್ಲಿ ಸದಸ್ಯ ಅಥವಾ ಪದಾಧಿಕಾರಿಗಳಾಗಿದ್ದಲ್ಲಿ ವಿವರಗಳು: ಕಾಲಂ 39

ನಿಗಮ-ಮಂಡಳಿ / ಸಹಕಾರಿ ಸಂಘ / ಸರ್ಕಾರೇತರ ಸಂಸ್ಥೆಗಳಲ್ಲಿಯೂ ಸಹ ಸದರಿ ಸಂಸ್ಥೆಗಳ ಸದಸ್ಯರಾಗಿ ಹಾಗೂ ಪದಾಧಿಕಾರಿಗಳಾಗಿ ಕೆಲಸ ಮಾಡಲು ಅವಕಾಶ ಇರುತ್ತದೆ. ಉದಾಹರಣೆಗೆ : ಒಬ್ಬ ವ್ಯಕ್ತಿಯು ಸಹಕಾರ ಬ್ಯಾಂಕಿನಲ್ಲಿ ಸದಸ್ಯನಾಗಿರಬಹುದು ಹಾಗೂ ಆ ಬ್ಯಾಂಕಿನಲ್ಲಿ ನಿರ್ದೇಶಕ ಅಥವಾ ಅಧ್ಯಕ್ಷ ಸ್ಥಾನ ಹೊಂದಿರುವ ಪದಾಧಿಕಾರಿಯಾಗಿರಬಹುದು. ಕಾರ್ಮಿಕ ಸಂಘಟನೆಯಲ್ಲಿ ಸದಸ್ಯನಾಗಿರಬಹುದು ಇಲ್ಲವೆ ಸಂಘಟನೆಯ ಕಾರ್ಯದರ್ಶಿ ಅಥವಾ ಅಧ್ಯಕ್ಷನಾಗಿರಬಹುದು. ಸದಸ್ಯತ್ವಕ್ಕೆ ಸಂಬಂಧಿಸಿದಂತೆ 01 ರಿಂದ 24 ಹಾಗೂ ಪದಾಧಿಕಾರಿ ಸ್ಥಾನಕ್ಕೆ 25 ರಿಂದ 48ರವರೆಗೆ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿರುತ್ತದೆ (ಅನುಬಂಧ-2). ಕುಟುಂಬದ ಸದಸ್ಯನಿಗೆ ಅನ್ವಯವಾಗುವ ಸಂಕೇತ ಸಂಖ್ಯೆಯನ್ನು ದಾಖಲು ಮಾಡುವುದು. ಕೆಲವು ಸಂದರ್ಭಗಳಲ್ಲಿ ಕುಟುಂಬದ ಒಬ್ಬ ಸದಸ್ಯನು ಹಲವು ಸಂಸ್ಥೆಗಳಲ್ಲಿ ಸದಸ್ಯನಾಗಿ ಇಲ್ಲವೆ ಪದಾಧಿಕಾರಿಯಾಗಿ ಇರುವ ಸನ್ನಿವೇಶಗಳಿರುತ್ತವೆ. ಇಲ್ಲಿ ಕೂಡ ಕುಟುಂಬದ ಸದಸ್ಯನಿಗೆ ಸಂಬಂಧಿಸಿದ ಹಾಲಿ ಮತ್ತು ಮಾಜಿ ಸ್ಥಾನಮಾನಗಳನ್ನು ಗುರುತಿಸಲು ಕಾಲಂನಲ್ಲಿ 5 ಬಾಕ್ಸ್‌ಗಳನ್ನು ನೀಡಲಾಗಿದೆ. ಇತರೆ ರಾಜಕೀಯ ಪ್ರಾತಿನಿಧ್ಯ ಹೊಂದಿದ್ದಲ್ಲಿ ನೀಡಿರುವ ಸಂಕೇತ ನಮೂದಿಸುವುದು.

ಒಂದು ವೇಳೆ ಕುಟುಂಬದ ಸದಸ್ಯನು ಯಾವುದೇ ಸದಸ್ಯತ್ವ ಅಥವಾ ಪದಾಧಿಕಾರವನ್ನು ಹೊಂದಿರದಿದ್ದಲ್ಲಿ ಖಾಲಿ ಇರುವ ಬಾಕ್ಸ್‌ಗಳಲ್ಲಿ X ಎಂದು ನಮೂದಿಸುವುದು.

ಭಾಗ –II ಕುಟುಂಬದ ವಿವರಗಳು

4.49 ಕುಟುಂಬವು ಹೊಂದಿರುವ ಒಟ್ಟು ಜಮೀನು ಕಾಲಂ [ಸಾಲು]40:

ಈ ಮಾಹಿತಿಯು ಇಡೀ ಕುಟುಂಬಕ್ಕೆ ಸಂಬಂಧಿಸಿದ್ದು ಕುಟುಂಬದ ಎಲ್ಲಾ ಸದಸ್ಯರು ಸೇರಿ ಹೊಂದಿರುವ ಖುಷ್ಕಿ, ತರಿ, ಭಾಗಾಯ್ತು, ಪ್ಲಾಂಟೇಷನ್ ಜಮೀನುಗಳ ವಿಸ್ತೀರ್ಣವನ್ನು ದಾಖಲಿಸಬೇಕು. ಆದಕಾರಣ ಒಟ್ಟು ಕ್ಷೇತ್ರವನ್ನು ಕುಟುಂಬದ ಮುಖ್ಯಸ್ಥರ ಹೆಸರಿನ ಮುಂದೆ ನಮೂದಿಸುವುದು. ಸಾಮಾನ್ಯವಾಗಿ ಕುಟುಂಬವು ಹೊಂದಿರುವ ವಿಸ್ತೀರ್ಣವನ್ನು ಎಕರೆ-ಗುಂಟೆಗಳಲ್ಲಿ ಬರೆಯಬೇಕು. ಆದಾಗ್ಯೂ ಬಳ್ಳಾರಿ, ದಕ್ಷಿಣ ಕನ್ನಡ, ಉಡುಪಿ ಇಂತಹ ಜಿಲ್ಲೆಗಳಲ್ಲಿ ಗುಂಟೆಯ ಬದಲಾಗಿ ಸೆಂಟ್ಸ್ ಮಾಪನವನ್ನು ಬಳಸುವ ಪದ್ಧತಿ ಇದೆ. ಆ ಜಿಲ್ಲೆಗಳಲ್ಲಿ ವಿಸ್ತೀರ್ಣವನ್ನು ಎಕರೆ-ಸೆಂಟ್ಸ್‌ಗಳಲ್ಲಿ ಬರೆಯಲು ಸೂಚಿಸಲಾಗಿದೆ. ಕೃಷಿ ಚಟುವಟಿಕೆಗಳಿಗೆ ಒಳಪಟ್ಟಂತಹ ಜಮೀನನ್ನು ಪ್ರಮುಖವಾಗಿ ಈ ಕೆಳಕಂಡಂತೆ ವರ್ಗೀಕರಿಸಲಾಗಿರುತ್ತದೆ.

ಜಮೀನಿನ ವಿಧ ಮತ್ತು ವಿಸ್ತೀರ್ಣ :ಕಾಲಂ [ಸಾಲು]40 (I)

ಖುಷ್ಕಿ: ಮಳೆಯನ್ನು ಪ್ರಮುಖವಾಗಿ ಆಶ್ರಯಿಸಿ ಬೆಳೆಗಳನ್ನು ಬೆಳೆಯುವುದು. ಮಳೆ ಆಶ್ರಯದಲ್ಲಿ ಬೆಳೆದಿರುವ ಬೆಳೆಗಳಿಗೆ ಸಂಬಂಧಪಟ್ಟ ವಿಸ್ತೀರ್ಣವನ್ನು ಖುಷ್ಕಿ ಜಮೀನು ಎಂದು ಭಾವಿಸುವುದು.

ತರಿ : ಸರ್ಕಾರದಿಂದ ಯಾವುದೇ ಯೋಜನೆಯ (ಮುಖ್ಯವಾಗಿ ನಾಲೆ, ಕೆರೆ, ಏತ ನೀರಾವರಿ, ಇತ್ಯಾದಿಗಳ) ಮುಖಾಂತರ ನೀರಾವರಿ ಸೌಲಭ್ಯವನ್ನು ಕಲ್ಪಿಸಿ ನೀಡಿರುವ ಜಮೀನನ್ನು ತರಿ ಜಮೀನು ಎಂದು ಪರಿಗಣಿಸುವುದು. ಸಾಮಾನ್ಯವಾಗಿ ತರಿ ಜಮೀನಿನಲ್ಲಿ ಭತ್ತ, ಕಬ್ಬು, ಪ್ರಮುಖ ಆಹಾರ ಬೆಳೆಗಳನ್ನು ಬೆಳೆಯುತ್ತಾರೆ.

ಬಾಗಾಯ್ತು : ರೈತರು ಅವರ ಸ್ವಂತ ಹಣದಿಂದ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಂಡು ವಾಣಿಜ್ಯ ಬೆಳೆಗಳು, ಸಾಂಬಾರು ಬೆಳೆಗಳು, ತರಕಾರಿ, ಹಣ್ಣುಗಳು, ಅಡಿಕೆ, ತೆಂಗು, ಬಾಳೆ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಇಂತಹ ಜಮೀನನ್ನು **"ಬಾಗಾಯ್ತು"** ಎಂದು ಪರಿಗಣಿಸುವುದು.

ಪ್ಲಾಂಟೇಷನ್: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಕಾಫಿ, ಟೀ, ಕೋಕೋ ಹಾಗೂ ರಬ್ಬರ್ ಮುಂತಾದ ಪ್ಲಾಂಟೇಷನ್‌ಗಳು ಹಾಗೂ ಇನ್ನೂ ಕೆಲವು ಕಡೆಗಳಲ್ಲಿ ಮಾವು, ದಾಳಿಂಬೆ ಇತ್ಯಾದಿ ಹಣ್ಣಿನ ತೋಟಗಳನ್ನು (Orchards) ಬೆಳೆಸಿರುತ್ತಾರೆ. ಇವುಗಳು **"ಪ್ಲಾಂಟೇಷನ್"** ವರ್ಗೀಕರಣದಲ್ಲಿ ಬರುತ್ತದೆ.

ಇತರೆ ಜಮೀನು: ರೈತರು ಸಾಗುವಳಿಗೆ ಯೋಗ್ಯವಲ್ಲದ ಜಮೀನುಗಳಲ್ಲಿ ತೋಪುಗಳು, ಉರುವಲುಗಾಗಿ ಬೆಳೆಗಳನ್ನು, ಬಳ್ಳಾರಿ ಜಾಲಿ, ಮೇವಿನ ಬೆಳೆಗಳು ಇತ್ಯಾದಿ ಬೆಳೆಗಳನ್ನು ಬೆಳೆಯುವ ಪ್ರದೇಶದಲ್ಲಿ **"ಇತರೇ ಜಮೀನು"** ಎಂದು ಪರಿಗಣಿಸತಕ್ಕದ್ದು.

ರೈತರನ್ನು ಪ್ರಶ್ನೆ ಮಾಡಿದ ಕೂಡಲೇ ಸಾಮಾನ್ಯವಾಗಿ ತಾನು ಹೊಂದಿದ ಜಮೀನನ್ನು ಖುಷ್ಕಿ / ತರಿ / ಬಾಗಾಯ್ತು ಇತರೇ ಎಂದು ಅವರೇ ತಿಳಿಸುತ್ತಾರೆ. ಇದರ ಬಗ್ಗೆ ಗಣತಿದಾರರಿಗಿಂತ ಹೆಚ್ಚಿನ ಮಾಹಿತಿ ರೈತರಿಗೆ ಗೊತ್ತಿರುವುದರಿಂದ ಅವರು ತಿಳಿಸುವ ಜಮೀನಿನ ವಿಸ್ತೀರ್ಣವನ್ನು ಎಕರೆ, ಗುಂಟೆ ಮತ್ತು ಸೆಂಟ್ಸ್‌ಗಳಲ್ಲಿ ನಮೂದಿಸತಕ್ಕದ್ದು. ಜಮೀನು ಇಲ್ಲದಿದ್ದಲ್ಲಿ, X ಎಂದು ಗುರುತಿಸುವುದು.

(1 ಎಕರೆ = 40 ಗುಂಟೆ; 1 ಎಕರೆ = 100 ಸೆಂಟ್ಸ್‌ಗಳು)

ಸ್ವಾಧೀನತೆಯ ರೀತಿ: ಕಾಲಂ (ಸಾಲು) 40(II)

ರೈತರು ತಮ್ಮ ಜಮೀನನ್ನು ವಿವಿಧ ಮೂಲಗಳಿಂದ ಹೊಂದುವ ಸಾಧ್ಯತೆ ಇರುತ್ತದೆ. ಅಂದರೆ ಪಿತ್ರಾರ್ಜಿತವಾಗಿ, ಖರೀದಿಯಿಂದ, ದಾನ / ವಿಲ್‌ನಿಂದ ಅಥವಾ ಭೂ ಮಂಜೂರಾತಿ/ ಇನಾಮ್ ಮಂಜೂರಾತಿ ಇತ್ಯಾದಿ ವಿಧಾನಗಳಿಂದ ಹೊಂದಿರುತ್ತಾರೆ. ಈ ಸಲುವಾಗಿ 4 ಸಂಕೇತಗಳನ್ನು ನೀಡಿದ್ದು, ಅನ್ವಯವಾಗುವ ಸಂಕೇತ ಸಂಖ್ಯೆಗಳನ್ನು ನಮೂದಿಸುವುದು ಮತ್ತು ಪ್ರತಿ ವಿಧದ ಜಮೀನಿನ ಎದುರಿಗೆ 3 ಬಾಕ್ಸ್‌ಗಳನ್ನು ನೀಡಿದ್ದು, ರೈತರು ತಮ್ಮ ಜಮೀನಿನ ಮಾಲೀಕತ್ವ / ಸ್ವಾಧೀನವನ್ನು ಒಂದಕ್ಕಿಂತ ಹೆಚ್ಚಿನ ಮೂಲದಿಂದ ಪಡೆದಿದ್ದರೆ ಗರಿಷ್ಠ 3 ಸಂಕೇತ ಸಂಖ್ಯೆಗಳ ಮೂಲಕ ದಾಖಲಿಸುವುದು. ಒಂದು ವೇಳೆ ಜಮೀನನ್ನು ಉಲ್ಲೇಖಿಸಿದ ವಿಧಗಳಲ್ಲದೆ ಇನ್ನ್ಯಾವುದೇ ಮೂಲಗಳಿಂದ ಪಡೆದಿದ್ದರೆ "ಇತರೆ" ಸಂಕೇತ ಸಂಖ್ಯೆಯನ್ನು "00" ಎಂದು ನಮೂದಿಸುವುದು. ಅನ್ವಯಿಸದಿದ್ದಲ್ಲಿ, X ಎಂದು ಗುರುತಿಸುವುದು.

ವಿಸ್ತೀರ್ಣ: ಕಾಲಂ (ಸಾಲು) 40(III, IV, V)

ಕುಟುಂಬವು ಹೊಂದಿರುವ ವಿವಿಧ ವಿಧಗಳ ಜಮೀನಿನ **"ವಿಸ್ತೀರ್ಣ"**ವನ್ನು ಎಕರೆ, ಗುಂಟೆ (ಅಥವಾ ಸೆಂಟ್ಸ್) ಗಳಲ್ಲಿ ದಾಖಲಿಸುವುದು. ಅನ್ವಯಿಸದಿದ್ದಲ್ಲಿ, X ಎಂದು ಗುರುತಿಸುವುದು.

4.50ನೀರಾವರಿಯ ಮೂಲ : ಕಾಲಂ [ಸಾಲು]**40(VI)**:

ನೀರಾವರಿಯ ಮೂಲದ ಕುರಿತು ಮಾಹಿತಿಗಳನ್ನು ಸಂಗ್ರಹಿಸಬೇಕಾಗಿರುತ್ತದೆ. ಕೆರೆ, ಕಾಲುವೆ, ಬಾವಿ, ಮಳೆಯಾಶ್ರಿತ ಇತ್ಯಾದಿ 7 ನೀರಾವರಿ ಮೂಲಗಳನ್ನು ಗುರುತಿಸಿದ್ದು, ಅವುಗಳಿಗೆ 01 ರಿಂದ 07ರವರೆಗೆ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ(ಅನುಬಂಧ-2). ಒಂದು ಕುಟುಂಬಕ್ಕೆ ಸಂಬಂಧಿಸಿದಂತೆ ನೀರಾವರಿ ಮೂಲಗಳು ಒಂದಕ್ಕಿಂತ ಹೆಚ್ಚಿರುವ ಸಂದರ್ಭಗಳಲ್ಲಿ ಅವುಗಳನ್ನು ದಾಖಲಿಸಲು ಅನುಕೂಲವಾಗುವಂತೆ ಕಾಲಂನಲ್ಲಿ 3 ಬಾಕ್ಸ್‌ಗಳನ್ನು ನೀಡಲಾಗಿದೆ. ಸದರಿ ನೀರಾವರಿ ಮೂಲಗಳನ್ನು ಖುಷ್ಕಿ, ತರಿ, ಭಾಗಾಯ್ತು ಮತ್ತು ಪಾಂಟೇಷನ್ ಜಮೀನುಗಳಿಗೆ ಪ್ರತ್ಯೇಕವಾಗಿ ಬರೆಯಬೇಕು.ಅನ್ವಯಿಸದಿದ್ದಲ್ಲಿ, Xಎಂದು ಗುರುತಿಸುವುದು.

4.51**ಪ್ರಮುಖ ಬೆಳೆಗಳು : ಕಾಲಂ**(ಸಾಲು)**40(VII)**:

ಪ್ರಮುಖ ಬೆಳೆಗಳ ಉತ್ಪನ್ನಗಳನ್ನು 8 ಭಾಗಗಳಾಗಿ ವರ್ಗೀಕರಣ ಮಾಡಲಾಗಿರುತ್ತದೆ. ಬೆಳೆಯನ್ನು ವಿಚಾರಿಸಿ ನಮೂದಿಸತಕ್ಕದ್ದು. **ಏಕದಳ ಧಾನ್ಯ**ಗಳಲ್ಲಿ ಭತ್ತ, ಗೋಧಿ, ಜೋಳ, ರಾಗಿ, ನವಣೆ, ಸಜ್ಜೆ, ಸಾಮೆ ಇತ್ಯಾದಿಗಳು ಸೇರಿರುತ್ತವೆ. **ದ್ವಿದಳ ಧಾನ್ಯ**ಗಳಲ್ಲಿ ಪ್ರಮುಖವಾದವು ತೊಗರಿ, ಕಡಲೆ, ಉದ್ದು, ಹೆಸರು, ಹುರುಳಿ ಇತ್ಯಾದಿಗಳು ಸೇರಿರುತ್ತವೆ. ಎಣ್ಣೆ ಕಾಳುಗಳಲ್ಲಿ ಶೇಂಗಾ, ಸೂರ್ಯಕಾಂತಿ, ಅಗಸೆ, ಹರಳು, ಎಳ್ಳು ಸೋಯಾಬಿನ್ ಪ್ರಧಾನವಾದವುಗಳು ವಾಣಿಜ್ಯ ಬೆಳೆಗಳಲ್ಲಿ : ಹತ್ತಿ,ಕಬ್ಬು, ಬಾಳೆ ತೋಟ, ಅಡಿಕೆ, ತರಕಾರಿ, ಇತ್ಯಾದಿ.

ಅವುಗಳಿಗೆ 01 ರಿಂದ 08ರವರೆಗೆ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ (ಅನುಬಂಧ-2). ಒಂದು ಕುಟುಂಬಕ್ಕೆ ಸಂಬಂಧಿಸಿದಂತೆ ಪ್ರಮುಖ ಬೆಳೆಗಳು ಒಂದಕ್ಕಿಂತ ಹೆಚ್ಚಿರುವ ಸಂದರ್ಭಗಳಲ್ಲಿ ಅವುಗಳನ್ನು ದಾಖಲಿಸಲು ಅನುಕೂಲವಾಗುವಂತೆ ಕಾಲಂನಲ್ಲಿ 4 ಬಾಕ್ಸ್‌ಗಳನ್ನು ನೀಡಲಾಗಿದೆ. ಸದರಿ ಪ್ರಮುಖ ಬೆಳೆಗಳನ್ನು ಖುಷ್ಕಿ, ತರಿ, ಭಾಗಾಯ್ತು ಮತ್ತು ಪ್ಲಾಂಟೇಷನ್ ಜಮೀನುಗಳಿಗೆ ಪ್ರತ್ಯೇಕವಾಗಿ ಬರೆಯಬೇಕು. ಅನ್ವಯಿಸದಿದ್ದಲ್ಲಿ, X ಎಂದು ನಮೂದಿಸುವುದು.

4.52ಕುಟುಂಬದ ಸಾಲ: ಕಾಲಂ 41

ಕುಟುಂಬದ ಸಾಲದ ಉದ್ದೇಶ: ಕಾಲಂ(ಸಾಲು)41 ಎ:

ಮದುವೆ, ಧಾರ್ಮಿಕ ಆಚರಣೆ, ವಿದ್ಯಾಭ್ಯಾಸ, ಕೃಷಿ ಉಪಕರಣ & ಸಾಮಗ್ರಿಗಳ ಖರೀದಿ, ಸ್ವಯಂ ಉದ್ಯೋಗ ಕೈಗೊಳ್ಳಲು, ಇನ್ನಿತರೆ ಕಾರಣಗಳಿಂದ ಕುಟುಂಬವು ಸಾಲ ಪಡೆಯುವ ಸಂದರ್ಭಗಳು ಬರುತ್ತವೆ. ಈ ನಿಟ್ಟಿನಲ್ಲಿ ಸಾಮಾನ್ಯವಾಗಿ ಸಾಲ ಪಡೆಯುವ ಉದ್ದೇಶವನ್ನು ಪಟ್ಟಿ ಮಾಡಿ 01 ರಿಂದ 14ರವರೆಗೆ ಸಂಕೇತ ಸಂಖ್ಯೆಗಳನ್ನು ನೀಡಲಾಗಿದೆ (ಅನುಬಂಧ-2). ಇವುಗಳನ್ನು ದಾಖಲಿಸುವುದಕ್ಕಾಗಿ 3 ಬಾಕ್ಸ್‌ಗಳನ್ನು ನೀಡಲಾಗಿದೆ. ಅನ್ವಯಿಸದಿದ್ದಲ್ಲಿ, X ಎಂದು ನಮೂದಿಸುವುದು.

ಕುಟುಂಬದ ಸಾಲದ ಮೂಲ: ಕಾಲಂ(ಸಾಲು)41ಬಿ:

ಕುಟುಂಬದ ಸದಸ್ಯರು ವಿವಿಧ ಉದ್ದೇಶಗಳಿಗಾಗಿ ಪಡೆಯುವ ಸಾಲದ ಮೂಲಗಳನ್ನು 5 ಗುಂಪುಗಳಲ್ಲಿ ವರ್ಗೀಕರಿಸಲಾಗಿದ್ದು, ಅವುಗಳಿಗೆ 01 ರಿಂದ 05ರವರೆಗೆ ಸಂಕೇತ ಸಂಖ್ಯೆಗಳನ್ನು ನೀಡಿ ಅನುಬಂಧ-2ರಲ್ಲಿ ಅಳವಡಿಸಲಾಗಿದೆ. ಅನ್ವಯಿಸುವ ಸಂಕೇತ ಸಂಖ್ಯೆಯನ್ನು ನಮೂದಿಸಿ ಬಾಕ್ಸ್‌ಗಳನ್ನು ಭರ್ತಿ ಮಾಡಲು ಸೂಚಿಸಿದೆ. ಅನ್ವಯಿಸದಿದ್ದಲ್ಲಿ, X ಎಂದು ನಮೂದಿಸುವುದು.

4.53ಕೃಷಿ-ಸಂಬಂಧಿತ ಚಟುವಟಿಕೆಗಳು: ಕಾಲಂ(ಸಾಲು) ನಂ.42

ರಾಜ್ಯದ ಅನೇಕ ಕುಟುಂಬಗಳು ಕೃಷಿ ಕುಟುಂಬಗಳಾಗಿದ್ದರೂ ಅವರು ಹೈನುಗಾರಿಕೆ, ಪೌಲ್ಟ್ರಿ, ರೇಷ್ಮೆ ಸಾಕಾಣಿಕೆ, ಕುರಿ ಸಾಕಾಣಿಕೆ ಇತ್ಯಾದಿ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಅನೇಕ ಕಡೆಗಳಲ್ಲಿ ಈ ಚಟುವಟಿಕೆಗಳು ಸದರಿ ಕುಟುಂಬಗಳ ಆದಾಯದ ಪ್ರಮುಖ ಮೂಲಗಳಾಗಿರುತ್ತವೆ. ಇಂತಹ 8 ಚಟುವಟಿಕೆಗಳನ್ನು ವರ್ಗೀಕರಿಸಿದ್ದು, 01 ರಿಂದ 08ರವರೆಗೆ ಸಂಕೇತ ಸಂಖ್ಯೆಗಳನ್ನು ನೀಡಿ ಅನುಬಂಧ-2ರಲ್ಲಿ ಅಳವಡಿಸಲಾಗಿದೆ.

ಅನ್ವಯಿಸುವ ಸಂಕೇತ ಸಂಖ್ಯೆಯನ್ನು ನಮೂದಿಸಿ ಬಾಕ್ಸ್‌ಗಳನ್ನು ಭರ್ತಿ ಮಾಡಲು ಸೂಚಿಸಿದೆ. ಈ ಉದ್ದೇಶಕ್ಕಾಗಿ 4 ಬಾಕ್ಸ್‌ಗಳನ್ನು ನೀಡಲಾಗಿದೆ. ಅನ್ವಯಿಸದಿದ್ದಲ್ಲಿ, X ಎಂದು ನಮೂದಿಸುವುದು.

4.54 ಕುಟುಂಬ ಹೊಂದಿರುವ ಜಾನುವಾರುಗಳು: ಕಾಲಂ(ಸಾಲು) 43

ಕುಟುಂಬವು ಹೊಂದಿರುವ ಜಾನುವಾರುಗಳ ವಾಸ್ತವಿಕ ಸಂಖ್ಯೆಯನ್ನು ಕೇಳಿ ಸಂಬಂಧಪಟ್ಟ ಬಾಕ್ಸ್‌ನಲ್ಲಿ ನಮೂದಿಸಬೇಕು. ಒಂದು ವೇಳೆ ಹೈನುಗಾರಿಕೆ, ಕುರಿ ಸಾಕಾಣಿಕೆ, ಕೋಳಿ ಫಾರಂ ಇತ್ಯಾದಿಗಳನ್ನು ಇಟ್ಟುಕೊಂಡಿದ್ದಲ್ಲಿ ಜಾನುವಾರುಗಳ ಸಂಖ್ಯೆಯನ್ನು ನಮೂದಿಸುವುದು. ಈ ಮಾಹಿತಿಯು ಒಂದು ಕುಟುಂಬದ ಎಲ್ಲ ಸದಸ್ಯರಿಗೆ ಸೇರಿದ ಒಟ್ಟಾರೆ ಮಾಹಿತಿಯಾಗಿರಬೇಕು. (ಉದಾ: ಒಂದು ಕುಟುಂಬದಲ್ಲಿರುವ ಹಸು-ಎತ್ತು, ಎಮ್ಮೆ-ಕೋಣಗಳ ಒಟ್ಟು ಸಂಖ್ಯೆ 10 ಇದ್ದಲ್ಲಿ, ಸದರಿ ವರ್ಗೀಕರಣದ ಕೆಳಗೆ ಇರುವ ಬಾಕ್ಸ್‌ನಲ್ಲಿ 10 ಎಂದು ನಮೂದಿಸುವುದು). ಅನ್ವಯಿಸದಿದ್ದಲ್ಲಿ, X ಎಂದು ನಮೂದಿಸುವುದು.

4.55 ಸ್ಥಿರಾಸ್ತಿ : ಕಾಲಂ (ಸಾಲು) ನಂ. 44

ಕುಟುಂಬಗಳು ತಮ್ಮ ದೈನಂದಿನ ನಿರ್ವಹಣೆ ಮತ್ತು ಅನುಕೂಲಕ್ಕಾಗಿ ಹಲವು ಸ್ಥಿರಾಸ್ತಿಗಳನ್ನು ಹೊಂದಿರುತ್ತವೆ. ಇಂತಹ 05 ತರಹದ ಸ್ಥಿರಾಸ್ತಿಗಳನ್ನು ಪಟ್ಟಿ ಮಾಡಲಾಗಿದ್ದು, ಅನುಬಂಧ-2ರಲ್ಲಿ ನೀಡಲಾಗಿದೆ. ಈ ಮಾಹಿತಿ ಅತ್ಯಂತ ಉಪಯುಕ್ತ ಮಾಹಿತಿಯಾಗುವುದರಿಂದ ಸದರಿ ಮಾಹಿತಿಯನ್ನು ಮಾಹಿತಿದಾರರಿಂದ ಜಾಗರೂಕತೆಯಿಂದ ವಿಚಾರಿಸಿ ತಿಳಿದು ಸ್ಥಿರಾಸ್ತಿಗೆ ನೀಡಲ್ಪಟ್ಟ ಸೂಕ್ತ ಸಂಕೇತಗಳನ್ನು ನೀಡಲಾಗಿರುವ ಬಾಕ್ಸ್‌ಗಳಲ್ಲಿ ನಮೂದಿಸಿ. ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ದಾಖಲಿಸುವುದಕ್ಕಾಗಿ 06 ಬಾಕ್ಸ್‌ಗಳನ್ನು ನೀಡಲಾಗಿದೆ. ಸ್ಥಿರಾಸ್ತಿಗಳನ್ನು ಪರಿಗಣಿಸಿ ಅವುಗಳಿಗೆ ಸಂಬಂಧಿಸಿದ ಸಂಕೇತ ಸಂಖ್ಯೆಯನ್ನು ದಾಖಲಿಸಲು ಸೂಚಿಸಲಾಗಿದೆ.

ಆಸ್ತಿಯ ವಿವರಗಳನ್ನು ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಬರೆಯದೆ, ಕುಟುಂಬದ ಎಲ್ಲ ಸದಸ್ಯರಿಗೆ ಅನ್ವಯವಾಗುವಂತೆ ಒಟ್ಟಾರೆ ಮಾಹಿತಿಯನ್ನು ನೀಡಬೇಕು. ಅನ್ವಯಿಸದಿದ್ದಲ್ಲಿ, X ಎಂದು ನಮೂದಿಸುವುದು.

4.56 ಚರಾಸ್ತಿಗಳು: ಕಾಲಂ (ಸಾಲು) ನಂ. 45

ಕುಟುಂಬಗಳು ತಮ್ಮ ದೈನಂದಿನ ನಿರ್ವಹಣೆ ಮತ್ತು ಅನುಕೂಲಕ್ಕಾಗಿ ಹಲವು ಸ್ಥಿರ ಮತ್ತು ಚರಾಸ್ತಿಗಳನ್ನು ಹೊಂದಿರುತ್ತವೆ. ಇಂತಹ 18 ತರಹದ ಚರಾಸ್ತಿಗಳನ್ನು ಪಟ್ಟಿ ಮಾಡಲಾಗಿದ್ದು, ಅನುಬಂಧ-2ರಲ್ಲಿ ನೀಡಲಾಗಿದೆ. ಈ ಮಾಹಿತಿ ಅತ್ಯಂತ ಉಪಯುಕ್ತ ಮಾಹಿತಿಯಾಗುವುದರಿಂದ ಸದರಿ ಮಾಹಿತಿಯನ್ನು ಮಾಹಿತಿದಾರರಿಂದ ಜಾಗರೂಕತೆಯಿಂದ ವಿಚಾರಿಸಿ ತಿಳಿದು ಚರಾಸ್ತಿಗೆ ನೀಡಲ್ಪಟ್ಟ ಸೂಕ್ತ ಸಂಕೇತಗಳನ್ನು ನೀಡಲಾಗಿರುವ ಬಾಕ್ಸ್‌ಗಳಲ್ಲಿ ನಮೂದಿಸಿ. ಚರಾಸ್ತಿಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ದಾಖಲಿಸುವುದಕ್ಕಾಗಿ 2 ಸಾಲುಗಳಲ್ಲಿ ತಲಾ 12 ಬಾಕ್ಸ್‌ಗಳನ್ನು ನೀಡಲಾಗಿದೆ. ಮೇಲ್ಭಾಗದ ಸಾಲಿನಲ್ಲಿರುವ ಬಾಕ್ಸುಗಳಲ್ಲಿ ಚರಾಸ್ತಿಗಳ ಸಂಕೇತ ಸಂಖ್ಯೆಯನ್ನು ಬರೆಯುವುದು. ಕೆಲವು ಕುಟುಂಬಗಳು 12ಕ್ಕಿಂತ ಹೆಚ್ಚು ಸ್ಥಿರ, ಚರಾಸ್ತಿಗಳನ್ನು ಹೊಂದಿರಬಹುದು. ಅಂತಹ ಸಂದರ್ಭಗಳಲ್ಲಿ ಅತೀ ಪ್ರಮುಖವಾದ 12 ಆಸ್ತಿಗಳನ್ನು ಮಾತ್ರ ಪರಿಗಣಿಸಿ ಅವುಗಳಿಗೆ ಸಂಬಂಧಿಸಿದ ಸಂಕೇತ ಸಂಖ್ಯೆಯನ್ನು ದಾಖಲಿಸಲು ಸೂಚಿಸಲಾಗಿದೆ. ಈ ಕಾಲಂನ ಕೆಳಭಾಗದ ಸಾಲಿನಲ್ಲಿರುವ ಬಾಕ್ಸ್‌ಗಳಲ್ಲಿ, ದಾಖಲಿಸಲಾದ ಆಸ್ತಿಗಳ ಸಂಖ್ಯೆಯನ್ನು ದಾಖಲಿಸಬೇಕು.

ಉದಾ: 1) ಒಂದು ಕುಟುಂಬವು ಒಂದು ಟ್ರ್ಯಾಕ್ಟರ್‌ನ್ನು ಹೊಂದಿರುತ್ತದೆ. ಅದಕ್ಕೆ ಅನ್ವಯಿಸುವ ಸಂಕೇತ ಸಂಖ್ಯೆ "16" ಇದ್ದು ಅದನ್ನು ಮೇಲ್ಭಾಗದ ಸಾಲಿನ ಒಂದು ಬಾಕ್ಸಿನಲ್ಲಿ ದಾಖಲಿಸಬೇಕು. ಸದರಿ ಬಾಕ್ಸಿನ ಕೆಳಭಾಗದಲ್ಲಿರುವ (ಕೆಳಭಾಗದ ಸಾಲು) ಬಾಕ್ಸಿನಲ್ಲಿ ಟ್ರ್ಯಾಕ್ಟರಿನ ಸಂಖ್ಯೆ "01" ಎಂದು ಬರೆಯುವುದು.

ಉದಾ: 2) ಒಂದು ಕುಟುಂಬವು ಒಂದು ಕಾರು, ಒಂದು ವ್ಯಾನ್ ಹಾಗೂ ಒಂದು ಬಸ್ ಇತ್ಯಾದಿ ನಾಲ್ಕು ಚಕ್ರಗಳ ವಾಹನಗಳನ್ನು ಹೊಂದಿದ್ದಲ್ಲಿ, ಸಂಕೇತ ಸಂಖ್ಯೆ "04" ಅನ್ವಯಿಸುತ್ತದೆ. ಈ ಪ್ರಕರಣದಲ್ಲಿ, ಮೊದಲನೇ

ಸಾಲಿನ ಬಾಕ್ಸಿನಲ್ಲಿ ಸಂಕೇತ ಸಂಖ್ಯೆ "04"ನ್ನು ಬರೆದು ಅದರ ಕೆಳಗಿನ ಬಾಕ್ಸಿನಲ್ಲಿ ವಾಹನಗಳ ಸಂಖ್ಯೆ (ಕೆಳಭಾಗದ ಸಾಲು) "03" ಎಂದು ದಾಖಲಿಸಬೇಕು.

ಆಸ್ತಿಯ ವಿವರಗಳನ್ನು ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಬರೆಯದೆ, ಕುಟುಂಬದ ಎಲ್ಲ ಸದಸ್ಯರಿಗೆ ಅನ್ವಯವಾಗುವಂತೆ ಒಟ್ಟಾರೆ ಮಾಹಿತಿಯನ್ನು ನೀಡಬೇಕು. ಅನ್ವಯಿಸದಿದ್ದಲ್ಲಿ, X ಎಂದು ನಮೂದಿಸುವುದು.

4.57 ಕುಟುಂಬವು ಸರ್ಕಾರದಿಂದ ಪಡೆದ ಸವಲತ್ತುಗಳು: ಕಾಲಂ (ಸಾಲು) ನಂ. 46

ಸಮೀಕ್ಷೆಯ ಉದ್ದೇಶದ ಹಿನ್ನಲೆಯಲ್ಲಿ ಈ ಮಾಹಿತಿಯು ಪ್ರಾಮುಖ್ಯತೆಯನ್ನು ಹೊಂದಿದೆ. ಇದಕ್ಕಾಗಿ 8 ಸವಲತ್ತುಗಳ ಪಟ್ಟಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಇದನ್ನು ಬಳಸಿಕೊಂಡು ಮಾಹಿತಿದಾರರು ನೀಡುವ ಮಾಹಿತಿಯನ್ನು ಜಾಗರೂಕತೆಯಿಂದ ದಾಖಲಿಸುವುದು. ಹಲವು ಸಂದರ್ಭಗಳಲ್ಲಿ ಕುಟುಂಬವು ಸರ್ಕಾರದಿಂದ ಪಡೆದ ಸವಲತ್ತು ಒಂದಕ್ಕಿಂತ ಹೆಚ್ಚು ಇದ್ದಲ್ಲಿ ಅವುಗಳನ್ನು ಕಾಲಂನಲ್ಲಿ ನೀಡಿರುವ 8 ಬಾಕ್ಸ್‌ಗಳಲ್ಲಿ ದಾಖಲಿಸುವುದು. ಅನ್ವಯಿಸದಿರುವ ಬಾಕ್ಸ್‌ಗಳಲ್ಲಿ X ಎಂದು ಗುರುತಿಸುವುದು.

4.58 ಪಡಿತರ ಚೀಟಿಯ ಸಂಖ್ಯೆ: ಕಾಲಂ (ಸಾಲು) ನಂ. 47

ಕುಟುಂಬಕ್ಕೆ ಆಹಾರ ಇಲಾಖೆಯು ನೀಡಿರುವ ಬಿಪಿಎಲ್, ಎಪಿಎಲ್ ಅಥವಾ ಇತರೆ ರೀತಿಯ ಪಡಿತರ ಚೀಟಿಗಳನ್ನು ಹೊಂದಿರಬಹುದು. ಸದರಿ ಪಡಿತರ ಚೀಟಿಯ ಸಂಖ್ಯೆಯನ್ನು ಒದಗಿಸಿರುವ ಬಾಕ್ಸಿನಲ್ಲಿ ನಮೂದಿಸುವುದು. ಪಡೆಯದಿದ್ದಲ್ಲಿ x ಎಂದು ದಾಖಲಿಸುವುದು.

4.59ನೀವು ನೆಲೆಸಿರುವ ಸ್ಥಳ ಎಂತಹುದು?ಕಾಲಂ(ಸಾಲು)48 :

ಕುಟುಂಬಗಳು ವಾಸವಾಗಿರುವ ಮನೆಗಳು ನಗರ ಪ್ರದೇಶದಲ್ಲಿ, ನಗರಗಳ ಕೊಳಚೆ ಪ್ರದೇಶದಲ್ಲಿ ಗ್ರಾಮೀಣ ಪ್ರದೇಶದ ಕಂದಾಯ ಗ್ರಾಮಗಳಲ್ಲಿ, ಗ್ರಾಮೀಣ ಪ್ರದೇಶದ ಮಜರೆ (ಹ್ಯಾಮ್ಲೆಟ್)ಗಳಲ್ಲಿ, ಅರಣ್ಯ ಪ್ರದೇಶದಲ್ಲಿ ಇಲ್ಲವೇ ಗುಡ್ಡಗಾಡು ಪ್ರದೇಶದಲ್ಲಿ ಇರಬಹುದು. ಮನೆಗಳು ಇರುವ ಪರಿಸರವನ್ನು ಬಿಂಬಿಸುವ ದೃಷ್ಟಿಯಿಂದ 6 ವರ್ಗೀಕರಣವನ್ನು ಮಾಡಿದ್ದು, 01 ರಿಂದ 06ರವರೆಗೆ ಸಂಕೇತ ಸಂಖ್ಯೆಗಳನ್ನು ನೀಡಲಾಗಿದೆ (ಅನುಬಂದ-2). ಗಣತಿದಾರರು ಸಮೀಕ್ಷೆಗಾಗಿ ಮನೆಗೆ ಭೇಟಿ ನೀಡಿದಾಗ ಮನೆಯ ನೆರೆಹೊರೆಯಲ್ಲಿರುವ ಪರಿಸರವನ್ನು ಗಮನಿಸಿ ವರ್ಗೀಕರಣವನ್ನು ಮಾಡಲು ಸೂಚಿಸಲಾಗಿದೆ.

4.60ಹಾಲಿ ವಾಸವಿರುವ ಮನೆಯ ಮಾಲೀಕತ್ವದ ಸ್ವರೂಪ:ಕಾಲಂ(ಸಾಲು) ನಂ.49

ಕುಟುಂಬವು ವಾಸವಾಗಿರುವ ಮನೆಯು ಸ್ವಂತದ್ದೆ ಅಥವಾ ಬಾಡಿಗೆ/ಲೀಸ್‌ಗೆ ಪಡೆದ ಮನೆಯೇ, ಸರ್ಕಾರದ ವಸತಿ ಯೋಜನೆಯಡಿ ಮಂಜೂರಾಗಿರುವ ಮನೆಯೇ ಇತ್ಯಾದಿ ವಿವರಗಳನ್ನು ಸಮೀಕ್ಷೆಯಲ್ಲಿ ಪಡೆಯಬೇಕಾಗಿರುತ್ತದೆ. ಕೆಲವು ಕುಟುಂಬಗಳು ತಾತ್ಕಾಲಿಕವಾಗಿ ನಿರ್ಮಿಸಿದ ಗುಡಿಸಲುಗಳಲ್ಲಿ ವಾಸವಾಗಿರುತ್ತಾರೆ.

ಕೆಲವು ಕುಟುಂಬಗಳಿಗೆ ಸ್ವಂತ ನಿವೇಶನ ಇಲ್ಲದ ಕಾರಣ ಸರ್ಕಾರಿ / ಸಾರ್ವಜನಿಕ ಸ್ಥಳಗಳಲ್ಲಿ ಮನೆ / ಗುಡಿಸಲು ಹಾಕಿಕೊಂಡು ವಾಸವಾಗಿರುತ್ತಾರೆ. ಅಂತಹ ಕುಟುಂಬಗಳನ್ನು ಸಂಕೇತ ಸಂಖ್ಯೆ 06 ರ ಮೂಲಕ ಗುರುತಿಸುವುದು.

ಇನ್ನು ಕೆಲವು ಸಂದರ್ಭಗಳಲ್ಲಿ ಇಂತಹ ಕುಟುಂಬಗಳು ಇತರ ವ್ಯಕ್ತಿಗಳಿಗೆ ಸೇರಿದ ಖಾಸಗಿ ಜಮೀನಿನಲ್ಲಿ ಮನೆ / ಗುಡಿಸಲು ಹಾಕಿಕೊಂಡು ವಾಸವಿರಬಹುದು. ಅಂತಹ ಕುಟುಂಬಗಳನ್ನು ಸಂಕೇತ ಸಂಖ್ಯೆ 07 ನೀಡಿ ಗುರುತಿಸುವುದು.

ಇನ್ನು ಕೆಲವರು ಸಂಪೂರ್ಣವಾಗಿ ವಸತಿ ರಹಿತರಾಗಿದ್ದು ರೇಲ್ವೆ ಸ್ಟೇಷನ್, ಬಸ್ ನಿಲ್ದಾಣ, ಪಾದಚಾರಿ ರಸ್ತೆಗಳು, ರಸ್ತೆ ಬದಿ, ಹ್ಯೂಮ್ ಪೈಪುಗಳು ಇತ್ಯಾದಿ ಸ್ಥಳಗಳಲ್ಲಿ ಮಲಗುತ್ತಾರೆ. ಇಂತಹ ಕುಟುಂಬಗಳನ್ನು ಸಂಕೇತ ಸಂಖ್ಯೆ 08 ನೀಡಿ ವಸತಿ ರಹಿತ ಕುಟುಂಬಗಳೆಂದು ಗುರುತಿಸಬೇಕು. ಕುಟುಂಬಕ್ಕೆ ತನ್ನದೇ ಆದ ನಿವೇಶನ ಇರದಿದ್ದಲ್ಲಿ ಈ ಮಾಹಿತಿಯನ್ನು ಕೂಡ ಕುಟುಂಬದ ಮುಖ್ಯಸ್ಥರಿಂದ ಪಡೆಯಬೇಕು.

ಅನುಬಂಧ-2ರಲ್ಲಿ 01 ರಿಂದ 08ರವರೆಗಿನ ಸಂಕೇತ ಸಂಖ್ಯೆಗಳನ್ನು ನೀಡಲಾಗಿದ್ದು ನೀವು ಸಮೀಕ್ಷೆ ಮಾಡಿದ ಕುಟುಂಬಕ್ಕೆ ಅನ್ವಯಿಸುವ ಅಂಶವನ್ನು ದಾಖಲು ಮಾಡಲು ಸೂಚಿಸಿದೆ.

4.61ವಾಸವಿರುವ ಮನೆಯ ವಿಧ ಹಾಗೂ ಉಪಯೋಗ:ಕಾಲಂ(ಸಾಲು) ನಂ.50

ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗನುಗುಣವಾಗಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಕೆಲವು ಮನೆಗಳು ಆರ್.ಸಿ.ಸಿ ಛಾವಣಿ ಹೊಂದಿರುವ ಪಕ್ಕಾ ಮನೆಗಳಾಗಿದ್ದು, ಪ್ರತ್ಯೇಕವಾದ ಅಡುಗೆ ಕೋಣೆ ಹಾಗೂ ಮಲಗುವ ಕೋಣೆಗಳನ್ನು ಹೊಂದಿದ್ದರೆ, ಇನ್ನು ಕೆಲವು ಪಕ್ಕಾ ಮನೆಗಳಲ್ಲಿ ಅಂತಹ ಪ್ರತ್ಯೇಕ ಕೋಣೆಗಳು ಇರುವುದಿಲ್ಲ. ಇಟ್ಟಿಗೆ / ಸೈಜ್‌ಕಲ್ಲುಗಳಿಂದ ಗೋಡೆ ನಿರ್ಮಿಸಿ ಮೇಲ್ಛಾವಣಿಗೆ ಉತ್ತಮ ಗುಣಮಟ್ಟದ ಮಂಗಳೂರು ಹೆಂಚು ಅಥವಾ ಅಚ್ಚುಕಟ್ಟಾಗಿ ಡ್ರೆಸ್ ಮಾಡಲಾದ ಕಲ್ಲು ಸ್ಲಾಬುಗಳನ್ನು ಉಪಯೋಗಿಸುತ್ತಾರೆ, ಇಂತಹ ಮನೆಗಳನ್ನು ಕೂಡ ಪಕ್ಕಾ ಮನೆಗಳೆಂದು ಪರಿಗಣಿಸಬೇಕು. ಕಚ್ಚಾ ಮನೆಗಳಲ್ಲಿ ಮಣ್ಣಿನ ಗೋಡೆ ಹಾಗೂ ಹೆಂಚಿನ ಛಾವಣಿಯ ಮನೆಗಳಿದ್ದು, ಇತರೆ ಕಚ್ಚಾ ಮನೆಗಳು ಮಣ್ಣಿನ ಛಾವಣಿ ಹಾಗೂ ನಾಡ ಹೆಂಚನ್ನು ಹೊಂದಿರಬಹುದು. ಕೇವಲ ತೆಂಗು/ಅಡಿಕೆಸೋಗೆ ಅಥವಾ ಹುಲ್ಲು ಹೊದಿಕೆ ಹೊಂದಿರುವ ಗುಡಿಸಲುಗಳಲ್ಲಿ ಕೂಡ ಕುಟುಂಬಗಳು ವಾಸವಾಗಿರಬಹುದು. ಅಂತಹ 8 ಪ್ರಕಾರದ ಮನೆಗಳನ್ನು ಗುರುತಿಸಿ ಅವುಗಳಿಗೆ 01 ರಿಂದ 08ರವರೆಗೆ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ (ಅನುಬಂಧ-2). ಅನ್ವಯಿಸುವ ಸಂಕೇತ ಸಂಖ್ಯೆಯನ್ನು ದಾಖಲಿಸುವುದು. ಅನ್ವಯಿಸದಿದ್ದಲ್ಲಿ X ಎಂದು ನಮೂದಿಸುವುದು.

ಕುಟುಂಬ ವಾಸವಿರುವ ಮನೆಯಲ್ಲಿ ಒಂದು ಭಾಗವನ್ನು (ಸಾಮಾನ್ಯವಾಗಿ ಮುಂಭಾಗ) ವಾಣಿಜ್ಯ – ವ್ಯಾಪಾರ ಉದ್ದೇಶಗಳಿಗಾಗಿ ಉಪಯೋಗಿಸಿಕೊಂಡಿರುವ ಅನೇಕ ನಿದರ್ಶನಗಳಿರುತ್ತವೆ. ಇಂತಹ ಸನ್ನಿವೇಶಗಳನ್ನು ಬಿಂಬಿಸುವ ಉದ್ದೇಶದಿಂದ ಈ ಕಾಲಂನಲ್ಲಿ 2 ಬಾಕ್ಸುಗಳನ್ನು ನೀಡಲಾಗಿದೆ. ಎಡಭಾಗದಲ್ಲಿರುವ ಬಾಕ್ಸಿನಲ್ಲಿ ನಿಮಗೆ ನೀಡಲಾಗಿರುವ ಸಂಕೇತ ಸಂಖ್ಯೆಗಳಲ್ಲಿ ಅನ್ವಯವಾಗುವ ಸಂಕೇತ ಸಂಖ್ಯೆಗಳನ್ನು ದಾಖಲಿಸುವುದು. ಬಲಭಾಗದಲ್ಲಿರುವ ಬಾಕ್ಸಿನಲ್ಲಿ, ಕಟ್ಟಡವನ್ನು ಬಳಸಿದ ಉಪಯೋಗವನ್ನು ನಮೂದಿಸುವುದು. ಕಟ್ಟಡವನ್ನು ಸಂಪೂರ್ಣವಾಗಿ ವಾಸಕ್ಕಾಗಿ ಉಪಯೋಗಿಸಿದ್ದಲ್ಲಿ ಕೋಡ್ ಸಂಖ್ಯೆ 'A' ಹಾಗೂ ಕಟ್ಟಡವನ್ನು ಭಾಗಶಃ ವಾಸ ಮತ್ತು ಭಾಗಶಃ ವಾಣಿಜ್ಯ ಉದ್ದೇಶಕ್ಕೆ ಉಪಯೋಗಿಸಿದ್ದಲ್ಲಿ ಕೋಡ್ ಸಂಖ್ಯೆ 'B' ಎಂದು ನಮೂದಿಸುವುದು.

4.62 ನಿವೇಶನ ಹೊಂದಿದ್ದೀರಾ :ಕಾಲಂ(ಸಾಲು) ನಂ.51

ನೀವು ಸಮೀಕ್ಷೆ ಮಾಡುವ ಕುಟುಂಬಗಳಲ್ಲಿ, ಕೆಲವು ಕುಟುಂಬಗಳು ನಿವೇಶನವನ್ನು ಹೊಂದಿರಬಹುದು. ನಿವೇಶನವು ಸ್ವಂತದ್ದಾಗಿರಬಹುದು ಇಲ್ಲವೆ ಸರ್ಕಾರದಿಂದ ಮಂಜೂರಾಗಿರಬಹುದು. ಕೆಲವು ಸಂದರ್ಭಗಳಲ್ಲಿ ಸರ್ಕಾರದ ಇಲ್ಲವೆ ಖಾಸಗಿ ವ್ಯಕ್ತಿಗಳಿಗೆ ಸೇರಿದ ನಿವೇಶನವನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿರಬಹುದು. ಇನ್ನು ಕೆಲವು ಕುಟುಂಬಗಳಿಗೆ ಯಾವುದೇ ರೀತಿಯ ನಿವೇಶನ ಇಲ್ಲದಿರಬಹುದು. ಇಂತಹ ಸಂದರ್ಭಗಳನ್ನು ಸೂಚಿಸುವುದಕ್ಕಾಗಿ 5 ಸಂಕೇತ ಸಂಖ್ಯೆಗಳನ್ನು ನೀಡಿದ್ದು, ಕುಟುಂಬಕ್ಕೆ ಅನ್ವಯಿಸುವ ಸಂಕೇತ ಸಂಖ್ಯೆಯನ್ನು ಸಮೀಕ್ಷಾ ನಮೂನೆಯಲ್ಲಿ ನಮೂದಿಸಲು ಸೂಚಿಸಿದೆ.

4.63 ಕುಡಿಯುವ ನೀರಿನ ಮೂಲ: ಕಾಲಂ (ಸಾಲು) ನಂ. 52

ಕುಟುಂಬದವರಿಗೆ ಕುಡಿಯುವ ನೀರಿನ ಲಭ್ಯತೆಯನ್ನು ತಿಳಿಯುವ ಸಲುವಾಗಿ ಈ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಇದಕ್ಕಾಗಿ 6 ಸಂಕೇತ ಸಂಖ್ಯೆಗಳನ್ನು ನೀಡಲಾಗಿದ್ದು, ಸಂಕೇತ ಸಂಖ್ಯೆಯ ರೀತ್ಯಾ ನಮೂದಿಸುವುದು. ಯಾವುದೇ ಕುಟುಂಬವು ಒಂದಕ್ಕಿಂತ ಹೆಚ್ಚು ಮೂಲಗಳಿಂದ ಕುಡಿಯುವ ನೀರನ್ನು ಪಡೆಯುತ್ತಿದ್ದರೆ, ಅಂತಹ ಪ್ರಕರಣಗಳಲ್ಲಿ ಎರಡು ಪ್ರಮುಖ ನೀರಿನ ಮೂಲಗಳನ್ನು ಕೊಟ್ಟಿರುವ ಸಂಕೇತ ಸಂಖ್ಯೆಯಿಂದ ದಾಖಲು ಮಾಡಬೇಕು. ಅವುಗಳಿಗೆ 01 ರಿಂದ 06ರವರೆಗೆ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ (ಅನುಬಂಧ-2). ಅನ್ವಯಿಸುವ ಸಂಕೇತ ಸಂಖ್ಯೆಯನ್ನು ದಾಖಲಿಸುವುದು.

4.64 ಶೌಚಾಲಯದ ವ್ಯವಸ್ಥೆ: ಕಾಲಂ(ಸಾಲು) ನಂ.53

ಶೌಚಾಲಯಕ್ಕೆ ಸಂಬಂಧಪಟ್ಟಂತೆ ಕುಟುಂಬದ ವಸ್ತು ಸ್ಥಿತಿಯನ್ನು ತಿಳಿಯಲು ಈ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಶೌಚಾಲಯದ ವ್ಯವಸ್ಥೆ ಮನೆಯ ಆವರಣದ ಒಳಗಡೆ ಇದೆಯೆ ಅಥವಾ ಸಾಮೂಹಿಕವಾಗಿದೆಯೇ ಅಥವಾ ಬಯಲು ಪ್ರದೇಶವನ್ನು ಅವಲಂಬಿಸಬೇಕೆ ಎಂಬ ಮಾಹಿತಿ ಸಂಗ್ರಹಿಸಬೇಕಾಗಿದ್ದು, ಇದಕ್ಕಾಗಿ ನೀಡಿದ 4 ಸಂಕೇತ ಸಂಖ್ಯೆಗಳನ್ನು ಬಳಸಿಕೊಂಡು ಮಾಹಿತಿ ತುಂಬುವುದು. ಅವುಗಳಿಗೆ 01 ರಿಂದ 04ರವರೆಗೆ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ (ಅನುಬಂಧ-2). ಅನ್ವಯಿಸುವ ಸಂಕೇತ ಸಂಖ್ಯೆಯನ್ನು ದಾಖಲಿಸುವುದು.

4.65 ಅಡುಗೆಗೆ ಬಳಸಲಾಗುವ ಪ್ರಮುಖ ಇಂಧನ: ಕಾಲಂ (ಸಾಲು) ನಂ. 54

ದೈನಂದಿನ ಅಡುಗೆ ತಯಾರಿಸಲು ಯಾವ ಇಂಧನವನ್ನು ಕುಟುಂಬ ಬಳಸುತ್ತದೆ ಎಂಬುದನ್ನು ತಿಳಿದುಕೊಂಡು, ನೀಡಲಾಗಿರುವ 7 ಸಂಕೇತ ಸಂಖ್ಯೆಯನ್ನು ಬಳಸಿಕೊಂಡು ಮಾಹಿತಿಯನ್ನು ದಾಖಲಿಸುವುದು. ಒಂದಕ್ಕಿಂತ ಹೆಚ್ಚು ಇಂಧನ ಮೂಲಗಳನ್ನು ಬಳಸುತ್ತಿದ್ದರೆ ಪ್ರಮುಖ 2 ಇಂಧನಗಳ ಸಂಕೇತ ಸಂಖ್ಯೆಗಳನ್ನು ದಾಖಲಿಸುವುದು. ಅವುಗಳಿಗೆ 01 ರಿಂದ 07ರವರೆಗೆ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ (ಅನುಬಂಧ-2). ಅನ್ವಯಿಸುವ ಸಂಕೇತ ಸಂಖ್ಯೆಯನ್ನು ದಾಖಲಿಸುವುದು.

4.66ದೀಪದ ಮೂಲ: ಕಾಲಂ (ಸಾಲು) ನಂ.55

ಇದಕ್ಕಾಗಿ 6 ಸಂಕೇತ ಸಂಖ್ಯೆಯನ್ನು ನೀಡಲಾಗಿದೆ. ಇದನ್ನು ಬಳಸಿಕೊಂಡು ಕುಟುಂಬವು ಬಳಸುವ ದೀಪದ ಮೂಲವನ್ನು ದಾಖಲಿಸುವುದು. ಒಂದು ವೇಳೆ ಒಂದಕ್ಕಿಂತ ಹೆಚ್ಚು ದೀಪದ ಮೂಲಗಳಿದ್ದರೆ ಪ್ರಮುಖ 2 ಮೂಲಗಳನ್ನು ಬಾಕ್ಸಿನಲ್ಲಿ ತುಂಬಿ ದಾಖಲಿಸುವುದು. ಅವುಗಳಿಗೆ 01 ರಿಂದ 06ರವರೆಗೆ ಸಂಕೇತ ಸಂಖ್ಯೆಗಳನ್ನು ನಿಗದಿಪಡಿಸಲಾಗಿದೆ(ಅನುಬಂಧ-2). ಅನ್ವಯಿಸುವ ಸಂಕೇತ ಸಂಖ್ಯೆಯನ್ನು ದಾಖಲಿಸುವುದು.

4.67ಕುಟುಂಬದ ಅನುಸೂಚಿಯಲ್ಲಿ (ನಮೂನೆ-3) 10 ಸದಸ್ಯರಿಗೆ ಕುರಿತ ಮಾಹಿತಿಗಳನ್ನು ಭರ್ತಿ ಮಾಡಲು ಅವಕಾಶವಿರುತ್ತದೆ. 10ಕ್ಕಿಂತ ಹೆಚ್ಚು ಸದಸ್ಯರಿರುವ ಕುಟುಂಬಗಳಿಗೆ ಹೆಚ್ಚುವರಿ ಅನುಸೂಚಿಗಳನ್ನು (ನಮೂನೆ-3) ಉಪಯೋಗಿಸಿಕೊಳ್ಳಲು ಸೂಚಿಸಲಾಗಿದೆ. ಒಂದು ಕುಟುಂಬಕ್ಕೆ ಅನ್ವಯಿಸುವ ಅಂತಹ ಹೆಚ್ಚುವರಿ ನಮೂನೆಗಳನ್ನು ಮುಖ್ಯ ನಮೂನೆಯೊಡನೆ ಟ್ಯಾಗ್ ಮಾಡುವುದು. ಇಡೀ ಕುಟುಂಬಕ್ಕೆ ಅನ್ವಯಿಸುವ ಸಾಮಾನ್ಯವಾಗಿ ಅನ್ವಯಿಸುವ ಕಾಲಂ (ಸಾಲು) 40 ರಿಂದ 55 ರವರೆಗಿನ ಮಾಹಿತಿಗಳನ್ನು ಮೊದಲನೆ ಅನುಸೂಚಿಯಲ್ಲಿ ನಮೂದಿಸಿದರೆ ಸಾಕು.

4.68ನಮೂನೆ-3ನ್ನು ಭರ್ತಿ ಮಾಡಿ ಮುಗಿದ ನಂತರ ತೆಗೆದುಕೊಳ್ಳಬೇಕಾದ ಕ್ರಮಗಳು:

i) ಅನುಸೂಚಿಯ ಎಲ್ಲಾ ಕಾಲಂಗಳನ್ನು ಸರಿಯಾಗಿ ಭರ್ತಿ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ದಾಖಲಿಸಿದ ಅಂಶಗಳನ್ನು ಕುಟುಂಬದ ಮುಖ್ಯಸ್ಥ/ಮಾಹಿತಿದಾರರಿಗೆ ತೋರಿಸುವುದು.

ii) ಮುಖ್ಯಸ್ಥ/ಮಾಹಿತಿ ನೀಡಿದವರ ಹೆಸರು, ಸಹಿ ಮತ್ತು ದಿನಾಂಕ :

ಕುಟುಂಬದ ಅನುಸೂಚಿಯಲ್ಲಿ ಎಲ್ಲಾ ಸದಸ್ಯರ ಮತ್ತು ಕುಟುಂಬದ ಮಾಹಿತಿಗಳನ್ನು ಸಂಗ್ರಹಿಸಿ ಭರ್ತಿ ಮಾಡಿದ ನಂತರ ಕುಟುಂಬದ ಮುಖ್ಯಸ್ಥರು ಇಲ್ಲವೆ ಮಾಹಿತಿ ನೀಡಿದವರ ಹಸ್ತಾಕ್ಷರ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆಯಬೇಕು ಹಾಗೂ ಆ ವ್ಯಕ್ತಿಯ ಹೆಸರನ್ನು ಕೆಳಗೆ ದಾಖಲಿಸಬೇಕು. ಮಾಹಿತಿ ನೀಡಿದ ವ್ಯಕ್ತಿಯು ಸಹಿ ಮಾಡಲು ಅಥವಾ ಹೆಬ್ಬಟ್ಟನ್ನು ಹಾಕಲು ನಿರಾಕರಿಸಿದರೆ 'ಸಹಿ ಮಾಡಲು/ಹೆಬ್ಬೆಟ್ಟು ಹಾಕಲು ನಿರಾಕರಿಸಿದ್ದಾರೆ' ಎಂದು ಪರಿಸ್ಥಿತಿಗನುಸಾರವಾಗಿ ದಾಖಲೆ ಮಾಡಿರಿ.

iii) ಗಣತಿದಾರರ ಹೆಸರು, ಸಹಿ ಮತ್ತು ದಿನಾಂಕ :

ಗಣತಿದಾರರು ಕುಟುಂಬದ ಅನುಸೂಚಿಯಲ್ಲಿ ಎಲ್ಲಾ ಮಾಹಿತಿಗಳನ್ನು ದಾಖಲೆ ಮಾಡಿದ ಮೇಲೆ ನಮೂದಿಸಿದ ವಿವರಗಳನ್ನು ಚೆನ್ನಾಗಿ ಪರಿಶೀಲಿಸಿ ಗಣತಿದಾರರು ತಮ್ಮ ಹೆಸರನ್ನು ಬರೆದು ಸಹಿ ಮಾಡಿ

ಅದರ ಕೆಳಗೆ ದಿನಾಂಕವನ್ನು ಬರೆಯಬೇಕು. ದಾಖಲಿಸಿದ ಮಾಹಿತಿಗಳ ಕುರಿತಂತೆ ಏನಾದರೂ ಸ್ಪಷ್ಟೀಕರಣ ಬೇಕಾದಲ್ಲಿ ಗಣತಿದಾರರನ್ನು ಸಂಪರ್ಕಿಸುವ ಸಲುವಾಗಿ ಅವರು ತಮ್ಮ ಮೊಬೈಲ್ ಸಂಖ್ಯೆಯನ್ನು ಕೂಡ ಬರೆಯಲು ಸೂಚಿಸಲಾಗಿದೆ. ನಿಮಗೆ ವಹಿಸಲಾದ ಗಣತಿ ಬ್ಲಾಕುಗಳಲ್ಲಿ ಇರುವ ಪ್ರತಿಯೊಂದು ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ ಎಂಬ ಬಗ್ಗೆ ಖಚಿತಪಡಿಸಿಕೊಳ್ಳುವುದು ನಿಮ್ಮದೇ ಹೊಣೆಯಾಗಿರುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳುವುದು.

iv) ಮೇಲ್ವಿಚಾರಕರ ಹೆಸರು, ಸಹಿ ಮತ್ತು ದಿನಾಂಕ :

6 ಗಣತಿದಾರರಿಗೆ ಸಂಬಂಧಿಸಿದ ಸಮೀಕ್ಷಾ ಪ್ರಕ್ರಿಯೆಯ ಮೇಲುಸ್ತುವಾರಿಯ ಹೊಣೆಗಾರಿಕೆ ಮೇಲ್ವಿಚಾರಕರ ಮೇಲೆ ಇರುತ್ತದೆ. ಅವರು ಸಮೀಕ್ಷೆಯ ವೇಳೆಯಲ್ಲಿ ಗಣತಿ ಬ್ಲಾಕುಗಳ ಕುಟುಂಬಗಳಿಗೆ ಭೇಟಿ ನೀಡಿದ ಸಮಯದಲ್ಲಿ ಸೂಕ್ತ ಪರಿಶೀಲನೆ ಮಾಡಿದ ನಂತರ ಪೂರ್ಣಗೊಂಡ ನಮೂನೆ-3ರ ಕೊನೆಯಲ್ಲಿ ತಮ್ಮ ಹೆಸರು ಬರೆದು ಸಹಿ ಮಾಡಬೇಕು ಹಾಗೂ ದಿನಾಂಕವನ್ನು ನಮೂದಿಸಬೇಕು. ಇದಲ್ಲದೆ ಗಣತಿ ಬ್ಲಾಕಿನಲ್ಲಿ ಸಂಪೂರ್ಣ ಸಮೀಕ್ಷೆ ಮುಗಿದ ನಂತರ ಗಣತಿದಾರರು ಸಲ್ಲಿಸಿದ ಪ್ರತಿಯೊಂದು ನಮೂನೆ-3ರ ಕೊನೆಯಲ್ಲಿ, ಸೂಕ್ತ ಪರಿಶೀಲನೆಯ ನಂತರ ಸಹಿ ಮಾಡಬೇಕು. ನಿಮಗೆ ವಹಿಸಲಾದ ಎಲ್ಲಾ ಗಣತಿ ಬ್ಲಾಕುಗಳಲ್ಲಿ ಇರುವ ಪ್ರತಿಯೊಂದು ಮನೆ(ಕುಟುಂಬ)ಯ ಸಮೀಕ್ಷೆಯನ್ನು ಮಾಡಲಾಗಿರುವ ಕುರಿತು ಖಚಿತಪಡಿಸಿಕೊಳ್ಳುವುದು ನಿಮ್ಮ ಗುರುತರ ಹೊಣೆಯಾಗಿರುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳುವುದು.

5.1 ಗಣತಿದಾರರ ಘೋಷ್ವಾರೆ ನಮೂನೆ-4'ಎ' ಮತ್ತು 4'ಬಿ' ಗಳನ್ನು ತುಂಬುವ ವಿಧಾನ :

ಕುಟುಂಬದ ಅನುಸೂಚಿಯನ್ನು ಭರ್ತಿ ಮಾಡುವ ಕಾರ್ಯವನ್ನು ಮುಗಿಸಿದ ಕೂಡಲೇ ನಿಮ್ಮ ಗಣತಿ ಬ್ಲಾಕ್‌ನಲ್ಲಿ ವಾಸಕ್ಕಾಗಿ ಬಳಸುತ್ತಿರುವ ಮನೆಗಳು ಮತ್ತು ಕುಟುಂಬಗಳು ಎಷ್ಟಿವೆ ಎಂಬ ಸಾಮಾನ್ಯ ವಿವರಗಳು ಲಭ್ಯವಾಗುತ್ತದೆ.

ನೀವು ಮುಖ್ಯವಾಗಿ ನಮೂನೆ-4'ಎ' ಮತ್ತು 4'ಬಿ'ರಲ್ಲಿ ಭರ್ತಿ ಮಾಡುವ ಅಂಶಗಳೆಂದರೆ:- ಬ್ಲಾಕಿನ ಗುರುತು ಅಂದರೆ ಜಿಲ್ಲೆ, ತಾಲ್ಲೂಕು, ವಾರ್ಡ್ ಸಂಖ್ಯೆ ಮುಂತಾದ ಸಾಮಾನ್ಯ ವಿವರಗಳನ್ನು ಅಚ್ಚುಕಟ್ಟಾಗಿ ತುಂಬುವುದು. ನಮೂನೆ-4'ಎ'ರ ನಮೂನೆಯ ಭಾಗ-1ರಲ್ಲಿ ಮನೆಪಟ್ಟಿ ಪ್ರಕಾರ ಪುಟ ಸಂಖ್ಯೆವಾರು (ನಮೂನೆ-2ರಂತೆ) ವಾಸ, ವಾಸೇತರ, ವಾಸ ಮತ್ತು ವಾಸೇತರ, ವಸತಿ ರಹಿತ ಹಾಗೂ ಇತರೆ ಕುಟುಂಬಗಳು ಸೇರಿ ಒಟ್ಟು ಕುಟುಂಬಗಳನ್ನು ಕಾಲಂ 7ರಲ್ಲಿ ನಮೂದಿಸುವುದು. ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳ ಮಾಹಿತಿಯನ್ನು ಕಾಲಂ 7 ರಿಂದ ಕಾಲಂ 3ನ್ನು ಕಳೆದು ಕಾಲಂ 8ರಲ್ಲಿ ನಮೂದಿಸುವುದು. ಎಲ್ಲ ಪುಟಗಳ ಮಾಹಿತಿ ಭರ್ತಿಯಾದ ನಂತರ ಕೂಡಿಸಿ ಒಟ್ಟು ಸಂಖ್ಯೆಯನ್ನು ನಮೂದಿಸಬೇಕು.

ನಮೂನೆ-4'ಬಿ'ರ ಭಾಗ-1ರಲ್ಲಿನಮೂನೆ 4'ಎ' ರಲ್ಲಿಯ ಒಟ್ಟು ಸಂಖ್ಯೆಯನ್ನು ಐಟಂವಾರು ನಮೂದಿಸಬೇಕು.

ನಮೂನೆ 4'ಬಿ'ರ ಭಾಗ-2ರಲ್ಲಿ ನೀವು ಸ್ವೀಕರಿಸಲಾದ ನಮೂನೆ-1, ನಮೂನೆ-2, ನಮೂನೆ-3, ನಮೂನೆ-4'ಎ' ಮತ್ತು 4'ಬಿ' ಖಾಲಿ ನಮೂನೆಗಳನ್ನು ಕ್ರ.ಸಂ.1ರಲ್ಲಿ ನಮೂದಿಸುವುದು. ಸ್ವೀಕರಿಸಿದ ನಮೂನೆಗಳಲ್ಲಿ ಭರ್ತಿ ಮಾಡಲಾದ ವಿವರಗಳನ್ನು ಕ್ರ.ಸಂ.2ರಲ್ಲಿ ನಮೂದಿಸುವುದು. ನೀವು ಸ್ವೀಕರಿಸಿದ ಒಟ್ಟು ಖಾಲಿ ನಮೂನೆಗಳಲ್ಲಿ, ಉಪಯೋಗಿಸದೆ ಹಿಂತಿರುಗಿಸುವ ಖಾಲಿ ನಮೂನೆಗಳನ್ನು ಕ್ರ.ಸಂ:3ರಲ್ಲಿ ನಮೂದಿಸಬೇಕು. ಭರ್ತಿ ಮಾಡಿದ ನಮೂನೆ-4'ಎ' ಮತ್ತು 4'ಬಿ'ರ ಕೆಳಗೆ ಗಣತಿದಾರರು ತಮ್ಮ ಹೆಸರು ಮತ್ತು ಹುದ್ದೆಯನ್ನು ಬರೆದು ದಿನಾಂಕದೊಂದಿಗೆ ಸಹಿ ಮಾಡಿ ಮೇಲ್ವಿಚಾರಕರಿಗೆ ಸಲ್ಲಿಸಬೇಕು. ಅವುಗಳನ್ನು ಸ್ವೀಕರಿಸಿದ ಬಗ್ಗೆ ನಮೂನೆಯ

ಕೆಳಭಾಗದ ಎಡಗಡೆ ಮೇಲ್ವಿಚಾರಕರು ತಮ್ಮ ಹೆಸರು ಮತ್ತು ಹುದ್ದೆಯನ್ನು ಬರೆದು ದಿನಾಂಕದೊಂದಿಗೆ ಸಹಿ ಮಾಡಿದ ನಂತರ ಛಾರ್ಜ್ ಅಧಿಕಾರಿಗೆ ಎಲ್ಲಾ ನಮೂನೆಗಳ ಜೊತೆಯಲ್ಲಿ ಸಲ್ಲಿಸಬೇಕು.

ಈ ವಿವರವು ಸಮೀಕ್ಷೆಯ ಗಾತ್ರ ಹಾಗೂ ಪ್ರತಿಯೊಂದು ಹಂತಗಳನ್ನು ವ್ಯಕ್ತಪಡಿಸುವಂತಹ ಮಹತ್ವದ ಘೋಷ್ವಾರೆಯಾಗಿರುವುದರಿಂದ ಇದನ್ನು ಚಾಚು ತಪ್ಪದೆ ನಿಮಗೆ ನಿಗದಿತ ಕಾಲಾವಕಾಶದೊಳಗೆ ಸಲ್ಲಿಸುವುದು ಅತಿಮುಖ್ಯವಾಗಿರುತ್ತದೆ.

5.2 ಮೇಲ್ವಿಚಾರಕರು / ಅಧಿಕಾರಿಗಳು ಕೈಗೊಂಡ ಸಮೀಕ್ಷೆ ಪರಿಶೀಲನೆಯ ವರದಿ ನಮೂನೆ-5ನ್ನು ತುಂಬುವ ವಿಧಾನ:

ಸಮೀಕ್ಷೆ ಜಾರಿಯಲ್ಲಿದ್ದಾಗ ಅದು ಸಮರ್ಪಕವಾಗಿ ನಡೆಯುತ್ತಿದ್ದೆಯೇ ಎಂಬ ಬಗ್ಗೆ ಪರಿಶೀಲನೆಯನ್ನು ಮೇಲ್ವಿಚಾರಕರು ಹಾಗೂ ಇತರ ಅಧಿಕಾರಿಗಳು ಮಾಡಬೇಕಾಗುತ್ತದೆ. ಹಾಗೆ ಪರಿಶೀಲನೆ ಮಾಡಿದಾಗ ಅವರು ಗಮನಿಸಿದ ಲೋಪದೋಷಗಳನ್ನು ನಮೂನೆ-5ರ ಒಂದನೇ ಪುಟದಲ್ಲಿ ಸಂಬಂಧಪಟ್ಟ ಕಾಲಂ 6 ರಿಂದ 8 ರವರೆಗಿನ ಕಾಲಂಗಳಲ್ಲಿ ನಮೂದಿಸಬೇಕು. ನಮೂನೆಯ ಎರಡನೇ ಪುಟದಲ್ಲಿ ಗಣತಿದಾರರ ಹೆಸರು ಮತ್ತು ಗಣತಿ ಮಾಡಿದ ಕುಟುಂಬಗಳ ವಿವರಗಳನ್ನು ನಮೂದಿಸಿ ಮೇಲ್ವಿಚಾರಕರು ಸಹಿ ಮಾಡಬೇಕಾಗುತ್ತದೆ.

ಮೇಲ್ವಿಚಾರಣೆಗೆ ವಹಿಸಿಕೊಡಲಾದ ಎಲ್ಲಾ ಗಣತಿ ಬ್ಲಾಕುಗಳಲ್ಲಿ ಸಮೀಕ್ಷೆ ಮುಗಿದ ನಂತರ, ಭರ್ತಿ ಮಾಡಲಾದ ನಮೂನೆ-5ನ್ನು ಇತರ ನಮೂನೆಗಳೊಂದಿಗೆ ಮೇಲ್ವಿಚಾರಕರು ಛಾರ್ಜ್ ಅಧಿಕಾರಿಯವರಿಗೆ ಒಪ್ಪಿಸತಕ್ಕದ್ದು. ಕುಟುಂಬ ಅನುಸೂಚಿ ನಮೂನೆ-3ನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಮತ್ತು ನಮೂನೆ-4'ಎ' ಮತ್ತು 4'ಬಿ' ಹಾಗೂ 5ರಲ್ಲಿರುವ ಘೋಷ್ವಾರೆಗಳಲ್ಲಿ ಅಗತ್ಯವಿರುವ ಎಲ್ಲಾ ಮಾಹಿತಿಗಳನ್ನು ವಿವರಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಇದಲ್ಲದೆ ಸಮೀಕ್ಷೆಯ ವೇಳೆಯಲ್ಲಿ ಉಪಯೋಗಿಸಿಕೊಂಡ ಬ್ಲಾಕ್ ಲೇಔಟ್ ಮ್ಯಾಪ್ ಹಾಗೂ ಸಂಕ್ಷಿಪ್ತ ಮನೆಪಟ್ಟಿಯನ್ನು ಕೂಡ ಚಾರ್ಜ್ ಅಧಿಕಾರಿಗಳಿಗೆ ಮರೆಯದೆ ಸಲ್ಲಿಸಬೇಕು. ನಿಮ್ಮ ಗಣತಿದಾರರೊಂದಿಗೆ ಹೋಗಿ, ಮೇಲ್ಕಂಡ ರೀತಿಯಲ್ಲಿ ನೀವು ಎಲ್ಲಾ ದಾಖಲೆಗಳನ್ನು ಚಾರ್ಜ್ ಅಧಿಕಾರಿಯವರಿಗೆ ಸಲ್ಲಿಸಿದ ಬಗ್ಗೆ ಸ್ವೀಕೃತಿಯನ್ನು ಪಡೆದುಕೊಳ್ಳಲು ಸೂಚಿಸಲಾಗಿದೆ. ಈ ಎಲ್ಲಾ ಕಾರ್ಯಗಳನ್ನು ನಿಮಗೆ ನೀಡಿರುವ ಗಡುವಿನ ಒಳಗೆ ಮಾಡಿ ಮುಗಿಸತಕ್ಕದ್ದು.

ಅನುಬಂಧ-1

ಕರ್ನಾಟಕ ಸರ್ಕಾರ
Government of Karnataka
ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ - ಬೆಂಗಳೂರು
KARNATAKA STATE COMMISSION FOR BACKWARD CLASSES – BANGALORE
ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ **Social and Educational Survey**
ನಮೂನೆ-3 ಕುಟುಂಬದ ಅನುಸೂಚಿ / Form – 3 - House Hold Schedule

ಅನುಕ್ರಮ ಸಂಖ್ಯೆ
Sl No.

ಜಿಲ್ಲೆಯ ಹೆಸರು :
Name of the District : ....
ಜಿಲ್ಲೆಯ ಸಂಕೇತ ಸಂಖ್ಯೆ :
District Code No :
ಅಂಚೆ ವಿಳಾಸ/(Postal Address)
ಮನೆ / ಡೋರ್ ಸಂಖ್ಯೆ ______
ಕ್ರಾಸ್ ಹಾಗೂ ಮೇನ್: ______
ಬಡಾವಣೆ/ಕೇರಿ/ಕಾಲೋನಿ ಹೆಸರು: ______
ಕುಟುಂಬದ ಮುಖ್ಯಸ್ಥರ ಮೊಬೈಲ್ ಸಂಖ್ಯೆ: ______

ತಾಲ್ಲೂಕು ಹೆಸರು :
Name of the Taluk : ....
ತಾಲ್ಲೂಕು ಸಂಕೇತ ಸಂಖ್ಯೆ:
Taluk Code No :
ಚಾರ್ಜ್ ಸಂಖ್ಯೆ :
Charge No :

ಗ್ರಾಮ/ಪಟ್ಟಣ/ನಗರದ ಹೆಸರು:
Name of the Village / Town/City : ....
ಗ್ರಾಮ/ಪಟ್ಟಣ/ನಗರದ, ಸಂಕೇತ ಸಂಖ್ಯೆ:
Village / Town/City Code No :
ಮಜರೆ ಗ್ರಾಮದ ಹೆಸರು :
Name of the Hamlet: ....

ಕುಟುಂಬದ ಕ್ರಮ ಸಂಖ್ಯೆ
Sl. No of House hold :
(ನಮೂನೆ-2ರ ಕಾಲಂ-1ರ ಪ್ರಕಾರ)
As per Col No.-1 of Form-2)

ಜನಗಣತಿ ಮನೆ ಸಂಖ್ಯೆ :
(ನಮೂನೆ-2ರ ಕಾಲಂ 3 ರಲ್ಲಿದ್ದಂತೆ)
Census House No.
(As per Col No. 3 of Form-2)

ಗಣತಿ ಬ್ಲಾಕ್ ಸಂಖ್ಯೆ :
Enumeration Block No :

ಉಪ ಬ್ಲಾಕ್ ಸಂಖ್ಯೆ:
Sub Block No

ವಾರ್ಡ್ ಸಂಖ್ಯೆ:
Ward No :

ಸಂಕೇತ ಸಂಖ್ಯೆಗಳನ್ನು ಜನಗಣತಿ 2011ರ ಪ್ರಕಾರ ನಮೂದಿಸುವುದು. (Enter Code Nos as per 2011 Census)

ಭಾಗ- I ಕುಟುಂಬದ ಮುಖ್ಯಸ್ಥರು ಮತ್ತು ಸದಸ್ಯರ ವೈಯಕ್ತಿಕ ವಿವರಗಳು : PART – I Personal Details of Head of the Family and Members

ಕ್ರ.ಸಂ. Sl. No	ಸಾಮಾನ್ಯ / General														
	ಕುಟುಂಬದ ಮುಖ್ಯಸ್ಥರ ಮತ್ತು ಸದಸ್ಯರ ಹೆಸರು Name of the Head of the Household and Members	ಕುಟುಂಬದ ಮುಖ್ಯಸ್ಥರೊಂದಿಗೆ ಸಂಬಂಧ Relationship with the Head of the household *	ಲಿಂಗ (ಗಂಡು-1, ಹೆಣ್ಣು-2, ತೃತೀಯ ಲಿಂಗ-3) Sex (Male-1, female-2, Third Gender-3)	ಧರ್ಮ Religion *	ಜಾತಿ Caste *	ಉಪಜಾತಿ Sub Caste *	ಜಾತಿಗೆ ಇರುವ ಇನ್ನಿತರೆ ಪರ್ಯಾಯ ಹೆಸರುಗಳು (ಗರಿಷ್ಠ-3) Other Synonymous names by which the Caste is known (Max-3) *			ಪೂರ್ಣಗೊಂಡ ವಯಸ್ಸು (ವರ್ಷಗಳಲ್ಲಿ) Completed age (Years)	ಮಾತೃ ಭಾಷೆ Mother Tongue *	ಆಧಾರ ಕಾರ್ಡ್ ಸಂಖ್ಯೆ (ಪಡೆದಿದ್ದಲ್ಲಿ) Adhar Card No. (If issued)	ಚುನಾವಣಾ ಆಯೋಗದ ಗುರುತಿನ ಚೀಟಿ ಸಂಖ್ಯೆ (ಪಡೆದಿದ್ದಲ್ಲಿ) Election Commission Identity Card No. (If issued)	ನೀವು ಅಂಗ ವಿಕಲರೆ? Are you Dis abled? *
1	2	3	4	5	6	7	8			9	10	11	12	13
1														
2														
3														
4														
5														
6														
7														
8														
9														
10														

@ ಇತರೆ ಜಾತಿ Other Caste : @ ಉಪಜಾತಿ Sub Caste :

ನಮೂನೆ–3 ಕುಟುಂಬದ ಅನುಸೂಚಿ

Form-3 House hold schedule

ಕುಟುಂಬ ಕ್ರಮ ಸಂಖ್ಯೆ

ಕುಟುಂಬದ ಮುಖ್ಯಸ್ಥರ ಹೆಸರು: ....

	ಸಾಮಾನ್ಯ : General		ಶೈಕ್ಷಣಿಕ ವಿವರಗಳು : Education Details							
	ವೈವಾಹಿಕ ಸ್ಥಾನಮಾನ Marital Status *	ವಿವಾಹ ಆದ ಸಮಯದಲ್ಲಿ ವಯಸ್ಸು Age at Marriage	ಶಾಲೆಗೆ ಸೇರಿದ ಸಮಯದಲ್ಲಿ ವಯಸ್ಸು Age at the time of Joining school	ಶಾಲೆಯ ವಿಧ Type of School *	ವಿದ್ಯಾಭ್ಯಾಸದ ವಿವರ (ಗರಿಷ್ಠ ವಿದ್ಯಾರ್ಹತೆ) Educational Details (Highest Qualification) *	ಶಾಲೆ ಬಿಟ್ಟವರ ವಿವರಗಳು (6 ರಿಂದ 16 ವರ್ಷದವರೆಗೆ ಮಾತ್ರ) Details of School Dropouts (Those who are in the age group of 6 to 16 years only) — ಶಾಲೆ ಬಿಟ್ಟಾಗಿನ ತರಗತಿ Standard at which dropped out from school	ಶಾಲೆ ಬಿಟ್ಟಾಗಿನ ವಯಸ್ಸು Age at which discontinued the School	ಶಾಲೆ ಬಿಡಲು ಕಾರಣ Reasons for dropout from school *	17 ರಿಂದ 40 ವರ್ಷದವರು ಶಿಕ್ಷಣ ಮುಂದುವರಿಸದಿರಲು ಕಾರಣ Reasons for not continuing Education among those In the age group of 17 to 40 years. *	ಅನಕ್ಷರಸ್ಥರಾಗಿದ್ದರೆ ಕಾರಣ If illiterate, Reasons *
1	14	15	16	17	18	19	20	21	22	23
1										
2										
3										
4										
5										
6										
7										
8										
9										
10										

ವಿ.ಸೂ. : * ಸಂಕೇತ ಸಂಖ್ಯೆ ಪಟ್ಟಿ ಪ್ರಕಾರ ಮಾಹಿತಿ ದಾಖಲಿಸುವುದು. Note : * Enter the information as per Code List.

ನಮೂನೆ–3 ಕುಟುಂಬದ ಅನುಸೂಚಿ

Form-3 House hold schedule

ಕುಟುಂಬ ಕ್ರಮ ಸಂಖ್ಯೆ

ಕುಟುಂಬದ ಮುಖ್ಯಸ್ಥರ ಹೆಸರು:

ಉದ್ಯೋಗ : Employment

ನಮೂನೆ-3 ಕುಟುಂಬದ ಅನುಸೂಚಿ

Form-3 House hold schedule

ಕುಟುಂಬ ಕ್ರಮ ಸಂಖ್ಯೆ [ ]

ಕುಟುಂಬದ ಮುಖ್ಯಸ್ಥರ ಹೆಸರು: ....

	ಉದ್ಯೋಗ : Employment			ಸಾಂಪ್ರದಾಯಿಕ ಕಸುಬುಗಳ ವಿವರ						
	ನೀವು ಕೂಲಿ ಕೆಲಸ ಮಾಡುತ್ತಿದ್ದೀರಾ? Are you presently working? *	ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ಸೇವೆ / ಉದ್ಯೋಗ (ಮಾಸಿಕ ವೇತನದ ಮೇಲೆ) Service / Employment in Govt. / Pvt. Sectors (On Monthly Salary Basis) *	ನೀವು ತೊಡಗಿರುವ ಕೂಲಿ ಉದ್ಯೋಗ/ ವ್ಯಾಪಾರ (ಸ್ವಂತ ಉದ್ಯೋಗ) ಯಾವುದು? What is your Present Occupation / Business? (Self employment) *	ನಿಮ್ಮ ಕುಟುಂಬದ ಕುಲ ಕಸುಬು ಯಾವುದು? What is your Traditional family Occupation? *	ಸದರಿ ಕಸುಬು ಮುಂದು ವರೆದಿದೆಯೇ? (ಹೌದು-1 ಇಲ್ಲ-2) Whether the occupation continued (Yes-1 No-2)	ಸದರಿ ಕಸುಬಿನಿಂದ ಬಂದ ಖಾಯಿಲೆಗಳು Diseases due to the occupation *	ಅಸಂಘಟಿತ ಕ್ಷೇತ್ರದಲ್ಲಿಯ ದಿನಗೂಲಿ ಕೆಲಸಗಾರರು Daily wage workers in un-organised sector *	ವಾರ್ಷಿಕ ಆದಾಯ Annual Income *	ಆದಾಯ ತೆರಿಗೆ ಪಾವತಿದಾರರೇ? (ಹೌದು-1 ಇಲ್ಲ-2) Are you Income Tax payer? (Yes-1 No-2)	ನೀವು ಬ್ಯಾಂಕ್ ಅಕೌಂಟ್ ಹೊಂದಿದ್ದೀರಾ? (ಹೌದು-1 ಇಲ್ಲ-2) Do you have Bank Account? (Yes-1 No-2)
1	24	25	26	27	28	29	30	31	32	33
1										
2										
3										
4										
5										
6										
7										
8										
9										
10										

ವಿ.ಸೂ. : * ಸಂಕೇತ ಸಂಖ್ಯೆ ಪಟ್ಟಿ ಪ್ರಕಾರ ಮಾಹಿತಿ ದಾಖಲಿಸುವುದು. Note : * Enter the information as per Code List.

ನಮೂನೆ-3 ಕುಟುಂಬದ ಅನುಸೂಚಿ

ಕುಟುಂಬ ಕ್ರಮ ಸಂಖ್ಯೆ

Form-3 House hold schedule

ಕುಟುಂಬದ ಮುಖ್ಯಸ್ಥರ ಹೆಸರು: ....

	ಮೀಸಲಾತಿ ನೀತಿಯಿಂದ ಪಡೆದಿರುವ ಸೌಲಭ್ಯಗಳು Benefits derived from reservation policy				ರಾಜಕೀಯ ಪ್ರಾತಿನಿಧ್ಯ Political Representation	
	ಶೈಕ್ಷಣಿಕ ಸೌಲಭ್ಯಗಳು Educational Benefits *	ಉದ್ಯೋಗ ಸೌಲಭ್ಯಗಳು Job Benefits *	ನೀವು ಜಾತಿ ಪ್ರಮಾಣ ಪತ್ರ ಪಡೆದಿರುತ್ತೀರಾ? (ಹೌದು-1 ಇಲ್ಲ-2) Whether Caste Certificate obtained? (Yes-1 No-2)	ಅಲೆಮಾರಿ / ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ್ದೀರಾ? (ಹೌದು-1 ಇಲ್ಲ-2) Do you belong to Nomadic / Semi Nomadic Tribe? (Yes-1 No-2)	ಜನ ಪ್ರತಿನಿಧಿಗಳಾಗಿದ್ದಲ್ಲಿ / ಪದಾಧಿಕಾರಿ ಯಾಗಿದ್ದಲ್ಲಿ ವಿವರಗಳು If people's Representative / Office bearer : Details *	ನಿಗಮ – ಮಂಡಳಿ / ಸಹಕಾರಿ ಸಂಘ/ ಸರ್ಕಾರೇತರ ಸಂಸ್ಥೆಗಳಲ್ಲಿ ಸದಸ್ಯ/ ಪದಾಧಿಕಾರಿಯಾಗಿದ್ದಲ್ಲಿ ವಿವರಗಳು If Member/Office bearer in Corporation – Board / Co-operative Society / Non-Govt. Organization/ Associations: Details *
1	34	35	36	37	38	39
1						
2						
3						
4						
5						
6						
7						
8						
9						
10						

ವಿ.ಸೂ. : * ಸಂಕೇತ ಸಂಖ್ಯೆ ಪಟ್ಟಿ ಪ್ರಕಾರ ಮಾಹಿತಿ ದಾಖಲಿಸುವುದು. Note : * Enter the information as per Code List.

ನಮೂನೆ-3 ಕುಟುಂಬ ಅನುಸೂಚಿ Form – 3 Household Schedule

ಕುಟುಂಬ ಕ್ರಮ ಸಂಖ್ಯೆ :

ಕುಟುಂಬದ ಮುಖ್ಯಸ್ಥರ ಹೆಸರು: ....

ಭಾಗ-II ಕುಟುಂಬದ ವಿವರಗಳು Part- II Household Details

No.	Item						
40	ಕುಟುಂಬವು ಹೊಂದಿರುವ ಒಟ್ಟು ಜಮೀನು (ಕುಟುಂಬದ ಎಲ್ಲ ಸದಸ್ಯರಿಗೆ ಸೇರಿದಂತೆ) Total Land Holdings of the House hold (Pertaining to all members of the family)					ನೀರಾವರಿಯ ಮೂಲ Source of Irrigation *	ಪ್ರಮುಖ ಬೆಳೆಗಳು Major crops *
	ಜಮೀನಿನ ವಿಧ / Type of Land	ಸ್ವಾಧೀನತೆಯ ರೀತಿ How Acquired ? *	ವಿಸ್ತೀರ್ಣ: ಎಕರೆ Acres	ಗುಂಟೆ Gunta	ಸೆಂಟ್ Cents		
	I	II	III	IV	V	VI	VII
	ಖುಷ್ಕಿ / Dry						
	ತರಿ / Wet						
	ಭಾಗಾಯ್ತು / Garden						
	ಪ್ಲಾಂಟೇಷನ್ / Plantation						
	ಇತರೆ / Others						
	ಒಟ್ಟು / Total						
41	ಕುಟುಂಬದ ಸಾಲ * House hold loan	ಎ-A ಉದ್ದೇಶ Purpose					
		ಬಿ-B ಮೂಲ Source					
42	ಕೃಷಿ-ಸಂಬಂಧಿತ ಚಟುವಟಿಕೆಗಳು Allied Agricultural Activities *						

No.	Item				
43	ಕುಟುಂಬ ಹೊಂದಿರುವ ಜಾನುವಾರುಗಳು Livestock owned by family	ಹಸು, ಎತ್ತು, ಎಮ್ಮೆ, ಕೋಣ Cow, Oxen, Buffalo	ಕುರಿ, ಆಡು / ಮೇಕೆ Sheep, Goat	ಕೋಳಿ, ಬಾತುಕೋಳಿ Poultry birds, Ducks	ಹಂದಿ Pigs
	ಸಂಖ್ಯೆ / Number				

No.	Item	
44	ಕುಟುಂಬವು ಹೊಂದಿರುವ ಸ್ಥಿರಾಸ್ತಿ (ಕುಟುಂಬದ ಎಲ್ಲ ಸದಸ್ಯರಿಗೆ ಸೇರಿದಂತೆ) Immovable property owned by HH (aggregate for all members of family)	ಸ್ಥಿರಾಸ್ತಿಯ ಸಂಕೇತ ಸಂಖ್ಯೆ Asset Code no. * / ಹೊಂದಿರುವ ಆಸ್ತಿ ಸಂಖ್ಯೆ No. of Assets
45	ಕುಟುಂಬವು ಹೊಂದಿರುವ ಚರಾಸ್ತಿ (ಕುಟುಂಬದ ಎಲ್ಲ ಸದಸ್ಯರಿಗೆ ಸೇರಿದಂತೆ) Movable property owned by HH (aggregate for all members of family)	ಚರಾಸ್ತಿಯ ಸಂಕೇತ ಸಂಖ್ಯೆ Asset Code no. * / ಹೊಂದಿರುವ ಆಸ್ತಿ ಸಂಖ್ಯೆ No. of Assets
46	ಕುಟುಂಬವು ಸರ್ಕಾರದಿಂದ ಪಡೆದ ಸವಲತ್ತುಗಳು (ಕುಟುಂಬದ ಎಲ್ಲ ಸದಸ್ಯರಿಗೆ ಸೇರಿದಂತೆ) * Benefits obtained from Govt. (aggregate for all members of family)	47. ಪಡಿತರ ಚೀಟಿ ಸಂಖ್ಯೆ: Ration Card No.

No.	Item	No.	Item
48	ನೀವು ನೆಲೆಸಿರುವ ಸ್ಥಳ ಎಂತಹುದು. Nature of your dwelling area *	49	ಹಾಲಿ ವಾಸವಿರುವ ಮನೆಯ ಮಾಲೀಕತ್ವದ ಸ್ವರೂಪ Nature of Ownership of your present dwelling area *
50	ವಾಸವಿರುವ ಮನೆಯ ವಿಧ ಹಾಗೂ ಉಪಯೋಗ Type of dwelling House and its usage *	51	ನಿವೇಶನ ಹೊಂದಿದ್ದೀರಾ? Do you own a site? *
52	ಕುಡಿಯುವ ನೀರಿನ ಮೂಲ Source of drinking water *	53	ಶೌಚಾಲಯ ವ್ಯವಸ್ಥೆ Toilet Facility *
54	ಅಡುಗೆಗೆ ಬಳಸುವ ಪ್ರಮುಖ ಇಂಧನ Main fuel used for cooking *	55	ದೀಪದ ಮೂಲ Source of lighting *

ವಿ.ಸೂ. : * ಸಂಕೇತ ಸಂಖ್ಯೆ ಪಟ್ಟಿ ಪ್ರಕಾರ ಮಾಹಿತಿ ದಾಖಲಿಸುವುದು. Note : * Enter the information as per code list.

"ಸಮೀಕ್ಷೆಯಲ್ಲಿ ನೀಡಿರುವ ಮಾಹಿತಿಗಳು ನನಗೆ ತಿಳಿದಿರುವಂತೆ ಸತ್ಯವಾಗಿರುತ್ತದೆಯೆಂದು ಘೋಷಿಸುತ್ತೇನೆ"

"I hereby declare that the information provided to the enumerator are true to the best of my knowledge"

ಕುಟುಂಬ ಮುಖ್ಯಸ್ಥ / ಮಾಹಿತಿದಾರರ ಹೆಸರು ಮತ್ತು ಸಹಿ, ದಿನಾಂಕ:
Name and Signature of the Head of the Family / Informer with Date
ಮೊಬೈಲ್ ಸಂಖ್ಯೆ :

ಗಣತಿದಾರರ ಹೆಸರು ಮತ್ತು ಸಹಿ, ದಿನಾಂಕ:
Name and Signature of the Enumerator with Date
ಮೊಬೈಲ್ ಸಂಖ್ಯೆ:

ಮೇಲ್ವಿಚಾರಕರ ಹೆಸರು ಮತ್ತು ಸಹಿ, ದಿನಾಂಕ:
Name and Signature of the Supervisor with Date
ಮೊಬೈಲ್ ಸಂಖ್ಯೆ:

ಹೆಚ್ಚುವರಿ ನಮೂನೆ-3ನ್ನು ಬಳಸಿದ್ದಲ್ಲಿ ಅದರ ಅನುಕ್ರಮ ಸಂಖ್ಯೆಯನ್ನು ನಮೂದಿಸುವುದು

ಕರ್ನಾಟಕ ಸರ್ಕಾರ

Government of Karnataka

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ – ಬೆಂಗಳೂರು

KARNATAKA STATE COMMISSION FOR BACKWARD CLASSES – BANGALORE

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ Social and Educational Survey

ಅನುಬಂಧ– 2

ನಮೂನೆ–3 ಕುಟುಂಬದ ಅನುಸೂಚಿಯನ್ನು ಭರ್ತಿ ಮಾಡಲು ಬಳಸಬೇಕಾದ ಕಾಲಂವಾರು ಸಂಕೇತ ಸಂಖ್ಯೆಗಳು

Form-3 House Hold Schedule : Coloumnwise Code Numbers

ಕಾಲಂ 3 **Col. No.3** ಕುಟುಂಬದ ಮುಖ್ಯಸ್ಥರೊಂದಿಗೆ ಸಂಬಂಧ	
ಮುಖ್ಯಸ್ಥರು – Head of the Household	01
ತಂದೆ – Father	02
ತಾಯಿ – Mother	03
ಗಂಡ –Husband	04
ಹೆಂಡತಿ – Wife	05
ಮಗ –Son	06
ಮಗಳು – Daughter	07
ಸಹೋದರ –Brother	08
ಸಹೋದರಿ – Sister	09
ಸೊಸೆ – Daughter in Law	10
ಅಳಿಯ – Son in Law	11
ಮಾವ – Father in Law	12
ಅತ್ತೆ - Mother in Law	13
ಮೊಮ್ಮಗ – Grand Son	14
ಮೊಮ್ಮಗಳು – Grand Daughter	15
ಭಾವ – Brother in Law	16
ಅತ್ತಿಗೆ - Sister in Law	17
ಚಿಕ್ಕಪ್ಪ / ದೊಡ್ಡಪ್ಪ –Uncle	18
ಚಿಕ್ಕಮ್ಮ / ದೊಡ್ಡಮ್ಮ – Aunty	19
ಅಜ್ಜ – Grand Father	20
ಅಜ್ಜಿ – Grand Mother	21
ನಾದಿನಿ – Niece	22
ಮೈದುನ – Nephew	23
ಸಂಬಂಧವಲ್ಲದ –Un related persons	24
ಇತರೆ – Others	00

ಕಾಲಂ : 4 **Col. No.4** ಲಿಂಗ	
ಗಂಡು / Male	1
ಹೆಣ್ಣು / Female	2
ತೃತೀಯ ಲಿಂಗ / Third Gender	3

ಕಾಲಂ 5 – **Col. No.5** ಧರ್ಮ	
ಹಿಂದು /Hindu	01
ಇಸ್ಲಾಂ / Islam	02
ಕ್ರೈಸ್ತ / Christian	03
ಜೈನ್ / Jain	04
ಸಿಖ್ / Sikh	05
ಬೌದ್ಧ / Buddhist	06
ಪಾರ್ಸಿ / Parsi	07
ನಾಸ್ತಿಕ / Atheist	08
ಗೊತ್ತಿಲ್ಲ –Not Known	09
ತಿಳಿಸಲು ನಿರಾಕರಿಸಿರುತ್ತಾರೆ– Refused to state	10
ಇತರೆ / Others	00

ಕಾಲಂ 6, 7 ಮತ್ತು 8 Col. No.6, 7 & 8

ಜಾತಿ, ಉಪಜಾತಿ, ಪರ್ಯಾಯ ಜಾತಿಗಳು

ಪ್ರತ್ಯೇಕ ಜಾತಿಪಟ್ಟಿ (ಅನುಬಂಧ-3 A, 3 B ಹಾಗೂ 3 C) ರಲ್ಲಿಯ ಸಂಕೇತಗಳನ್ನು ನೋಡುವುದು. ಹಿಂದುಳಿದ ಹಾಗೂ ಇತರ ಜಾತಿಗಳನ್ನು ಅನುಬಂಧ-3 'A', ಪರಿಶಿಷ್ಟ ಜಾತಿಗಳನ್ನು ಅನುಬಂಧ-3 'B' ಹಾಗೂ ಪರಿಶಿಷ್ಟ ಪಂಗಡಗಳನ್ನು ಅನುಬಂಧ-3 'C', ದಲ್ಲಿ ಪಟ್ಟಿ ಮಾಡಲಾಗಿದೆ. ಜಾತಿ ಪಟ್ಟಿಯಲ್ಲಿ ಇರುವ ಜಾತಿಗಳಲ್ಲದೆ ಕೆಲವು ಕುಟುಂಬಗಳು ಪಟ್ಟಿಯಲ್ಲಿಲ್ಲದ ಬೇರೆ ಜಾತಿ / ಉಪಜಾತಿಗಳಿಗೆ ಸೇರಿದ್ದಲ್ಲಿ ಅಂತಹ ಕುಟುಂಬಗಳನ್ನು ಇತರೆ "00000" ಸಂಕೇತ ಸಂಖ್ಯೆಯ ಮೂಲಕ ದಾಖಲಿಸುವುದು. ಹಾಗೆ ದಾಖಲಿಸಿದ ನಂತರ ಆ ಜಾತಿ / ಉಪಜಾತಿಯ ಹೆಸರನ್ನು ನಮೂನೆ-3ರ ಮೊದಲನೆ ಪುಟದ ಕೊನೆಭಾಗದಲ್ಲಿ ಒದಗಿಸಿರುವ "@" ಸಂಜ್ಞೆಯಿರುವ "ಇತರೆ" ಅಂಕಣದಲ್ಲಿ ಸ್ಪಷ್ಟವಾಗಿ ಬರೆಯುವುದು. ಇಂಥಹ ಸಂದರ್ಭಗಳಲ್ಲಿ ಕಾಲಂ ನಂ.8 ರಲ್ಲಿಯ 3 ಬಾಕ್ಸ್‌ಗಳು ಅನ್ವಯವಾಗುವುದಿಲ್ಲವೆಂದು ಪರಿಗಣಿಸಿ XXX ಎಂದು ನಮೂದಿಸುವುದು. ಒಂದು ವೇಳೆ ಯಾವುದೇ ವ್ಯಕ್ತಿಯು ತಾನು ಯಾವುದೇ ಜಾತಿಗೆ ಸೇರಿಲ್ಲ ಅಥವಾ "ಜಾತಿರಹಿತ" ಎಂದು ಹೇಳಿದರೆ ಸಂಕೇತ ಸಂಖ್ಯೆ "22222" ದಿಂದ ದಾಖಲಿಸಬೇಕು. ಜಾತಿ ಗೊತ್ತಿಲ್ಲವೆಂದು ಹೇಳಿದರೆ ಸಂಕೇತ ಸಂಖ್ಯೆ "33333" ದಿಂದ ದಾಖಲಿಸುವುದು. ಜಾತಿಯನ್ನು ತಿಳಿಸಲು ನಿರಾಕರಿಸಿದರೆ ಸಂಕೇತ ಸಂಖ್ಯೆ "44444" ನ್ನು ದಾಖಲಿಸಬೇಕು.

ಕುಟುಂಬದ ಸದಸ್ಯರಿಗೆ ಅನ್ವಯಿಸುವ ಜಾತಿಯನ್ನು ಇನ್ನಿತರ ಯಾವ ಹೆಸರುಗಳಿಂದ ಕರೆಯಲಾಗುತ್ತಿದೆ ಎಂಬ ಮಾಹಿತಿಯನ್ನು ಕಾಲಂ-8ರಲ್ಲಿ ಸಂಕೇತ ಸಂಖ್ಯೆಗಳ ಮೂಲಕ ನಮೂದಿಸುವುದು. ಪ್ರಮುಖ ಹೆಸರುಗಳನ್ನು ಮಾತ್ರ ನಮೂದಿಸಿ ಅವುಗಳ ಸಂಖ್ಯೆ ಗರಿಷ್ಟ 3ಕ್ಕೆ ಮೀರದಂತೆ ನೋಡಿಕೊಳ್ಳುವುದು.

ಉಲ್ಲೇಖಿಸಬೇಕಾದ ಅನುಬಂಧಗಳು ಹಾಗೂ ವಿಶೇಷ ಸಂದರ್ಭಗಳಲ್ಲಿ ದಾಖಲಿಸಬೇಕಾದ ಸಂಕೇತ ಸಂಖ್ಯೆಗಳು

1	ಹಿಂದುಳಿದ ಹಾಗೂ ಇತರ ಜಾತಿ	ಅನುಬಂಧ-3 A ಕ್ರ.ಸಂ: 0001 ರಿಂದ 1351
2	ಅನುಸೂಚಿತ ಜಾತಿ	ಅನುಬಂಧ-3 B ಕ್ರ.ಸಂ: 001 ರಿಂದ 101
3	ಅನುಸೂಚಿತ ಪಂಗಡ	ಅನುಬಂಧ-3 C ಕ್ರ.ಸಂ: 01 ರಿಂದ 51
4	ಇತರೆ ಜಾತಿ (ಅನುಬಂಧ-3 A, 3 B ಹಾಗೂ 3 C ಸೇರ್ಪಡೆಯಾಗಿರದಿದ್ದಲ್ಲಿ)	**00000** (ಅಂತಹ ಜಾತಿ/ಉಪಜಾತಿಯನ್ನು ನಮೂನೆ-3ರ ಮೊದಲ ಪುಟದ ಕೊನೆಭಾಗದಲ್ಲಿ @ ಸಂಜ್ಞೆಯಿರುವ ಅಂಕಣದಲ್ಲಿ ಸ್ಪಷ್ಟವಾಗಿ ಬರೆಯುವುದು)
5	ಯಾವುದೇ ಜಾತಿಗೆ ಸೇರಿಲ್ಲ ಅಥವಾ ನಾನು ಜಾತಿ ರಹಿತ ಎಂದು ಹೇಳಿದ ಸಂದರ್ಭದಲ್ಲಿ	**22222**
6	ನನ್ನ ಜಾತಿ ಯಾವುದು ಎಂದು ಗೊತ್ತಿಲ್ಲವೆಂದು ಹೇಳಿದ ಸಂದರ್ಭದಲ್ಲಿ	**33333**
7	ತನ್ನ ಜಾತಿಯನ್ನು ತಿಳಿಸಲು ನಿರಾಕರಿಸಿದ ಸಂದರ್ಭದಲ್ಲಿ	**44444**

ಕಾಲಂ 9 Col. No.9 ಪೂರ್ಣಗೊಂಡ ವಯಸ್ಸು

ಪೂರ್ಣಗೊಂಡ ವಯಸ್ಸು ನಮೂದಿಸಿ, ಒಂದು ವರ್ಷದ ಒಳಗಿನ ಶಿಶುವಿಗೆ "00" ನಮೂದಿಸಿ. ವಯಸ್ಸನ್ನು ನಮೂದಿಸುವಾಗ 01, 02, 99, 100 ಇತ್ಯಾದಿ ಎಂದು ನಮೂದಿಸುವುದು.

Indicate completed years. In case of child below one year indicate "00"

ಕಾಲಂ 10 Col. No.10
ಮಾತೃಭಾಷೆ

ಕನ್ನಡ – Kannada	01
ಹಿಂದಿ – Hindi	02
ಉರ್ದು – Urdu	03
ತೆಲುಗು – Telugu	04
ತಮಿಳು – Tamil	05
ಮರಾಠಿ – Marathi	06
ಮಲೆಯಾಳಂ – Malayalam	07
ಆಂಗ್ಲ – English	08
ಕೊಡವ – Kodava	09
ಕೊಂಕಣಿ – Konkani	10
ತುಳು – Tulu	11
ಬ್ಯಾರಿ –Byari	12
ಅರೆಭಾಷೆ –Arebhashe `	13
ಇತರೆ – Others	00

ಕಾಲಂ : 11 Col. No.11 ಆಧಾರ್ ಕಾರ್ಡ್ ಸಂಖ್ಯೆ

ರಾಜ್ಯದಲ್ಲಿ ಬಹುತೇಕ ಜನರಿಗೆ ಆಧಾರ್ ಕಾರ್ಡ್‌ನ್ನು ವಿತರಿಸಲಾಗಿರುತ್ತದೆ. ಒಬ್ಬ ವ್ಯಕ್ತಿಯನ್ನು ಸ್ಪಷ್ಟವಾಗಿ ಗುರುತಿಸಬಹುದಾದ ವಿಶಿಷ್ಟ ಗುರುತಿನ ಸಂಖ್ಯೆ (**Unique Identity**) ಇದಾಗಿದ್ದು, 12 ಸಂಖ್ಯೆಗಳನ್ನು ಹೊಂದಿರುತ್ತದೆ. ಕಾಲಂನಲ್ಲಿ ಒದಗಿಸಿರುವ ಸ್ಥಳದಲ್ಲಿ ಆಧಾರ್ ಕಾರ್ಡಿನ ಸಂಖ್ಯೆಯನ್ನು ಸ್ಪಷ್ಟವಾಗಿ ನಮೂದಿಸುವುದು.

ಕಾಲಂ : 12 Col. No.12
ಚುನಾವಣಾ ಆಯೋಗದ ಗುರುತಿನ ಚೀಟಿ

ಭಾರತ ಚುನಾವಣಾ ಆಯೋಗವು ನೀಡಿರುವ ಗುರುತಿನ ಚೀಟಿಯ ಸಂಖ್ಯೆಯನ್ನು ಸದಸ್ಯರ ಹೆಸರ ಮುಂದೆ ನಮೂದಿಸುವುದು.

ಕಾಲಂ 13 Col. No.13 ನೀವು ಅಂಗವಿಕಲರೇ?

ಅಂಧತ್ವ – Blind	01
ಕಿವುಡು – Deaf	02
ಮೂಕ –Dumb	03
ಊನ –Crippled	04
ಕುಬ್ಜ –Dwarf	05
ಮಾನಸಿಕ ಮಾಂದ್ಯ/ಬುದ್ಧಿಭ್ರಮಣೆ –Mentally Retarded	06
ಕುಷ್ಠ ರೋಗ – Leprosy	07
ಬಹುವಿಧ ಅಂಗವಿಕಲತೆ –Multiple Disability	08
ಅಂಗವಿಕಲತೆ ಇಲ್ಲ – Not Disabled	09
ಇತರೆ –Others	00

ಕಾಲಂ 14 Col. No.14 ವೈವಾಹಿಕ ಸ್ಥಾನಮಾನ

ಅವಿವಾಹಿತ – Unmarried	01
ಸ್ವಜಾತಿಯಲ್ಲಿ ವಿವಾಹ Marriage within the same Caste	02
ಅಂತರ ಜಾತಿ ವಿವಾಹ–Inter Caste Marriage	03
ಅಂತರ ಧರ್ಮ ವಿವಾಹ–Inter Religion Marriage	04
ವಿಧವೆ –Widow	05
ವಿಧುರ – Widower	06
ವಿಧವಾ ಪುನರ್ ವಿವಾಹ–Widow remarriage	07
ವಿವಾಹ ವಿಚ್ಛೇದನೆ – Divorcee	08
ಗಂಡನಿಂದ ಬೇರೆಯಾಗಿರುವುದು Separated from Husband	09
ಹೆಂಡತಿಯಿಂದ ಬೇರೆಯಾಗಿರುವುದು Separated from Wife	10
ಬಹುಪತ್ನಿತ್ವ – Polygamy	11
ಬಹುಪತಿತ್ವ - Polyandry	12
ಇತರೆ Others	00

ಕಾಲಂ : 15 Col. No.15
ವಿವಾಹ ಆದ ಸಮಯದಲ್ಲಿ ವಯಸ್ಸು

ವಿವಾಹ ಆದ ಸಮಯದಲ್ಲಿನ (ವಿಧವೆ, ವಿಧುರ ಮುಂತಾದವರು ಸೇರಿದಂತೆ) ವಯಸ್ಸು ನಮೂದಿಸಿ. ವಿವಾಹ ಆಗದಿದ್ದಲ್ಲಿ "X" ಎಂದು ನಮೂದಿಸಿ

Indicate age at Marriage (including widow, widower etc.). If not married indicate "X"

ಕಾಲಂ 16 Col.No.16
ಶಾಲೆಗೆ ಸೇರಿದ ಸಮಯದಲ್ಲಿ ವಯಸ್ಸು

ಶಾಲೆಗೆ ಸೇರಿದ ಸಮಯದಲ್ಲಿನ ವಯಸ್ಸು ನಮೂದಿಸಿ. 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಮತ್ತು ಶಾಲೆಗೆ ಸೇರದೆ ಇರುವ 6 ವರ್ಷ ಮೇಲ್ಪಟ್ಟವರಿಗೆ ಸಂಕೇತ "00" ಎಂದು ನಮೂದಿಸಿ

Indicate the age at which joined the school.

Write code "00" for children below the age of 6 and others above the age of 6 who did not join school.

ಕಾಲಂ 17 Col.No.17 ಶಾಲೆಯ ವಿಧ	
ಸರ್ಕಾರಿ (ಕನ್ನಡ ಮಾಧ್ಯಮ) Government (Kannada Medium)	01
ಸರ್ಕಾರಿ (ಆಂಗ್ಲ ಮಾಧ್ಯಮ) Government (English Medium)	02
ಸರ್ಕಾರಿ (ಉರ್ದು ಮಾಧ್ಯಮ) Govt. (Urdu Medium)	03
ಸರ್ಕಾರಿ (ತಮಿಳು ಮಾಧ್ಯಮ) Govt. (Tamil Medium)	04
ಸರ್ಕಾರಿ (ತೆಲುಗು ಮಾಧ್ಯಮ) Govt. (Telugu Medium)	05
ಸರ್ಕಾರಿ (ಮರಾಠಿ ಮಾಧ್ಯಮ) Govt. (Marathi Medium)	06
ಖಾಸಗಿ (ಕನ್ನಡ ಮಾಧ್ಯಮ) Private (Kannada Medium)	07
ಖಾಸಗಿ (ಆಂಗ್ಲ ಮಾಧ್ಯಮ)– Private (English Medium)	08
ಕಾನ್ವೆಂಟ್ – Convent	09
ಖಾಸಗಿ (ಉರ್ದು ಮಾಧ್ಯಮ) Pvt. (Urdu Medium)	10
ಖಾಸಗಿ (ತಮಿಳು ಮಾಧ್ಯಮ) Pvt. (Tamil Medium)	11
ಖಾಸಗಿ (ತೆಲುಗು ಮಾಧ್ಯಮ) Pvt. (Telugu Medium)	12
ಖಾಸಗಿ (ಮರಾಠಿ ಮಾಧ್ಯಮ) Pvt. (Marati Medium)	13
ಮದರಸ/ಸಮಾನಾಂತರ ಶಾಲೆ Madarasa/Similar school	14
ಸಂಸ್ಕೃತ ಶಾಲೆ (ಅನೌಪಚಾರಿಕ) Sanskrit School (Non-informal)	15
ಇತರೆ –Others	00

ಕಾಲಂ 18 Col. No.18 ವಿದ್ಯಾಭ್ಯಾಸದ ವಿವರಗಳು ವಿದ್ಯಾರ್ಹತೆಗೆ ಸಂಬಂಧಿಸಿದಂತೆ 22 ಸಂಕೇತಗಳನ್ನು ನೀಡಿದ್ದು ಅವುಗಳಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ಅನ್ವಯಿಸುವ ಗರಿಷ್ಟ ವಿದ್ಯಾರ್ಹತೆಯ ವಿವರವನ್ನು ಸಂಕೇತ ಸಂಖ್ಯೆಯ ಮೂಲಕ ನಮೂದಿಸುವುದು.	
ಅನಕ್ಷರಸ್ಥ – Illiterate	01
ಅಕ್ಷರಸ್ಥ (ಅನೌಪಚಾರಿಕ ಶಿಕ್ಷಣ) Literate (informal schooling)	02
ಪ್ರಾಥಮಿಕ (ತರಗತಿ 1–4) Primary (Standard 1 to 4)	03
ಮಾಧ್ಯಮಿಕ (ತರಗತಿ 5–7) Middle (Standard 5 to 7)	04
ಪ್ರೌಢಶಿಕ್ಷಣ (ತರಗತಿ 8–10) High School (Standard 8 to 10)	05
ಎಸ್.ಎಸ್.ಎಲ್.ಸಿ (10ನೇ ತರಗತಿ) ತೇರ್ಗಡೆ SSLC Passed (10th Std)	06
ಪದವಿ ಪೂರ್ವ ತೇರ್ಗಡೆ –PUC Passed	07
ಸರ್ಟಿಫಿಕೇಟ್ ಕೋರ್ಸ್‌ಗಳು ತೇರ್ಗಡೆ – Certificate Courses Passed	08
ಡಿಪ್ಲೋಮ ತೇರ್ಗಡೆ – Diploma Passed	09
ಪದವಿ (ಸಾಮಾನ್ಯ) ತೇರ್ಗಡೆ – Graduation (General) Passed	10
ಪದವಿ–ತಾಂತ್ರಿಕ ತೇರ್ಗಡೆ (ಕೃಷಿ, ಪಶು ಸಂಗೋಪನೆ, ಇತ್ಯಾದಿ) – Graduation-Technical Passed (Agriculture, veterinary etc.,)	11
ಪದವಿ (ಕಾನೂನು) ತೇರ್ಗಡೆ –Degree (Law) Passed	12
ಸ್ನಾತಕೋತ್ತರ –ತಾಂತ್ರಿಕ (ಕೃಷಿ, ಪಶು ಸಂಗೋಪನೆ ಇತ್ಯಾದಿ) ತೇರ್ಗಡೆ Post Graduation-Technical (Agriculture, veterinary etc.,) Passed	13
ಸ್ನಾತಕೋತ್ತರ –ಸಾಮಾನ್ಯ (ಎಂ.ಎ, ಎಂಕಾಂ, ಎಂ.ಎಸ್.ಸಿ ಇತ್ಯಾದಿ) ತೇರ್ಗಡೆ Post Graduation-General (M.A, M.Com, MSc. etc.,) Passed	14
ಎಂ.ಬಿ.ಬಿ.ಎಸ್ ತೇರ್ಗಡೆ –MBBS Passed	15
ಬಿ.ಡಿ.ಎಸ್. ತೇರ್ಗಡೆ – B.D.S Passed	16
ಆಯುರ್ವೇದ / ಹೋಮಿಯೋಪತಿ / ಇತರ ಭಾರತೀಯ ವೈದ್ಯ ಪದ್ಧತಿ ತೇರ್ಗಡೆ Ayurveda / Homeopathy / Other Indian Systems of Medicine Passed	17
ಬಿ.ಇ ತೇರ್ಗಡೆ – B.E Passed	18
ಎಂ.ಡಿ/ಎಂ.ಎಸ್(ವೈದ್ಯಕೀಯ)/ಎಂ.ಡಿ.ಎಸ್ ತೇರ್ಗಡೆ M.D/M.S(Medical) /MDS Passed	19
ಎಂ.ಇ / ಎಂ.ಟೆಕ್/ ಎಂ.ಎಸ್. / ಎಂಸಿಹೆಚ್ ತೇರ್ಗಡೆ M.E / M.Tech / M.S / MCH Passed	20
ಎಂ.ಬಿ.ಎ. / ಎಂ.ಸಿ.ಎ ತೇರ್ಗಡೆ M.B.A / M.C.A Passed	21
ಪಿ.ಹೆಚ್.ಡಿ ಪ್ರಧಾನ –PhD Awarded	22
ಇತರೆ – Others	00

ಕಾಲಂ : 19 Col. No.19
ಶಾಲೆ ಬಿಟ್ಟಾಗಿನ ತರಗತಿ

ಶಾಲೆ ಬಿಟ್ಟಾಗಿನ ತರಗತಿಯನ್ನು ನಮೂದಿಸುವುದು.
Indicate standard at which dropped out from school

ಕಾಲಂ : 20 Col. No.20
ಶಾಲೆ ಬಿಟ್ಟಾಗಿನ ವಯಸ್ಸು

ಶಾಲೆ ಬಿಟ್ಟಾಗಿನ ವಯಸ್ಸನ್ನು ನಮೂದಿಸುವುದು.
Indicate age at which discontinued the school

ಕಾಲಂ 21 Col. No.21
ಶಾಲೆ ಬಿಡಲು ಕಾರಣ

ಬಡತನ / ಆರ್ಥಿಕ ಸಮಸ್ಯೆ Poverty / Financial problem	01
ಶಿಕ್ಷಣ ಸಂಸ್ಥೆ ದೂರ– School is far away	02
ಶಾಲಾ ಸಮಯ ಅನಾನೂಕೂಲ Inconvenient School timing	03
ಶಿಕ್ಷಕರ ಭಯ–Fear of Teachers	04
ಶಿಕ್ಷಕರು ಸರಿಯಾಗಿ ಹಾಜರಾಗದಿರುವುದು Teachers not punctual	05
ಭೋಧನ ಗುಣಮಟ್ಟದ ಕೊರತೆ Low quality of teaching	06
ಪಾಠ ಅರ್ಥವಾಗದೇ ಇರುವುದು Difficulty in following teaching	07
ವ್ಯಾಸಂಗದಲ್ಲಿ ಆಸಕ್ತಿ ಇಲ್ಲ Not interested in studies	08
ಪೋಷಕರಿಗೆ ಇಷ್ಟವಿಲ್ಲ–Parents not interested	09
ಮನೆ ಕೆಲಸ / ಕೃಷಿ ಕೆಲಸ Domestic Work / Agricultural work	10
ಉದ್ಯೋಗ ಭರವಸೆ ಇಲ್ಲವೆಂದು No guarantee of Employment	11
ತಮ್ಮ / ತಂಗಿಯರನ್ನು ನೋಡಿಕೊಳ್ಳಲು To look after siblings	12
ಅನಾರೋಗ್ಯ / ಅಂಗವಿಕಲತೆ – illhealth / Disability	13
ಲಿಂಗಭೇದ–Gender Discrimination	14
ಅಲೆಮಾರಿತನ–Nomadic	15
ವಲಸೆ–Migration	16
ಶಾಲೆಯಲ್ಲಿ ಮೂಲಭೂತ ಸೌಲಭ್ಯದ ಕೊರತೆ Deficiency of basic amenities in the School	17
ಶಾಲೆಗೆ ಪ್ರವೇಶ ದೊರಕದಿರುವುದರಿಂದ Non availability of Admission to school	18
ಕೆಲಸ ದೊರಕ್ಕಿದ್ದರಿಂದ – Due to employment	19
ಜಾತಿ ಭೇದ–Caste Discrimination	20
ಬೋಧನಾ ಮಾಧ್ಯಮದ ಸಮಸ್ಯೆ Problem of medium of Instruction	21
ಮದುವೆ–Marriage	22
ಇತರೆ – Others	00

ಕಾಲಂ 22 Col. No.22
17 ರಿಂದ 40 ವರ್ಷದವರು
ಶಿಕ್ಷಣ ಮುಂದುವರಿಸದಿರಲು ಕಾರಣ

ಬಡತನ / ಆರ್ಥಿಕ ಸಮಸ್ಯೆ Poverty / Financial problem	01
ಶಿಕ್ಷಣ ಸಂಸ್ಥೆ ದೂರ – School is far away	02
ಶಾಲಾ ಸಮಯ ಅನಾನೂಕೂಲ Inconvenient School timing	03
ಪಾಠ ಅರ್ಥವಾಗದೇ ಇರುವುದು Difficulty in following teaching	04
ವ್ಯಾಸಂಗದಲ್ಲಿ ಆಸಕ್ತಿ ಇಲ್ಲ– Not interested in Studies	05
ಪೋಷಕರಿಗೆ ಇಷ್ಟವಿಲ್ಲ–Parents not interested	06
ಮನೆ ಕೆಲಸ / ಕೃಷಿ ಕೆಲಸ Domestic Work/Agricultural work	07
ತಮ್ಮ / ತಂಗಿಯರನ್ನು ನೋಡಿಕೊಳ್ಳಲು– To look after siblings	08
ಅನಾರೋಗ್ಯ / ಅಂಗವಿಕಲತೆ–Ill health / Disability	09
ಲಿಂಗಭೇದ–Gender Discrimination	10
ಅಲೆಮಾರಿತನ–Nomadic	11
ಶಿಕ್ಷಣ ಮುಗಿಸಿದ ನಂತರ ಉದ್ಯೋಗ ಸಿಗುವ ಭರವಸೆ ಇಲ್ಲದಿರುವುದರಿಂದ–No Assurance of gainfull employment after education	12
ಕೆಲಸ ದೊರಕಿದ್ದರಿಂದ –Due to employment	13
ಮದುವೆಯಾಗಿರುವುದರಿಂದ –Marriage	14
ವೃತ್ತಿ ಪರ ಕೋರ್ಸುಗಳಿಗೆ ಪ್ರವೇಶ ಸಿಗದಿರುವ ಕಾರಣ Since admission was not available to professional courses`	15
ಇತರೆ–Others	00

ಕಾಲಂ 23 Col. No.23
ಅನಕ್ಷರಸ್ಥರಾಗಿದ್ದರೆ ಕಾರಣ

ಬಡತನ / ಆರ್ಥಿಕ ಸಮಸ್ಯೆ Poverty / Financial problem	01
ಶಾಲೆ ಇಲ್ಲದಿರುವುದರಿಂದ – Lack of school	02
ಪೋಷಕರಿಗೆ ಇಷ್ಟವಿಲ್ಲ – Parents not interested	03
ಮನೆ ಕೆಲಸ / ಕೃಷಿ ಕೆಲಸ Domestic Work / Agricultural work	04
ತಮ್ಮ / ತಂಗಿಯರನ್ನು ನೋಡಿಕೊಳ್ಳಬೇಕಾದ್ದರಿಂದ To look after the siblings	05
ಲಿಂಗಭೇದ – Gender Discrimination	06
ಕುಟುಂಬದ ವಲಸೆ – Migration of family	07
ಅಂಗವಿಕಲತೆ – Disability	08
ಜಾತಿ ಭೇದ – Caste Discrimination	09
ಇತರೆ –Others	00

ಕಾಲಂ : 24 Col. No.24
ನೀವು ಹಾಲಿ ಕೆಲಸ ಮಾಡುತ್ತಿದ್ದೀರಾ?

ಕೆಲಸ ಮಾಡುತ್ತಿದ್ದೇನೆ – Working	01
ಗೃಹಿಣಿ – Housewife	02
ಕೆಲಸ ಸಿಕ್ಕಿಲ್ಲ – Job not found	03
ಸ್ವ ಇಚ್ಛಾ ನಿರುದ್ಯೋಗಿ–Voluntary unemployment	04
ಕೆಲಸ ಮಾಡುವ ಸಾಮರ್ಥ್ಯವಿಲ್ಲ–Unable to work	05
ವ್ಯಾಸಂಗ ಮಾಡುತ್ತಿರುವುದರಿಂದ ಕೆಲಸ ಮಾಡುತ್ತಿಲ್ಲ Not working since engaged in studies	06
ಉದ್ಯೋಗ ಅನಾವಶ್ಯ–Employment not required	07
ಇತರೆ – Others	00

ಕಾಲಂ 25 Col. No.25
ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ಸೇವೆ / ಉದ್ಯೋಗ (ಮಾಸಿಕ ವೇತನ/ಪಿಂಚಣಿಯ ಮೇಲೆ)

ವಿಶಿಷ್ಟ ಹುದ್ದೆ / ಸ್ಥಾನಗಳಲ್ಲಿ ಸೇವೆ ಸಲ್ಲಿಸುತ್ತಿರುವವರು Persons in Serving in Special Positions	
ರಾಜ್ಯಪಾಲರು / ಮುಖ್ಯಮಂತ್ರಿ Governor/ Chief Minister	01
ಸುಪ್ರಿಂಕೋರ್ಟ್ / ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ / ನ್ಯಾಯಮೂರ್ತಿಗಳು Supreme Court / High Court – Chief Justice / Judges	02
ಸಾಂವಿಧಾನಿಕ / ಶಾಸನಬದ್ಧ ಆಯೋಗಗಳಲ್ಲಿ ಅಧ್ಯಕ್ಷರು / ಸದಸ್ಯರು Constitutional / Statutory Commissions – Presiding Officers / Members	03
ಕೇಂದ್ರ ಸರ್ಕಾರದ ಸೇವೆ – Central Govt. Service	
ಗುಂಪು 'ಎ' Group 'A'	04
ಗುಂಪು 'ಬಿ' Group 'B'	05
ಗುಂಪು 'ಸಿ' Group 'C'	06
ಗುಂಪು 'ಡಿ' Group 'D'	07
ಕೇಂದ್ರ ಸರ್ಕಾರದ ನಿಗಮ/ಮಂಡಳಿ/ಸಂಸ್ಥೆಗಳಲ್ಲಿ ಸೇವೆ Service in Boards/Corp/Institutions in Central Government	
ಗುಂಪು 'ಎ' Group 'A'	08
ಗುಂಪು 'ಬಿ'Group 'B'	09
ಗುಂಪು 'ಸಿ'Group 'C'	10
ಗುಂಪು 'ಡಿ'Group 'D'	11
ರಾಜ್ಯ ಸರ್ಕಾರದ ಸೇವೆ–State Govt. Service	
ಗುಂಪು 'ಎ' Group 'A'	12
ಗುಂಪು 'ಬಿ'Group 'B'	13
ಗುಂಪು 'ಸಿ'Group 'C'	14
ಗುಂಪು 'ಡಿ'Group 'D'	15
ರಾಜ್ಯ ಸರ್ಕಾರದ ನಿಗಮ/ಮಂಡಳಿ/ಸಂಸ್ಥೆಗಳಲ್ಲಿ ಸೇವೆ Service in Boards/Corp/Institutions in State Government	
ಗುಂಪು 'ಎ' Group 'A'	16
ಗುಂಪು 'ಬಿ' Group 'B'	17
ಗುಂಪು 'ಸಿ' Group 'C'	18
ಗುಂಪು 'ಡಿ' Group 'D'	19
'ಖಾಸಗಿ, ಬಿಪಿಒ ಮತ್ತು ಹೊರಗುತ್ತಿಗೆ ಕಂಪನಿಗಳಲ್ಲಿ ಸೇವೆ Service in Private, BPO & Out Sourcing Company	
ಆಡಳಿತ ವರ್ಗ Administrative Cadre	20
ತಾಂತ್ರಿಕ ವರ್ಗ Technical Cadre	21
ಸಿಬ್ಬಂದಿ ವರ್ಗ General Staff Cadre	22
ಬಹುರಾಷ್ಟ್ರೀಯ ಹಾಗೂ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು Multinational & Information technology Institutions	
ಆಡಳಿತ ವರ್ಗ Administrative Cadre	23
ತಾಂತ್ರಿಕ ವರ್ಗ Technical Cadre	24
ಸಿಬ್ಬಂದಿ ವರ್ಗ General Staff Cadre	25
ಸರ್ಕಾರಿ ಕ್ಷೇತ್ರದಲ್ಲಿ ಗುತ್ತಿಗೆ ಆಧಾರದ ಸೇವೆ Contractual Employment in Govt. Sector	
ಆಡಳಿತ ವರ್ಗ Administrative Cadre	26
ತಾಂತ್ರಿಕ ವರ್ಗ Technical Cadre	27
ಸಿಬ್ಬಂದಿ ವರ್ಗ General Staff Cadre	28
ಸರ್ಕಾರಿ ಕ್ಷೇತ್ರದಲ್ಲಿ ಹೊರಗುತ್ತಿಗೆ ಆಧಾರದ ಸೇವೆ Out Sourced Employment in Govt. Sector	
ಆಡಳಿತ ವರ್ಗ Administrative Cadre	29
ತಾಂತ್ರಿಕ ವರ್ಗ Technical Cadre	30
ಸಿಬ್ಬಂದಿ ವರ್ಗ General Staff Cadre	31
ಪಿಂಚಣಿದಾರರು –Pensioners	
ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಸೇವೆಯಲ್ಲಿ ಗುಂಪು–ಎ ಅಥವಾ ಗುಂಪು–ಬಿ ನಲ್ಲಿ ನಿವೃತ್ತರಾದವರು Central &State Govt Group A & Group B Retired Officers	32
ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಸೇವೆಯಲ್ಲಿ ಗುಂಪು–ಸಿ ಅಥವಾ ಗುಂಪು–ಡಿ ನಲ್ಲಿ ನಿವೃತ್ತರಾದವರು Central &State Govt Group C & Group D Retired Officers	33
ಸರ್ಕಾರದ ನಿಗಮ/ಮಂಡಳಿ/ಸಾರ್ವಜನಿಕ ಉದ್ದಿಮೆಗಳಲ್ಲಿ ನಿವೃತ್ತರಾದವರು Retired from Govt Boards/Corpn /PSU	34
ಇತರೆ – Others	00

ಕಾಲಂ 26ರ ಹಾಲಿ ಉದ್ಯೋಗ / ವ್ಯಾಪಾರ (ಸ್ವಯಂ ಉದ್ಯೋಗ)

Column-26 : Present Occupation / Business (Self Employment)

ಹಾಲಿ ಉದ್ಯೋಗ / ವ್ಯಾಪಾರ	Present Occupation / Business	ಕೋಡ್ ಸಂ.
ಅಗರಬತ್ತಿ ಉತ್ಪಾದಕರು	Agarabatti manufacturing	1
ಅಗರಬತ್ತಿ ಕೆಲಸಗಾರರು	Agarabatti workers	2
ಕೃಷಿ ಯಂತ್ರೋಪಕರಣ ತಯಾರಕರು	Agricultural Implements Makers	3
ಕೃಷಿ ಸಾಗುವಳಿ (ತೋಟಗಾರಿಕೆ, ರೇಷ್ಮೆ ಸೇರಿದಂತೆ)	Agriculture Cultivation (Including Horticulture and Sericulture)	4
ಆರ್ಕಿಟೆಕ್ಟ್	Architect	5
ಕಲಾವಿದ (ಸಂಗೀತಗಾರ, ವಾದ್ಯ, ನಾಟಕ, ನೃತ್ಯ, ಚಿತ್ರಬರಹ ಮತ್ತು ಬಿತ್ತಿ ಚಿತ್ರ ಬಿಡಿಸುವುದು ಮುಂತಾದವು)	Artist (Musicians/ instrumentalists, Drama, Singing, Dancing, Wall screen drawing etc.,)	6
ಜೋತಿಷ್ಯ ಹೇಳುವವರು	Astrologer	7
ಬೇಕರಿ / ಕಾಂಡಿಮೆಂಟ್ಸ್	Bakery / Condiments	8
ಸೌಂದರ್ಯ ವರ್ಧಕರು, ಬ್ಯೂಟಿ ಪಾರ್ಲರ್	Beauticians / Beauty parlor	9
ಬೈಂಡಿಂಗ್	Binding	10
ಇಟ್ಟಿಗೆ ತಯಾರಿಕೆ	Brick making	11
ಮಧ್ಯವರ್ತಿಗಳು (ಏಜೆಂಟ್)	Brokers (Agents)	12
ಕೇಬಲ್ ಟಿವಿ ನಡೆಸುವವರು	Cable TV Operators	13
ಚಾಟರ್ಡ್ ಅಕೌಂಟೆಂಟ್ಸ್ (ತೆರಿಗೆ ಸಲಹೆಗಾರರು)	Chartered Accountants (Tax Consultants)	14
ಬಟ್ಟೆ ಅಂಗಡಿ (ಸಿದ್ಧ ಉಡುಪು ಸೇರಿದಂತೆ)	Cloth shop (including Readymade dresses)	15
ಕಂಪ್ಯೂಟರ್ ಆಪರೇಟರ್ (ಖಾಸಗಿ)	Computer operator (Private)	16
ಕಂಪ್ಯೂಟರ್ ಸರ್ವೀಸ್ ಅಂಗಡಿ	computer service shop	17
ಕಟ್ಟಡ ಸಾಮಗ್ರಿ ಮಾರಾಟಗಾರರು	Construction materials vendors	18
ಕಟ್ಟಡ ಕೆಲಸಗಾರರು (ಗಾರೆ ಕೆಲಸ, ಮೇಸ್ತ್ರಿ, ಬಾರ್‌ಬೆಂಡರ್ ಸೇರಿದಂತೆ)	Construction workers (including Mason / Bar benders etc)	19
ಗುತ್ತಿಗೆದಾರರು (ಕಟ್ಟಡ ನಿರ್ಮಾಣ, ಎಲೆಕ್ಟ್ರಿಕಲ್ ಇತ್ಯಾದಿ)	Contractors (Civil, Electrical etc.)	20
ಅಡಿಗೆಯವರು/ಕೇಟರರ್ಸ್	Cooks/Caterers	21
ತಂಪು ಪಾನೀಯಗಳು	Cool Drinks	22
ಗುಡಿ ಕೈಗಾರಿಕೆ	Cottage industries	23
ಸೈಬರ್ ಕೆಫೆ	Cyber cafe	24
ಸೈಕಲ್ ರಿಪೇರಿ ಮಾಡುವುದು ಮತ್ತು ಬಾಡಿಗೆಗೆ ನೀಡುವುದು.	Cycle repairers and renting	25
ಹೈನುಗಾರಿಕೆ	Dairy	26
ವೈದ್ಯರು (ಆಯುರ್ವೇದ, ಯುನಾನಿ, ಹೋಮಿಯೋಪತಿ, ಸಿದ್ದ ಇತ್ಯಾದಿ)	Doctors (Ayurvedic, Unani Homeopathy, Sidda etc)	27
ವೈದ್ಯರು-ಅಲೋಪತಿ	Doctors-Allopathic,	28
ಬೊಂಬೆ ಉತ್ಪಾದಕರು	Doll Manufacturers	29
ವಾಹನ ಚಾಲಕರು	Drivers	30
ಡ್ರೈ ಕ್ಲೀನಿಂಗ್ / ಲಾಂಡ್ರಿ	Dry cleaning / Laundry	31
ಬಟ್ಟೆಗಳಿಗೆ ಬಣ್ಣ ಹಾಕುವುದು	Dyeing	32
ಎಲೆಕ್ಟ್ರಿಕಲ್ ಅಂಗಡಿ	Electrical shop	33
ಎಲೆಕ್ಟ್ರಿಷಿಯನ್ಸ್	Electricians	34
ಎಲೆಕ್ಟ್ರಾನಿಕ್ ಅಂಗಡಿ (ಕಂಪ್ಯೂಟರ್, ರೆಫ್ರಿಜರೇಟರ್, ವಾಷಿಂಗ್ ಮೆಷಿನ್, ಟಿ.ವಿ ಇತ್ಯಾದಿ)	Electronic shop (Computer, Fridge, Washing Machine, T.V etc.)	35
ಅಭಿಯಂತರರು	Engineers	36
ನ್ಯಾಯಬೆಲೆ ಅಂಗಡಿ	Fair price shop	37
ಫ್ಯಾನ್ಸಿ ಸ್ಟೋರ್	Fancy store	38

ಗೊಬ್ಬರ ಮಾರಾಟ	Fertilizer sales	39
ಉರುವಲು ಕಟ್ಟಿಗೆ ಅಂಗಡಿ	Fire wood Depot.	40
ಮೀನಿನ ಅಂಗಡಿ	Fish stall	41
ಮೀನುಗಾರಿಕೆ (ಒಳನಾಡು)	Fishing (Inland)	42
ಮೀನುಗಾರಿಕೆ (ಕಡಲು)	Fishing (Sea)	43
ಫ್ಲೋರಿಸ್ಟ್ (ಹೂವಿನ ಗುಚ್ಚ, ಬೊಕೆ ಮಾರಾಟ)	Florists	44
ಹಿಟ್ಟಿನ ಗಿರಣಿ	Flour Mill	45
ಹೂವು ಹಣ್ಣು ಮಾರಾಟ	Flower, Fruits vending	46
ಚಪ್ಪಲಿ ವ್ಯಾಪಾರ	Footwear mart	47
ಅರಣ್ಯ ಉತ್ಪನ್ನ ಸಂಗ್ರಹಣೆ &ಮಾರಾಟ	Forest Produce Gatherers & Sellers	48
ಪೀಠೋಪಕರಣ ತಯಾರಿಕೆ	Furniture manufacture	49
ಪೀಠೋಪಕರಣ ಮಾರಾಟ	Furniture vending	50
ಗ್ಯಾಸ್ ಏಜೆನ್ಸಿ	Gas Agency	51
ದಿನಸಿ ವ್ಯಾಪಾರ	Grain trade	52
ಹಾರ್ಡ್‌ವೇರ್ ಅಂಗಡಿ (ಕಬ್ಬಿಣ ಸೇರಿ)	Hardware shop (including Iron and steel)	53
ಬೀದಿ ವ್ಯಾಪಾರ	Hawkers	54
ಹೋಟೆಲ್ ಉದ್ದಿಮೆ (ವಸತಿ ಗೃಹ/ಉಪಹಾರ ಗೃಹ ಸೇರಿದಂತೆ)	Hotel Industries (Including Lodging and Restaurants)	55
ಐಸ್‌ಕ್ರೀಮ್ ಪಾರ್ಲರ್	Ice cream parlour	56
ಕೈಗಾರಿಕೋದ್ಯಮಿ(ಮಧ್ಯಮ/ಬೃಹತ್ ಪ್ರಮಾಣ)	Industrialist (medium/large scale)	57
ಕೈಗಾರಿಕೋದ್ಯಮಿ(ಸಣ್ಣ ಪ್ರಮಾಣ)	Industrialist (small scale)	58
ಇಂಟೀರಿಯರ್ ಡೆಕೋರೇಟರ್	Interior Decorator	59
ಒಡವೆ, ಆಭರಣ ಅಂಗಡಿ	Jewellery shop	60
ಸೀಮೆಎಣ್ಣೆ ವ್ಯಾಪಾರ	Kerosene sales	61
ವಕೀಲರು	Lawyers (Advocates)	62
ಮದ್ಯದಂಗಡಿ	Liquor shop	63
ಬೀಗ ರಿಪೇರಿ ಮಾಡುವವರು	Lock repairers	64
ಚಾಪೆ ಹೆಣೆಯುವವರು	Mat weavers	65
ಮಾಂಸದ ಅಂಗಡಿ	Meat stall	66
ಮೆಕಾನಿಕ್ಸ್	Mechanics	67
ಮಾಧ್ಯಮ (ಪತ್ರಿಕಾ /ಟಿ.ವಿ) / ಪತ್ರಕರ್ತರು.	Media (Print / Electronics-TV)/Journalist	68
ಔಷಧಿ ಅಂಗಡಿ	Medical shop	69
ಕಂಚುಗಾರರು (ಕಂಚು, ಹಿತ್ತಾಳೆ, ತಾಮ್ರ ಇತ್ಯಾದಿ)	Metal workers (Bronze, Brass, Copper etc)	70
ಹಾಲು ವ್ಯಾಪಾರ	Milk vending	71
ಗಣಿ ಕೆಲಸಗಾರರು	Mining workers	72
ಮೊಬೈಲ್ ಫೋನ್ ವ್ಯಾಪಾರ	Mobile Phone store	73
ನರ್ಸರಿ ಗಿಡ ಬೆಳೆಸುವವರು	Nursery Keepers	74
ದಾದಿಯರು / ಸೂಲಗಿತ್ತಿಯರು	Nursing/Midwife	75
ಬಣ್ಣ ಬಳಿಯುವವರು	Painters	76
ಪಾನ್ ಅಂಗಡಿ	Pan shop	77
ಲೇವಾದೇವಿ/ ಗಿರವಿ ಅಂಗಡಿ	Pawn brokers (Money lenders)	78
ಪೆಟ್ರೋಲ್ ಬಂಕ್	Petrol bunk	79
ಚಿಲ್ಲರೆ ಅಂಗಡಿ (ಪೆಟ್ಟಿಗೆ ಅಂಗಡಿ)	Petty Shop	80
ಫೋಟೊ ಫ್ರೇಮ್ ಕೆಲಸದವರು	Photo frame Workers	81
ಫೋಟೋ ಸ್ಟುಡಿಯೋ	Photo studio	82
ಹಂದಿ ಸಾಕಣೆ	Piggery	83
ಕೊಳಾಯಿ ರಿಪೇರಿ (ನಲ್ಲಿ ಜೋಡಿಸುವುದು)	Plumbers	84

ಕೋಳಿ ಸಾಕಾಣಿಕೆ	Poultry	85
ಮುದ್ರಣಕಾರ/ಬೈಂಡರ್ಸ್	Printers/ Binders	86
ರಿಯಲ್ ಎಸ್ಟೇಟ್ ವ್ಯವಹಾರಗಾರರು / ಅಭಿವೃದ್ಧಿಗಾರರು	Real Estate Agents / Developers	87
ಕಿರಾಣಿ ಅಂಗಡಿ	Retail Shop	88
ಅಕ್ಕಿ ಗಿರಣಿ (ಹಲ್ಲರ್ ಸೇರಿದಂತೆ)	Rice Mill (including Huller)	89
ಭದ್ರತಾ ಸೇವೆ	Security Service	90
ಕ್ರೀಡಾ ಸಾಮಾಗ್ರಿ ಮಾರಾಟಗಾರರು	Sports shop	91
ಸ್ಟೇಶನರಿ ಅಂಗಡಿ (ಪುಸ್ತಕ, ದಿನ ಪತ್ರಿಕೆ)	Stationery Shop (Books, Newspapers)	92
ಸಿಹಿತಿಂಡಿ ಅಂಗಡಿ	Sweet shop	93
ದರ್ಜಿ	Tailoring	94
ಟಾಂಗಾ ಓಡಿಸುವುದು	Tanga Service	95
ಹಚ್ಚೆ ಹಾಕುವುದು	Tattooing	96
ವರ್ತಕರು	Traders (Merchants)	97
ಸಾರಿಗೆ ಆಪರೇಟರ್‌ಗಳು (ಬಸ್/ ಟ್ಯಾಕ್ಸಿ ಸರ್ವೀಸ್ ಇತ್ಯಾದಿ)	Transport Operators (Bus, Taxi Service etc)	98
ಟ್ರಾವೆಲ್ ಏಜೆನ್ಸಿ,	Travel Agency	99
ಖಾಸಗಿ ಪಾಠ ಹೇಳುವವರು	Tutorial	100
ಬೆರಳಚ್ಚುಗಾರರು (ಖಾಸಗಿ)	Typist (Private)	101
ತರಕಾರಿ ಮಾರಾಟ	Vegetables vending	102
ಭಾಂಡೆ (ಪಾತ್ರೆ) ಸಾಮಾನು ಮಾರಾಟಗಾರರು	Vessels &Utensils venders	103
ಕಾವಲುಗಾರರು	Watchmen	104
ವೆಲ್ಡಿಂಗ್ / ಪ್ಯಾಬ್ರಿಕೇಟಿಂಗ್ ಇತ್ಯಾದಿ	Welding / Fabricating etc.	105
ಲೇಖಕರು	Writers	106
ಜೆರಾಕ್ಸ್	Xerox	107
ಇತರೆ	Others	000

ಕಾಲಂ 27ರ ಸಾಂಪ್ರಾದಾಯಿಕ ವೃತ್ತಿ/ಕುಲಕಸುಬುಗಳ ವಿವರ (ಕುಲಕಸುಬು ಯಾವುದು?)

Column-27 : Traditional Occupation Details

ಕುಲಕಸುಬು	Traditional Occupation	ಕೋಡ್ ಸಂ.
ಕೃಷಿ ಸಾಗುವಳಿ	Agriculture Cultivation	1
ಪಶು ಸಂಗೋಪನೆ	Animal Husbandry	2
ಕುಶಲಕರ್ಮಿಗಳು (ಲೋಹ)	Artisans (Metal)	3
ಬೈರಾಗಿ/ಸನ್ಯಾಸಿ	Ascetic mendicants	4
ಭವಿಷ್ಯ/ಶಕುನ/ಶಾಸ್ತ್ರ ಹೇಳುವವರು	Astrologers/fortune Tellers/Sooth Sayers	5
ಬಳೆ ಮಾರುವವರು	Bangle Sellers	6
ಕ್ಷೌರಿಕರು	Barbers	7
ಬುಟ್ಟಿ ಹೆಣೆಯುವವರು	Basket Makers	8
ಮಣಿ/ ಮುತ್ತು ಮಾರಾಟ	Beads/Pearls sellers	9
ಬೀದಿ ಆಟ	Beedi Ata - Tumbling	10
ವೀಳ್ಯೆದೆಲೆ ಮಾರುವವರು	Betel leaves sellers	11
ಕಮ್ಮಾರ	Black smith	12
ಕಟುಕರು/ಮಾಂಸ ಮಾರಾಟಗಾರರು/ಕಸಾಯಿ	Butchers & Meat sellers	13
ಬಡಗಿ	Carpenter	14
ಅಶ್ವದಳದವರು ಮತ್ತು ಅಶ್ವ ವ್ಯಾಪಾರಿಗಳು	Cavalry men & Dealers in Horses	15
ಹತ್ತಿ ಶುದ್ದಗೊಳಿಸುವವರು	Cotton Cleaners	16
ಹೈನುಗಾರಿಕೆ	Dairy	17
ದೇವದಾಸಿ/ಭವಿನ್	Devadasi/Bhavin	18

ಸ್ಮಶಾನದಲ್ಲಿ ಗುಂಡಿ ತೆಗೆಯುವವರು	Diggers of Burial Pits	19
ದೊಂಬರಾಟ	Dombara Ata - Acrobats	20
ದೆವ್ವ ಭೂತ ಬಿಡಿಸುವುದು	Exorcism Practice	21
ದೋಣಿ ನಡೆಸುವುದು/ಅಂಬಿಗ	Ferry Service/ Boat Rovers	22
ಹೂವು ಮಾರುವವರು	Flower sellers	23
ಚಪ್ಪಲಿ ಹೊಲಿಯುವವರು	Footwear Makers (Hand made)	24
ಹಣ್ಣು – ತರಕಾರಿ ಮಾರಾಟಗಾರರು	Fruit -Vegetable Sellers	25
ಮಾಲಿ/ತೋಟಗಾರ	Gardeners	26
ವಂಶಾವಳಿ ಹೇಳುವವರು	Genealogist	27
ಅಕ್ಕಸಾಲಿಗ	Goldsmiths	28
ಬೀಸುವ ಕಲ್ಲು ತಯಾರಕರು/ದುರಸ್ತಿ ಮಾಡುವವರು	Grinding Stone Makers/Menders	29
ಗೋಣಿ ನೇಯ್ಗೆ	Gunny Bag Weavers	30
ಹಗಲು ವೇಷ	Hagalu Vesha	31
ಹರಿಕಥೆ / ಪುರಾಣ ಹೇಳುವುದು/ಜಾನಪದ ಹಾಡುಗಾರಿಕೆ/	Harikatha / Folklore/folk songs Singing	32
ಬೀದಿ ವ್ಯಾಪಾರಿಗಳು	Hawkers / Peddlers	33
ಅಶ್ವ ಜೀನು ತಯಾರಿಸುವವರು (ದಿಗ್ವಾನ್ಸ್)	Horse Saddle makers (Digwans)	34
ಬೇಟೆಗಾರ/ಶಿಕಾರಿ/ಬಲೆಗಾರರು	Hunting/Shikari / Snares	35
ಇಂದ್ರಜಾಲಿತ ಗಾರುಡಿಗಾರರು (ಅಲೆಮಾರಿ)	Indrajalitha Garudigararu (Nomadic Itinerant jugglers)	36
ರಸ್ತೆ ಬದಿ ಇಸ್ತ್ರಿ ಮಾಡುವವರು	Ironing - Road side	37
ಜರತಾರಿ ನೇಯುವವರು	Jari (Zari) workers	38
ಜಾತಗಾರ (ಎಮ್ಮೆ ಕೂದಲು ಶೇವ್ ಮಾಡುವವರು)	Jatagara (Buffalo Hair Shavers)	39
ಜಟಕ, ಟಾಂಗ ಓಡಿಸುವವರು	Jataka, Tanga Operators	40
ಕಲಾಯಿ ಕೆಲಸಗಾರರು	Kalayi workers (Leach Appliers)	41
ಕರಡಿ ಕುಣಿಸುವವರು	Karadi Kunisuvavaru - Bear Charming	42
ಕರಗ/ದೈವ ನರ್ತನ/ನಲ್ಕಿ	Karaga/Deiva Narthana/Nalki	43
ಚಾಕು, ಚೂರಿ ತಯಾರಿಸುವವರು, ಕತ್ತರಿ ಚೂರಿ ಸಾಣಿ	Knife / Scissors sharpening and Cutlery	44
ಅರಗು ಕೆಲಸಗಾರರು	Lac (Aragu) Workers	45
ಕಂದೀಲು ಹಿಡಿಯುವವರು / ಪಂಜು ಮೆರವಣಿಗೆ ಸಹಾಯಕರು / ಚಿಮಣಿ ಬುಡ್ಡಿ ತಯಾರಕರು.	Lantern light showing / torch bearers / lamp makers	46
ಚಮ್ಮಾರಿಕೆ	Leather Work	47
ಸುಣ್ಣಗಾರರು	Lime Manufactures	48
ಸಂಗೀತಗಾರ/ಹಾಡುಗಾರ	Musicians and singers	49
ನಾದಸ್ವರ	Nadaswara	50
ನೀರಗಂಟಿ	Niraganti	51
ಗಾಣದ ಎಣ್ಣೆ ಉತ್ಪಾದನೆ	Oil Pressing	52
ಕುಂಬಾರರು	Potters	53
ಪುರೋಹಿತರು/ಪೌರೋಹಿತ್ಯ/ಅರ್ಚಕರು	Priests/Priesthood/Pujaries	54
ಧಾರ್ಮಿಕ ಭಿಕ್ಷುಗಳು/ಧಾರ್ಮಿಕ ಪಂಥ ಪ್ರಚಾರಕರು	Religious Mendicants/Religion Sectaries	55

ಚಿಲ್ಲರೆ ವ್ಯಾಪಾರಿಗಳು/	Retail venders	56
ಸಫಾಯಿ ಕರ್ಮಚಾರಿಗಳು	Safai karmachari/ Scavengers	57
ಉಪ್ಪಾರರು/ ಉಪ್ಪು ಉತ್ಪಾದಕರು	Salt Makers	58
ಶಿಲ್ಪಿ	Sculptor	59
ಕುರಿ / ಮೇಕೆ ಸಾಕಾಣಿಕೆ	Sheep / Goat rearing	60
ಹಾವಾಡಿಗ/ಗಾರುಡಿ	Snake Charmers	61
ಸೈನಿಕರು / ಯೋಧರು	Soldiers /Warriors	62
ಕಲ್ಲುಕುಟಿಗರು/ಕಲ್ಲು ಕೆತ್ತುವವರು	Stone Work/Stone cutters	63
ತಳವಾರ	Talawara	64
ತಮಟೆ ಬಾರಿಸುವವರು	Tamate Beaters	65
ಚರ್ಮ ಹದಗೊಳಿಸುವಿಕೆ	Tannery	66
ದೇವಸ್ಥಾನ ನಿರ್ವಹಣೆ/ದೇವಸ್ಥಾನ ಸೇವೆ	Temple Management/Temple Service	67
ದೇವಸ್ಥಾನದ ಸಂಗೀತಗಾರರು/ದೇವಸ್ಥಾನದಲ್ಲಿ ನಗಾರಿ ಬಾರಿಸುವವರು	Temple Musicians/Drum beating in Temple	68
ಸೇಂದಿ ಇಳಿಸುವುದು/ಮಾರಾಟಗಾರರು	Toddy Tapping & Vending	69
ತೊಗಲು ಬೊಂಬೆ ಆಟ ಆಡಿಸುವವರು	Togalu Bombe Ata	70
ತೋಟಿ	Toti	71
ವೈಶ್ಯವಾಣಿ ವೃತ್ತಿ	Vashyavani Profession	72
ಬೀದಿಯಲ್ಲಿ ತರಕಾರಿ, ಹಣ್ಣು, ಹೂವು ಮಾರುವವರು	Vegetable, fruits & flowers : Street Vendors	73
ಪಾತ್ರೆ ಮಾಡುವವರು (ತಾಮ್ರ ಮತ್ತು ಹಿತ್ತಾಳೆ)	Vessels Makers (Copper & Brass)	74
ಅಲೆಮಾರಿ ಕಮ್ಮಾರರು	Wandering Blacksmith (Gisade)	75
ಧೋಬಿ / ಅಗಸ	Washer man / Laundering	76
ನೇಕಾರರು (ರೇಷ್ಮೆ/ಹತ್ತಿ)	Weavers (Silk/Cotton)	77
ಮರ ಕೆತ್ತನೆ ಕೆಲಸ	Wood Carvers	78
ಉಣ್ಣೆ ಕಂಬಳಿ ತಯಾರಕರು/ಉಣ್ಣೆ ಕತ್ತರಿಸುವವರು	Woolen Blanket Makers/wool Cutters	79
ಕುಸ್ತಿಪಟುಗಳು/ಜಟ್ಟಿಗಳು	Wrestlers & Boxers (Jetty)	80
ಇತರೆ	Others	00

ಕಾಲಂ 28 Col. No.28

ಸದರಿ ಕಸುಬು ಮುಂದುವರೆದಿದೆಯೇ? (ಹೌದು-1 ಇಲ್ಲ-2) ನೀಡಿರುವ ಬಾಕ್ಸಿನಲ್ಲಿ ಬರೆಯುವುದು.

ಕಾಲಂ 29 **Col. No.29** **ಸದರಿ ಕುಲಕಸುಬುಗಳ ವಿವರ : ಸದರಿ ಕಸುಬಿನಿಂದ ಬಂದ ಕಾಯಿಲೆಗಳು** **(ಹಾಗೂ ಇತರೆ ಆರೋಗ್ಯ ಸಂಬಂಧಿತ ಕಾಯಿಲೆಗಳು)**	
ಚರ್ಮ ರೋಗ–Skin disease	01
ಕರುಳಿಗೆ ಸಂಬಂಧಪಟ್ಟ ವ್ಯಾಧಿಗಳು–Intestine related diseases	02
ಅಸ್ತಮಾ / ಅಲರ್ಜಿ /ಮೂರ್ಛೆರೋಗ–Asthama / allergy/ Epilepsy	03
ಮೂಳೆಗೆ ಸಂಬಂಧಪಟ್ಟ ರೋಗಗಳು(ಫ್ಲೋರೋಸಿಸ್ ಇತ್ಯಾದಿ) Bone related diseases (Florosis etc.)	04
ಕ್ಷಯ ರೋಗ–Tuberculosis	05
ಸಿಲಿಕೋಸಿಸ್ – Silicosis	06
ಅಂಧತೆ–Blindness	07
ಗುಣಪಡಿಸಲಾಗದ ದೀರ್ಘಾವಧಿ ಕಾಯಿಲೆಗಳು – Chronic diseases	08
ಇತರೆ ಕಾಯಿಲೆಗಳು –Other diseases	
ಕ್ಯಾನ್ಸರ್ –Cancer	09
ಮೂತ್ರಪಿಂಡ ಖಾಯಿಲೆ – Kidny related	10
ಹೃದಯ ಸಂಬಂಧಿತ –Heart related	11
ಯಕೃತ್ತು ಸಂಬಂಧಿತ –Liver related	12
ಕುಷ್ಟರೋಗ –Leprosy	13
ಪಾರ್ಶ್ವವಾಯು –Paralysis	14
ಹೆಚ್.ಐ.ವಿ ಏಡ್ಸ್ –HIV Aids	15
ಮಧುಮೇಹ –Diabeties	16
ಪಾರ್ಕಿನ್ಸನ್/ಡೆಮಿನ್ಷಿಯ –Parkinson / Dementia	17
ಯಾವುದೇ ಖಾಯಿಲೆ ಇಲ್ಲ –No Disease	18
ಇತರೆ – Others	00

ಕಾಲಂ 30 **Col. No.30**

ಅಸಂಘಟಿತ ಕ್ಷೇತ್ರದಲ್ಲಿಯ ದಿನಗೂಲಿ ಕೆಲಸಗಾರರು

ಕೃಷಿ / ತೋಟಗಾರಿಕೆ / ಪ್ಲಾಂಟೇಷನ್ Agriculture / Horticulture / Plantations	01
ಕಟ್ಟಡ ನಿರ್ಮಾಣ (ಕುಶಲತೆ ಇಲ್ಲದ) Building Construction (unskilled)	02
ಹೋಟೆಲ್ Hotel	03
ಕೂಲಿ Labour	04
ಬೀಡಿ ತಯಾರಿಕೆ Beedi Making	05
ಊದುಬತ್ತಿ ತಯಾರಿಕೆ Incense Stick Roling (Agarbathi)	06
ವರ್ಕ್‌ಶಾಪ್ Workshop	07
ಮನೆಗೆಲಸ Domestic work	08
ಕುಶಲಕರ್ಮಿ (Artisan)	09
ಮೀನುಗಾರಿಕೆ ಕೂಲಿ Fishery – Cooly	10
ಇತರೆ Others	00

ಕಾಲಂ 31 Col. No.31 ವಾರ್ಷಿಕ ಆದಾಯ	
ವ್ಯಕ್ತಿಯ ವಾರ್ಷಿಕ ಆದಾಯವನ್ನು ತೋರಿಸುವುದಕ್ಕಾಗಿ 8 ಸ್ಲ್ಯಾಬ್‌ಗಳನ್ನು ಮಾಡಿದ್ದು ಅವುಗಳನ್ನು 8 ಸಂಕೇತಗಳ ಮೂಲಕ ತೋರಿಸಲಾಗಿದೆ. ಅನ್ವಯಿಸುವ ಸಂಕೇತ ಸಂಖ್ಯೆಯನ್ನು ದಾಖಲಿಸುವುದು. ಆದಾಯದ ಗಣನೆಗೆ ಉಲ್ಲೇಖದ ಅವಧಿ (Reference Period) ಕಳೆದ ಒಂದು ವರ್ಷ ಆಗಿರುತ್ತದೆ.	
ರೂ.11,000ಕ್ಕಿಂತ ಕಡಿಮೆ –Less than Rs.11,000	01
ರೂ.11,000 ರಿಂದ 20,000 –Rs.11,000 to 20,000	02
ರೂ.20,001 ರಿಂದ 50,000 –Rs.20,001 to 50,000	03
ರೂ.50,001 ರಿಂದ 1,00,000 –Rs.50,001 to 1,00,000	04
ರೂ.1 ಲಕ್ಷದಿಂದ 2.5 ಲಕ್ಷದವರೆಗೆ –Rs.1 Lakh to 2.5 Lakhs	05
ರೂ.2.5 ಲಕ್ಷದಿಂದ 4.5 ಲಕ್ಷದವರೆಗೆ – Rs.2.5 Lakh to 4.5 Lakhs	06
ರೂ.4.5 ಲಕ್ಷದಿಂದ 10 ಲಕ್ಷದವರೆಗೆ – Rs.4.5 Lakh to 10 Lakhs	07
ರೂ.10 ಲಕ್ಷ ಮೇಲ್ಪಟ್ಟು –Above Rs.10 Lakhs	08
ಆದಾಯವಿಲ್ಲ –No Income	00

ಕಾಲಂ 32 Col. No.32 ಆದಾಯ ತೆರಿಗೆ ಪಾವತಿದಾರರೇ
ಹೌದು–1, ಇಲ್ಲ–2 Yes-1, No-2

